

*ನಾಟಕ

ಬಿಹದ್ದೂರ್ ಗಂಡ

ಪರ್ವತವಾಣಿ

ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ



26.12.2018		

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನದ
ಜ್ಞಾನ ಮಂದಿರಕ್ಕೆ ದಾವಣಗೆರೆ ವೇ|| ಬಿ. ಎಂ. ಚನ್ನಬಸಯ್ಯನವರು
ಸಮರ್ಪಿಸಿದ್ದು.
ತಾ. 20-1-1988 ನೇ ಬುಧವಾರ

ಬಹದ್ದೂರ್ ಗಂಡ

ಪರ್ವತವಾಣಿ



ವಿಶ್ವ ಕನ್ನಡ ಸಮ್ಮೇಳನ
14-3 ಎ, ನೃಪತುಂಗ ರಸ್ತೆ
ಬೆಂಗಳೂರು-560 002

Vishwa Kannada Sahitya Male

BAHADDUR GANDA Written by Parwathavani, 'Snehaprabha', 59, 6th Main Road, 5th Block, Jayanagar, Bangalore-560 041.
Tel : 42219

Published by K. Jayacharya, K.A.S., Additional Director, Directorate of Kannada & Culture (Vishwa Kannada Sammelana), 14/3 A, Nrupathunga Road, Bangalore-560 002.

1983. 5,000 Copies

ರಂಗಸ್ಥಳದಲ್ಲಿ ಪ್ರಯೋಗಿಸಲು :

"ಪರ್ವತವಾಣಿ, 59, 6ನೇ ಮುಖ್ಯ ರಸ್ತೆ, 5ನೇ ಬ್ಲಾಕು, ಜಯನಗರ, ಬೆಂಗಳೂರು - 560041—ದೂರವಾಣಿ—42219" ಇವರಿಂದ ಲಿಖಿತ ಅನುಮತಿ ಮುಂಚಿತ ಪಡೆಯಬೇಕು.

ರಾಯಲ್ಟಿ : 100 ರೂ.

ಬೆಲೆ : ಒಂದೂವರೆ ರೂಪಾಯಿಗಳು (1-50)

ಅಶ್ವಥ್ ಪ್ರಿಂಟರ್ಸ್
೪೪೩, ೪೪ನೇ ಅಡ್ಡರಸ್ತೆ, ಒಂದನೇ ಮುಖ್ಯರಸ್ತೆ
೮ನೇ ಹಂತ, ಜಯನಗರ, ಬೆಂಗಳೂರು-೫೬೦ ೦೮೨.

ಆರ್. ಗುಂಡೂರಾವ್
ಮುಖ್ಯಮಂತ್ರಿ



ವಿಧಾನಸೌಧ
ಬೆಂಗಳೂರು

ದಿನಾಂಕ: ೧೮-೯-೮೨

ಸಂಕಲ್ಪ...ಸಿದ್ಧಿ

ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚು ದೀರ್ಘವಾದ ಐತಿಹಾಸಿಕ ಪರಂಪರೆ ಕನ್ನಡ ನಾಡಿನದು. ಈ ಅವಧಿಯಲ್ಲಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳು ಸಮೃದ್ಧವಾಗಿ, ಶ್ರೀಮಂತವಾಗಿ ಬೆಳೆದು, ಈ ನಾಡಿನ ಇತಿಹಾಸವನ್ನು ಭವ್ಯವಾಗಿಸಿವೆ.

ಒಂದು ನಾಡಿನ ಅಂತಃಸತ್ವ ಅಡಕವಾಗಿರುವುದೇ ಅದರ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ. ಈ ನೆಲೆಗಟ್ಟು ಭದ್ರವಾಗಿರಬೇಕಾದರೆ ಸಾಂಸ್ಕೃತಿಕ ಪರಂಪರೆ ಉತ್ಕರ್ಷಕ್ಕೆ ಏರಲು ಔನ್ನತ್ಯ ಸಾಧಿಸಲು ನಿರಂತರವಾಗಿ ಪ್ರಯತ್ನಗಳು ನಡೆಯಬೇಕು.

ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಸೆದುಕೊಂಡಿದ್ದರೂ ಕನ್ನಡ ತನ್ನದೇ ಆದ ವಿಶಿಷ್ಟ ಸಂಸ್ಕಾರಗಳನ್ನು, ಸಂಸ್ಕೃತಿಯನ್ನು ಹೊಂದಿದೆ.

ಕನ್ನಡ ನಾಡಿನ ಭವ್ಯ ಪರಂಪರೆಯನ್ನು ಜಾಗತಿಕ ಹಿನ್ನೆಲೆಯಲ್ಲಿ ಚಿತ್ರಿಸಿ, ವಿಶ್ವಕ್ಕೆ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಸಾರುವ ಸದುದ್ದೇಶದಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನವನ್ನು ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ಕೇಂದ್ರವಾದ ಮೈಸೂರಿನಲ್ಲಿ ಏರ್ಪಡಿಸಿದ್ದೇವೆ. ಇದೊಂದು ಚರಿತ್ರಾರ್ಹವಾದ ಸಂದರ್ಭವೆಂದು ನನ್ನ ನಂಬಿಕೆ. ಈ ಚರಿತ್ರಾರ್ಹ ಸಮ್ಮೇಳನ ಸಾರ್ಥಕವಾಗಲು ಮತ್ತು ಬಹುಕಾಲ ಇದರ

ಸವಿ ನೆನಪು ಉಳಿಯಲು ಹಲವು ಯೋಜನೆಗಳನ್ನು ರೂಪಿಸಿದ್ದೇವೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಗೆ ಒದಗಿಸುವುದು ಈ ಯೋಜನೆಗಳಲ್ಲಿ ಒಂದು. ಇದರಂತೆ ಒಂದುನೂರಾ ಎರಡು ಕೃತಿಗಳನ್ನು, ಹದಿನೇಳು ಸಂಕಲನಗಳನ್ನು ಆಯ್ಕೆ ಮಾಡಿ ಪ್ರಕಟಿಸಿದ್ದೇವೆ. ಈ ಸಾಹಿತ್ಯ ಮಾಲಿಕೆಯಲ್ಲಿ ಕವನ, ಕಾದಂಬರಿ, ನಾಟಕ, ವಿಚಾರ ಸಾಹಿತ್ಯದ ಕೃತಿಗಳಲ್ಲದೆ ಕನ್ನಡ ಸಾಹಿತ್ಯದ ಸತ್ವವನ್ನು ವೈವಿಧ್ಯವನ್ನು ಪ್ರತಿಫಲಿಸುವ ವಿವಿಧ ಬಗೆಯ ಸಂಕಲನಗಳು ಇವೆ. ಅನ್ಯ ಭಾಷಿಕರಿಗೆ ಕನ್ನಡ ಸಾಹಿತ್ಯದ ಕಂಪು ಬೀರುವಂತೆ ಕೆಲವು ಆಯ್ದ ಕೃತಿಗಳ ಇಂಗ್ಲಿಷ್ ಭಾಷಾಂತರವನ್ನು ಕೂಡ ಪ್ರಕಟಿಸಿದ್ದೇವೆ. ಸಾಹಿತ್ಯ ಮಾಲೆಯ ಈ ಕೃತಿರತ್ನಗಳನ್ನು ಸಹೃದಯ ವಾಚಕರು ಓದಿ ಆಸ್ವಾದಿಸಿದರೆ ನಮ್ಮ ಶ್ರಮ ಸಾರ್ಥಕ; ಸಮ್ಮೇಳನ ಅರ್ಥಪೂರ್ಣವಾಗುವುದೆಂದು ನನ್ನ ಅಭಿಲಾಷೆ.

ಈ ಕೃತಿಗಳನ್ನು ಆಯ್ಕೆ ಮಾಡುವಲ್ಲಿ ಸಾಹಿತ್ಯ ಸಮಿತಿಯ ಪರಿಣತ ಸದಸ್ಯರು ಸಾಕಷ್ಟು ಶ್ರಮಿಸಿದ್ದಾರೆ. ಸುದೈವದಿಂದ ಕನ್ನಡದಲ್ಲಿ ಪ್ರತಿಭಾವಂತ ಲೇಖಕರ ಅಮೂಲ್ಯ ಕೃತಿಗಳಿಗೆ ಕೊರತೆ ಇಲ್ಲ. ಈ ಹಿನ್ನೆಲೆಯಲ್ಲಿ ನಿಶ್ಚಿತ ಸಂಖ್ಯೆಯಲ್ಲಿ ಸಾಹಿತ್ಯ ಕೃತಿಗಳನ್ನು ಆಯ್ಕೆ ಮಾಡುವುದು ಸುಲಭದ ಕೆಲಸವಲ್ಲ. ಆದರೂ ಬಹುಜನರಿಗೆ ಒಪ್ಪಿಗೆಯಾಗುವಂತೆ ಸಾಹಿತ್ಯ ಸಮಿತಿ ತನ್ನ ಕರ್ತವ್ಯ ನಿರ್ವಹಿಸಿದೆಯೆಂದು ಭಾವಿಸುತ್ತೇನೆ. ಈ ಸಮಿತಿಗೆ ಕೃತಜ್ಞತೆಗಳನ್ನು ಅರ್ಪಿಸುವುದು ನನ್ನ ಕರ್ತವ್ಯ. ಈ ಕೃತಿಗಳನ್ನು ಪ್ರಕಟಿಸಲು ಅನುಮತಿ ನೀಡಿ, ಲೇಖಕರು ಉಪಕರಿಸಿದ್ದಾರೆ. ಅವರ ಉದಾರ ಉಪಕಾರವನ್ನು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಈ ಗ್ರಂಥಮಾಲೆ ಕನ್ನಡಿಗರ ಮನಸ್ಸನ್ನು ತಟ್ಟಿ, ಹೃದಯಸ್ಪಂದನ ಮಾಡಿದರೆ ನಮ್ಮ ಸಂಕಲ್ಪಕ್ಕೆ ಸಿದ್ಧಿ ದೊರಕಿದಂತೆ. ಈ ಪ್ರಯತ್ನ 'ನ ಭೂತೋ' ಎಂದು ಹೆಮ್ಮೆಯಿಂದ ಹೇಳಬಲ್ಲೆ. ತಾಯಿ ಭುವನೇಶ್ವರಿ ಈ ಪ್ರಯತ್ನವನ್ನು ಹರಸಿ, ಮಂಗಳವುಂಟುಮಾಡಲೆಂದು ವಿನೀತ ಪ್ರಾರ್ಥನೆ ಸಲ್ಲಿಸುತ್ತೇನೆ.

ರಾ. ಗುಂಡೂರಾವ್

ಮುಖ್ಯಮಂತ್ರಿ

ಬಹದ್ದೂರ್ ಗಂಡ

ಪಾತ್ರಗಳು

ರಾಮರಾಯರು	— ರಾವ್‌ಸಾಹೇಬರು
ಸೀತಮ್ಮ	— ಇವರ ಹೆಂಡತಿ
ಸರೋಜ	— ಮಗಳು
ಶಾಂತ	— ಮಗಳು
ಪುಟ್ಟಾಜೋಯಿಸರು	— ಜೋಯಿಸರು
ಭೀಮು	— ಬಹದ್ದೂರ್ – !
ಚಂದ್ರು	— ಇವನ ಸ್ನೇಹಿತ
ಕೃಷ್ಣಪ್ಪ	— ಚಂದ್ರೂ ತಂದೆ
ತಿಪ್ಪಾಭಟ್ಟರು	— ಜೋಯಿಸ – ಭಟ್ಟರು
ನಾಣಿ	— ಭೀಮು ಚಂದ್ರೂ ಗೆಳೆಯ
ಸೀನಿ	— ರಾವ್‌ಸಾಹೇಬರ ಬಂಗಲಿ – ಮಾಣಿ
ಹೈದರ್ ಮತ್ತು ಸಿದ್ದ	— ಭೀಮೂ ಸೇವಕರು
ಶಂಕರ	— ಭೀಮೂ ಅಡಿಗೆಯವನು

—ಇತರರು—

ಬಹದ್ದೂರ್ ಗಂಡ

ದೃಶ್ಯ ೧

[ಬೆಂಗಳೂರು. ಜಯನಗರ. ರಾಮರಾಯರ ಬಂಗಲಿಯಲ್ಲಿ ನಡುಮನೆ. ಬೆಳಗ್ಗೆ. ಗಡಿಯಾರ ಎಂಟು ಹೊಡೆಯುತ್ತದೆ. ರಾಯರು ಪ್ರವೇಶಿಸಿ ಶಾಂತೂ ಕೋಣೆ ಯಲ್ಲಿ ಇಣಿಕಿ ಹಾಕಿ]

ರಾಮು—ಏನು ನಡೆಸುತ್ತಾ ಇದ್ದಾರೆ ಶಾಂತಾಬಾಯಿಯವರು ?

ಶಾಂತ—(ಒಳಗಿಂದ) ಮೆಟೀರಿಯಾ ಮೆಡಿಕಾ ಓದುತ್ತಾ ಇದ್ದಾರೆ. ಡ್ಯಾಡಿಯವರಿಗೆ ಏನಾಗಬೇಕಿತ್ತು ? ಎರಡನೇ ಡೋಸ್ ಕಾಫಿ – ? (ತಂದೆಯ ರಾಗದಲ್ಲೇ)

ರಾಮು—ತಮಗೆ ಆ ತೊಂದರೆಯ ಅವಶ್ಯಕತೆ ಇಲ್ಲ. ತಮ್ಮ ಮಮ್ಮಿ ಯವರು ಬೆರೆಸುತ್ತಾ ಇದ್ದರು, ತರುತ್ತಾರೆ. ತಮ್ಮ ಓದು ಮುಂದುವರಿಯಲಿ. (ಸರೋಜಳ ಕೋಣೆಯ ಕಡೆ ಹೋಗುತ್ತಾ) ಈ ಮಹಾಕಾಳಿ ಏನು ಮಾಡುತ್ತಿ ದ್ದಾಳೋ ?...ಬಾಗಿಲು ಅಗಳಿ ಹಾಕಿಕೊಂಡಿದೆ! ಎಂಟು ಗಂಟೆ ಹೊಡೆ ಯಿತು, ಡ್ಯಾನ್ಸ್ ಕ್ಲಾಸಿಗೆ ಹೋಗೊಲ್ಲವೋ ಇವತ್ತು ? (ಸೋಫಾ ಕಡೆ ಹೋಗುತ್ತಾ) ನರಿಮುಖ ನೋಡಿ ಎದ್ದಿರಬೇಕಿವತ್ತು. ಆ ಮುದ್ದು ಮಕ್ಕಳು! ಕೂತು ರೇಡಿಯೋ ಹತ್ತಿಸಿ, ಬೆಳಗ್ಗಿನ ಪತ್ರಿಕೆ ಕೈಗೆತ್ತಿಕೊಳ್ಳುವರು. ಸೀನಿ ಕಾಫಿ ತರುವನು) ಯಾಕೋ, ನಿನ್ನ ಕೈಯಲ್ಲೇ ಕಳುಹಿಸಿದರೇನೋ ಅಮ್ಮಾವರು ? ತಾ.

ಸೀನಿ—ಉ ಹು ಹು. ಇದು ನಿಮಗಲ್ಲ. ಸರೋಜಮ್ಮಾವರಿಗೆ.

ರಾಮು—ಏ...ಏ...ಇಲ್ಲಿ ಬಾರೋ ಇಲ್ಲಿ...ಕಣ್ಣಿಗೆ ಕಂಡದ್ದು ಗಟ್ಟಿ. ಅದನ್ನು ಇಲ್ಲಿ ಕೊಟು –

ಸೀನಿ—ಊ ಹು...ಇದನ್ನು ಅವರಿಗೆ ಕೊಟ್ಟು, ನಿಮಗೆ –

ರಾಮು—ಯಾಕೋ, ಅವಳು ಹೊಡಿಗಿಡಿಯುತ್ತಾಳೆ ಅಂತ ನಿನಗೆ ಹೆದರಿಕೆಯೇನೋ ? ನೀನು ಗಂಡಸು. ಹೆದರಬಾದದು ಹೆಂಗಸಿಗೆ. ತಾ. ತಾ. ನಾನಿದ್ದೇನೆ, ತಾ. (ಬಲವಂತದಿಂದ ಕಸಿದು, ಒಂದು ಗುಟುಕು ಚಪ್ಪರಿಸಿ) ಭಲೆ...ಭಲೆ ...ಆದರೆ, ಸೀನೀ, ನೀನು ಹೆದರಿದ್ದೂ ತಪ್ಪಲ್ಲ. ಅವಳನ್ನು ನಾನು ಹೆಂಗಸು ಅಂದೆ. ಅಲ್ಲ. ಅವಳು ಹುಲಿ, ಹೆಬ್ಬುಲಿ. ಬೇಗ ಓಡಿ ಇನ್ನೊಂದು ಬಟ್ಟಲು ಬೆರೆಸಿ ತಂದುಬಿಡು ... (ಸೀನಿ ಓಡುತ್ತಿರಲು) ಸೀನಿ, ಸೀನಿ, ಮರೆತಿದ್ದೆ... (ಓಂಬಾಲಿಸಿ, ಖಾಲಿ ನಶ್ಯದ ಡಬ್ಬಿ ಅವನಕೈಗಿಟ್ಟು) ಎದುರು ಅಂಗಡಿಗೆ ಹೋಗಿ –

ಸೀನಿ—ತಂದು ಕೊಡುತ್ತೀನಿ. ಸರೋಜಮ್ಮಾವರಿಗೆ ಕಾಫಿ ಕೊಟ್ಟು –

ರಾಮು—ತ್ಸುತ್ಸುತ್ಸು..ಮೂಗು ಅಷ್ಟು ಹೊತ್ತು ತಡೆದುಕೊಂಡಿರೊಕ್ಕೆ ಸಾಧ್ಯವೇನೋ ?...ಬಾ, ಬಾ, ಬಾ...ರಸ್ತೆ ದಾಟಿದರೆ ಅಂಗಡಿ, ಹೋದ, ತಂದ...(ತಳ್ಳಿ) ಓಡು, ನಾನು ಹೇಳುತ್ತೀನಿ...(ವಿಧಿಯಿಲ್ಲದೆ ಅವನು ಓಡಲು) ಜಾಣ...ಜಾಣ...ಹಾಳು ದುರಭ್ಯಾಸಗಳು ! ಆಳು ಕಾಳುಗಳಿಗೂ ದಮ್ಮಯ್ಯ ಅನ್ನಬೇಕು. (ಪೇಪರ್ ಓದುತ್ತಾ ಕಾಫಿ ಕುಡಿಯುವರು, ಸೀತಮ್ಮ ಕಾಫಿ ತರುತ್ತಿರುವುದನ್ನು ಕಂಡು, ತಾವು ಬರಿದು ಮಾಡಿದ ಕಪ್ಪು ಸಾಸರ್ರನ್ನು ರೇಡಿಯೋ ಹಿಂದೆ ಅವಿಸಿಡುವರು)

ಸೀತ—(ಪ್ರವೇಶಿಸಿ) ಶಾಂತೂ, ನೀರುಮನೆ ಬಿಡುವಿದೆ, ನೀನು ಮೈ ತೊಳೆದುಕೊಳ್ಳುವುದಾದರೆ ಹೋಗು.

ಶಾಂತ—(ಒಳಗಿಂದ) ಸರೋಜಂದು ಮೊದಲು ಆಗಲಿ, ಅಮ್ಮಾ. ಇಲ್ಲದಿದ್ದರೆ, ನಾನು ಸೋಪು ಹಚ್ಚಿಕೊಳ್ಳುವ ಹೊತ್ತಿಗೆ ಬಂದು ಬಾಗಿಲು ಒಡೆಯುತ್ತಾಳೆ !

ರಾಮು— (ಕೂತಲ್ಲಿಂದ, ರೇಡಿಯೋ ನಿಲ್ಲಿಸಿ, ಗಟ್ಟಿಯಾಗಿ) ನೋ, ನೋ, ನೋ...ಆ ಭಯ ನಿನಗೆ ಬೇಡ. ಅವಳು ಆಗಲೇ ಮೈ ತೊಳೆದುಕೊಂಡಾಯಿತು. ಪೂರ್ತಿ ಸೋಪು ಬೇಕಾದರೂ ಕರಗಿಸು, ನೋ ಅವಸರ.

ಸೀತ—ಅಶ್ಯ, ಇದೇನು ಬಯಲುನಾಟಕದವರ ಹಾಗೆ ಹೀಗೆ ಕೂಗುತ್ತೀರಿ ? ಸರೋಜನಿಗೆ ಕೇಳಿಸಿದರೆ –

ರಾಮು—ಹೌದು, ಹೌದು. ಅವಳು ಬಾಗಿಲು ಕಿಂಡಿಗೆ ಕಿವಿಯಿಟ್ಟು ಕೇಳುತ್ತಿದ್ದರೂ ಇರಬಹುದು. ಥ್ಯಾಂಕ್ ಯೂ, ಸೀತಾ.

ಸೀತ —(ಕಾಫಿ ಬಟ್ಟಲನ್ನು ಟೀಪಾಯಿಯ ಮೇಲಿಡುತ್ತಾ) ಇದೇನು ಬಂತಿವತ್ತು ಬೆಳಗಾಗಿ, ಸೀತ ? ಉಷ್ಣ ?

ರಾಮು—ಬೆಳಗಾಗಿ ಏನೇ ? ಮಧ್ಯಾಹ್ನ ಏನೇ ? ಸಂಜೆ, ರಾತ್ರಿ, ನೀನು ನನ್ನ ಹೋಲ್ ಟೈಂ ವೈಫ್ ಅಲ್ಲವೇನೆ ?

ಸೀತ—ಸಾಕು ನಿಲ್ಲಿಸಿ ನಿಮ್ಮ ಸರಸ ಸಾಮ ದಾನ – ರೇಡಿಯೋ ಹಾಕಿಕೊಂಡು ಪೇಪರ್ ಹಿಡಿದುಕೊಂಡು ಕೂತುಕೊಂಡು ಬಿಟ್ಟಿರೋ ಇಲ್ಲವೋ ಸುಮ್ಮನೆ, ಬೆಳಗಾಗೆದ್ದು ?

ರಾಮು—ಇನ್ನೇನು ಮಾಡಬೇಕೇ ನಾನು ?

ಸೀತ—ದೇವರೇ ಗತಿ. ಮನೆಯಲ್ಲಿ ಹೆಣ್ಣುಮಕ್ಕಳನ್ನು ಹೇಸರಗತ್ತೆಗಳ ಹಾಗೆ ಬೆಳೆಸಿಟ್ಟುಕೊಂಡು –

ರಾಮು—ಓಹೋ, ಅವರ ಮದುವೆ – ? ತೊಗೋ ಈ ಪೇಪರ್ರನ್ನ- ಏನೂ ಉಪಯೋಗವಿಲ್ಲ.

ಸೀತ—ಏನೂ ?

ರಾಮು—ನಾನು ಅಷ್ಟು ಪುಟಗಳನ್ನೂ ಒಂದು ಅಂಗುಲವೂ ಬಿಡದೆ ನೋಡಿದೆ. ಯಾರಿಗೂ ಬೇಕಾಗಿಲ್ಲವಂತೆ.

ಸೀತ—ಏನ್ರೀ ?

ರಾಮು—ಹೆಣ್ಣುಗಳು, ಯಾವ ಗಂಡಿಗೂ ಯಾವ ಹೆಣ್ಣೂ ಬೇಡವೋ ಏನೋ, ಮ್ಯಾಟ್ರಿಮೋನಿಯಲ್ ಕಾಲಂ ಕಾಲಮ್ಮೇ ಖಾಲಿ ! ನೋಡು ಬೇಕಾದರೆ – (ಪೇಪರ್ ನೀಡಲು)

ಸೀತ--(ಕಿತ್ತೆಸೆದು) ನಿಮಗೆ....ನಿಮಗೆ....ತಮಾಷೆ ಆಗಿಹೋಯಿತು. ನಾನು ತಲೆ ಎತ್ತಿಕೊಂಡು ಓಡಾಡುವ ಹಾಗಿಲ್ಲ ಬೀದಿಯಲ್ಲಿ.

ರಾಮು—ಬೇಡ, ತಗ್ಗಿಸಿಕೊಂಡೇ ಓಡಾಡಿದ...

ಸೀತ—ಅಕ್ಕಪಕ್ಕದವರು ಏನು ಅಂದುಕೊಳ್ಳುತ್ತಿದ್ದಾರೆ ಗೊತ್ತೇನು ?

ರಾಮು— ಅಂದುಕೊಳ್ಳಲಿ ಬಿಡೇ. ಅನ್ನೋಕ್ಕೇನು – ? ಈಗ ಅವರ ಮನೆ ಮಕ್ಕಳಿಗೆಲ್ಲಾ ಮದುವೆ ಮಾಡಿದ್ದಾರಂತೋ ? ಆ...ಆ...ಪ್ರಿಡ್ ರೋಸ್ ಗಿಡದ ಮನೆ ವನಜಾಕ್ಷಮ್ಮನ ಮಗಳು, ಗಿರಿಜ ! ಮೊನ್ನೆ, ನಾನೇ ನೋಡಿದೆ, ದೋಟಿ ಇಲ್ಲದೆ, ಹಾಗೇ ಕೈಯಿಂದಲೇ ಸಂಪಿಗೆ ಹೂ ಕಿತ್ತುತ್ತಾ ಇದ್ದಳು ! ಆ ಜಿರಾಫೆಯನ್ನು ಮೊದಲು ಅತ್ತೆಯ ಮನೆಗೆ ರವಾನಿಸಿ ಆಮೇಲೆ ಮಾತಾಡು ಅನ್ನೇ –

(ಶಾಂತೂ ಹೆಗಲ ಮೇಲೆ ಟೌಲು ಹಾಕಿಕೊಂಡು ಪ್ರವೇಶಿಸಿ–ನೀರುಮನೆ ಕಡೆ ಹೋಗುತ್ತಾ—"ಬರುತಿಹನೇ ನೋಡೇ ವಾರಿಜಲೋಚನ" ಗುನುಗುತ್ತಾ—ನಿಷ್ಕ್ರಮಿಸುವಳು)

ಸೀತ—ಅಲ್ರೀ, ಅವರಿವರ ಪಾಡು ನಮಗೆ ಯಾಕೆ ?...ಆ ಪುಟ್ಟಾ ಜೋಯಿಸರು...ಬಂದು ಒಂದು ವಾರ ಆಯಿತು. ಅದು ಯಾವುದೋ ಮೈಸೂರಿನ ವರ ಅಂದಿದ್ದರು...ಏನಾಯಿತು, ಎತ್ತ, ಅಂತ ವಿಚಾರಿಸುವುದು ಬಿಟ್ಟು.– (ಸೀನಿ ಪ್ರವೇಶಿಸುವನು)

ರಾಮು—ಓ...ತಂದೆಯೇನೋ ? ತಾ, ತಾ, ಗುಡ್ ಬಾಯ್...

ಸೀತ—ಏನೋ–

ರಾಮು—ನಶ್ಯವೇ. ಡಬ್ಬಿ ಖಾಲಿ ಆಗಿತ್ತು. ತಂದು ಕೊಟ್ಟ. ನೀನು ಓಡಪ್ಪ, ನಿನ್ನ ಕೆಲಸ ನೀನು ಮಾಡಿಕೋ.

ಸೀತ—ಸೀನೀ – ಸರೋಜಂಗೆ ಕಾಫಿ ಕೊಟ್ಟೆಯೇನೋ ?

ಸೀನಿ—ನಾನು...ನಾನು... (ರಾಯರ ಕಡೆ ತಿರುಗಲು)

ಸೀತ—ಯಾಕೋ ? "ಕೊಟ್ಟೆ", "ಇಲ್ಲ", ಅಂತ ಹೇಳೊಕ್ಕೆ – (ಸೀನಿ ಮತ್ತು ರಾಯರು ಒಬ್ಬರನ್ನೊಬ್ಬರು ನೋಡುತ್ತಿರುವುದನ್ನು ನೋಡಿ) ಓ... (ರಾಯರಿಗೆ) ನೀವು ಕಸಿದುಕೊಂಡಿರಾ ?

ರಾಮು—ಊಹು, ಇಸಗೊಂಡೆ.

ಸೀತ— (ಸೀನಿಗೆ) ಯಾಕೋ ಕೊಟ್ಟೆ ?

ರಾಮು—ಇಲ್ಲ, ಇಲ್ಲ, ಕಸಿದುಕೊಂಡೆ. ನಾನೇನೇ ಮಾಡಲಿ? ಕಣ್ಣೆದುರಿಗೆ ಕಾಣಿತು. ನೀನೂ ತರುವ ತನಕ ತಡೆಯೊಕ್ಕಾಗಲಿಲ್ಲ. ಸೀನೀ, ಆದ್ದಾಗಿ ಹೋಯಿತು. ನೀನು ಹೋಗಪ್ಪಾ, ಬೇಗ ಒಂದು ಬಟ್ಟಲು ಬೆರೆಸಿ ಕೊಂಡು ಬಾ...ಹೋಗು...(ಸೀನಿ ಹೋಗುತ್ತಿರಲು)

ಸೀತ—ಸೀನಿ !...ಇಲ್ಲಿ ಬಾರೋ ಇಲ್ಲಿ.

ರಾಮು—ಯಾಕೇ ?

ಸೀತ—(ರಾಯರಿಗೆ ತಂದಿದ್ದನ್ನು ಟೀಪಾಯಿಯಿಂದ ಎತ್ತಿ ಸೀನಿಯ ಕೈಗಿಟ್ಟು) ತೊಗೊಂಡು ಹೋಗಿ ಕೊಡೋ ಅವಳಿಗೆ. (ಅಡಿಗೆ ಮನೆಗೆ ನಿಷ್ಕ್ರಮಿಸುತ್ತಾ) ಬೇರೆ ಬೆರೆಸಿಕೊಂಡು ತರುವುದಂತೆ ! (ಮರೆಯಾಗುವರು)

ರಾಮು—ಸೀನಿ, ತಲೆ ಇದ್ದರೆ ಸಾಲದು. ಒಳಗೆ ಬುದ್ಧಿಯೂ ಇರ ಬೇಕು. ನೋಡಿದೆಯಾ, ಅಮ್ಮಾವರು – ನೀನು ಅದನ್ನು ತೊಗೊಂಡು ಹೋಗಿ ಕೊಡು ಅವಳಿಗೆ...ನಾನು...(ಅಡಿಗೆ ಮನೆ ಕಡೆ ಹೋಗುತ್ತಾ) ನಾನು – ಅಲ್ಲೇ ಹೋಗಿ –

ಶಾಂತ (ಮೈ ತೂಳೆದು ಹಿಂತಿರುಗಿ) ಓ, ಏನ್ ಆಗಲೇ ಅಡಿಗೆ ಮನೆ ಕಡೆ ಸವಾರಿ ? ಪೂರನೆ ಡೋಸಿಗೆ - (ನಕ್ಕು) ಬೆಸ್ಟ್ ಆಫ್ ಲಕ್... (ನಕ್ಕು ತನ್ನ ಕೋಣೆ ಸೇರುವಳು. ರಾಯರೂ ಅಡಿಗೆ ಮನೆ ಕಡೆ ಮರೆಯಾಗುವರು. ಸೀನಿ ಸರೋಜಳ ಕೋಣೆ ಬಳಿ ನಿಂತು)

ಸೀನಿ—ಅಮ್ಮಾ ! ಅಮ್ಮಾ ! (ಬಾಗಿಲು ಬಡಿದು) ಅಮ್ಮಾ !

ಸರು—(ಒಳಗಿಂದ) ಯಾರೋ ಅದು ಬಾಗಿಲ ಹತ್ತಿರ ಬಾಯಿ ಬಡಿದು ಕೊಳ್ಳುತ್ತಿರುವುದು ?

ಸೀನಿ—ನಾನಮ್ಮಾ ಸೀನಿ. ಕಾಫಿ ತಂದಿದ್ದೀನಮ್ಮ.

ಸರು—(ಒಳಗಿಂದ) ಎಷ್ಟೋ ಗಂಟೆ ಈಗ ? ಎಷ್ಟು ಹೊತ್ತಿಗೋ ತರುವುದು ?

ಸೀನಿ—ನಾನು ಆಗಲೇ ತಂದಿದ್ದೆ, ಅಮ್ಮಾ. ರಾಯರು ... ಸಕ್ಕ ತರೊಕ್ಕೆ...ಅಂಗಡಿಗೆ ಕಳುಹಿಸಿದರು,

ಸರು—(ಒಳಗಿಂದ) ಅಮ್ಮಾವರು ಇನ್ನೇನಾದರೂ ತರೊಕ್ಕೆ ಇನ್ನೆಲ್ಲಿಗಾದರೂ ಕಳುಹಿಸಬಹುದು. ಅದನ್ನೂ ತಂದುಕೊಟ್ಟು ಆಮೇಲೆ ಬಾ, ಹೋಗು ! ನನಗೆ ಬೇಡ ಕಾಫಿ.

ಸೀನಿ—ನಾಳೆಯಿಂದ ಬೇಗ ತರುತ್ತೇನಮ್ಮ.

ಸರು—(ಬಾಗಿಲು ತೆಗೆದು, ಚಟ್ಟನೆ - ಬಂದು ಅಣಕಿಸುತ್ತಾ) "ನಾಳೆಯಿಂದ ಬೇಗ ತರುತ್ತೇನಮ್ಮ" – ನಾಳೆ ತೊಗೊಂಡು ಬಾ. ನಾಳೆ ಇಸಗೊಳ್ಳುತ್ತೇನೆ. ಇವತ್ತು ಬೇಡ, ಹೋಗು.

ಸೀನಿ—ಇಲ್ಲಮ್ಮಾ...

ಸರು—ಅಯ್ಯೋ, ಪ್ರಾರಬ್ಧವೇ, ನಾನು ಬೇಡ ಬೇಡ ಅಂತ ಬಡಿದುಕೊಳ್ಳುತ್ತಿದ್ದರೆ – (ತಟ್ಟೆ ಬಟ್ಟಲು ಕಸಿದು - ಸೀನಿ ಬೆನ್ನಿಗೆ ಏಟು ಬಾರಿಸುತ್ತಾ) ಇಲ್ಲಮ್ಮಾ ಬೆಲ್ಲಮ್ಮಾ ಅಂತ ಹಟ ಮಾಡುತ್ತೀಯಾ ?

ಸೀನಿ—ಅಯ್ಯೋ, ಅಮ್ಮಾ –

(ಸೀತಮ್ಮ, ರಾಯರು, ಶಾಂತು - ಕಾಣಿಸಿಕೊಳ್ಳುವರು)

ಸರು—ತೊಗೋ ನಿನ್ನ ಕಾಫಿ (ಸೀನಿಯ ತಲೆಯ ಮೇಲೆ ಅಭಿಷೇಕಿಸುವಳು)

ರಾಮು—ಲೇ ಲೇ -
ಶಾಂತ—ಸರೂ–
ಸೀತ—ಲೇ

ಸರು—ನಿನ್ನ ಕಪ್ಪು - (ಗೋಡೆಗೆಸೆದು) ನಿನ್ನ ಸಾಸರು (ಸೀನಿ ತಲೆಗೆ ಕುಟ್ಟುವಳು)

ಸೀನಿ—ಅಯ್ಯೋ, ಅಯ್ಯೋ, ಅಮ್ಮಾ...

ಶಾಂತ—ಲೇ, ಲೇ, ಅವನ್ನ ಯಾಕೆ ಹಾಗೆ ಚಚ್ಚುತ್ತೀಯೋ ?

ಸರು—ನಿನ್ನ ಯಾರೇ ಕೇಳಿದರು ? ನಿನ್ನ ಯಾರು ಕರೆದರೇ ಇಲ್ಲಿ ?

ಸೀತ—ಅವನ ತಲೆ ಒಡೆದಿದ್ದರೆ ಏನು ಗತಿಯೇ ?

ಸರು—ಏನು ಗತಿ ? ಒಡೆದಿದ್ದರೆ ಇಲ್ಲಿ ಕೂಡಿಸೊಕ್ಕೆ ಹುಟ್ಟಿದಾಳಲ್ಲ ನಿನ್ನ ಮುದ್ದು ಮಗಳು...ಲೇಡಿ ಡಾಕ್ಟರು –

ಸೀತ—ಹಾಗಂತ ಆ ಸಣ್ಣ ಹುಡುಗನ್ನ ತಲೆ -

ಸರು—ಸಣ್ಣ ಹುಡುಗ ! ಬೆಳಗ್ಗೆ ಎಂಟು ಗಂಟೆ ಬಡಿದರೂ ನನಗೆ ಕಾಫಿಗೆ ಗತಿಯಿಲ್ಲ—ಅವನ ಮೇಲೆ ಬಂದುಬಿಡಿತು ಕನಿಕರ – "ತಲೆ ಒಡೆದಿದ್ದರೆ ಏನು ಗತಿಯೋ" ಅಂತ. ತಡಿ ಒಡೆದೇ ಬಿಡುತ್ತೇನೆ. ಏನು ಗತಿಯೋ ನೋಡೋಣ. (ಹೊಡಿಯಲು)

ಸೀತ—(ಬಿಡಿಸುತ್ತಾ) ಲೇ, ಲೇ, ಸಾಕೇ, ಸಾಕೇ - ಲಕ್ಷಣವಾಯಿತು.

ಸರು—ಅವಲಕ್ಷಣವೇ ಆಗಲಿ.

ಶಾಂತ—ಸಾಕು ಸುಮ್ಮನಿರೇ, ಅಮ್ಮ ಅನ್ನಿಸಿಕೊಂಡವಳು ಅಷ್ಟು ಕೂಡ ಅನ್ನಕೂಡದೇನೋ ?

ಸರು—ಓ ಹೋ ! ನಿಮ್ಮ ಅಮ್ಮನ ಲಾಯರೀ ಬೇರೆಯೋ ನೀನು ! (ತಾಯಿಯನ್ನು ನೋಡುತ್ತಾ) ಎಷ್ಟು ಕೊಟ್ಟಿದ್ದಾಳೋ ಫೀಸು, ವಕೀಲಿಗೆ - ನಾಲ್ಕು ಚಮಚ ಮೇಲ್‌ತುಪ್ಪ, ಆರು ಸೌಟು ಗಟ್ಟಿ ಮೊಸರು – ?

ರಾಮು—ನಿನಗೇನೇ ಕಡಿಮೆ ಮಾಡಿರುವುದು ರೋಗ ?

ಸರು—ರೋಗ ? ಯಾರಿಗೆ ರೋಗ ? ನನಗೆ ಅಂತ ತರುತ್ತಿದ್ದ ಮೊದಲನೆ ಡೋಸ್ ಕಾಫಿಯನ್ನು ಕಸಿದುಕೊಂಡು, ಮೂಗಿಗೆ ತುರುಕಿ ಕೊಳ್ಳೊಕ್ಕೆ ನಶ್ಯಕ್ಕೆ ಬಂದ ಅವಸರದ ರೋಗ ನನಗೇ !

ರಾಮು—ಲೇ, ಸೀತಾ, ಅವಳು ಬಾಗಿಲು ಕಿಂಡಿಯಲ್ಲಿ ನೋಡುತ್ತಾ ಇದ್ದಳೇ !

ಸರು—ಅಷ್ಟೇ ಅಲ್ಲ. ಕೇಳುತ್ತಲೂ ಇದ್ದೆ – ಕಿರಿಚಾಟ–

ರಾಮು—ಕಿರಿಚಾ - ಲೇ, ನಾನು ಕಿರಿಚುತ್ತಿದ್ದೆನೇನೇ ?

ಸರು—ಅರಚುತಿದ್ದಿರಬಹುದು.

ರಾಮು—ಮುಚ್ಚು ಬಾಯಿ...ನನಗೆ ಕೋಪ ಬಂತು ಅಂದರೆ ಬಲಿ ಹಾಕಿ ಬಿಟ್ಟೇನು –

ಸೀತ—ಅಯ್ಯೋಯ್ಯೋ –

ಶಾಂತ—ಅಪ್ಪಾ

ಸರು—ಆ ಹಾ ಹಾ ಹಾ ಹಾ ಪ - ಬಲಿ ಹಾಕಿ ಬಿಟ್ಟೀಯೇ! ಹಾಕುವ ಭರಾಟೆಯಲ್ಲಿ ಕೈಗಿಯ್ ಉಳುಕಿಹೋದೀತು, ನೋಡಿಕೋ...ನಾನೇನು ಎಳೆ ಕೂಸಲ್ಲ, ಹೆದರಿಕೊಳ್ಳೊಕ್ಕಿಲ್ಲಿ.

ರಾಮು—ಎಳೇ ಕೂಸು? ಯಾರೇ ನಿನ್ನನ್ನ ಎಳೇಕೂಸು ಅಂದುಕೊಂಡಿರುವವರು? ಕೊಟ್ಟೆಕೋಣ, ಕೊಟ್ಟೆಕೋಣ ಬೆಳೆದ ಹಾಗೆ ಬೆಳೆದಿದ್ದೀಯಾ!

ಸರು—ಹೌದು. ನಾನು ಕೊಟ್ಟೆಕೋಣನೇ. ನೋಡು, ನಿನಗೆ ಅಷ್ಟು ಬಲಿ ಹಾಕಬೇಕು ಅನ್ನಿಸಿದ್ದರೆ, (ಓಡಿ ಶಾಂತೂ ತೋಳು ಹಿಡಿದು) ಟ್ರೈ ಇಲ್ಲಿ. ತೆಳ್ಳಗಿದೆ ಲಿಲ್ಲಿ. ಕೈಕಾಲು ಮುರಿಯುವುದು ಖಂಡಿತ.

ಶಾಂತ—ಬಿಡೇ.

ಸರು—ಅಪ್ಪಾ, ಕೊಟ್ಟೆ ಕೋಣ ಬೊಗಳೊಲ್ಲ. ಬೊಗಳುವುದು ನಾಯಿ.

ರಾಮು—ಹೌದು. ಕಾ ಕಾ ಅನ್ನುವುದು ಕಾಗೆ...(ಹೆಂಡತಿಗೆ)ನೋಡೇ, ನೋಡೇ, ಅವಳು ಹೆಂಡ ಕುಡಿದವಳ ಹಾಗೆ –

ಸರು—ಹೆಂಡ ಅಲ್ಲ ಗಾಂಜ –

ರಾಮು—ಅದರ ಅಪ್ಪ!

ಸೀತ—ಅಯ್ಯೋ, ನಿವಾದರೂ ಸುಮ್ಮನಿರಬಾರದೇ?

ರಾಮು—ಏನು ಸುಮ್ಮನಿರುವುದೇ? ಏನು ಸುಮ್ಮನಿರುವುದು ಅನ್ನುತ್ತೀನಿ? ಅವಳವಳವಳು -

ಶಾಂತ—ಹೋಗಲಿ ಬಿಡಪ್ಪ, ಕಾಡಬೆಕ್ಕಿನ ಸಹವಾಸ. ಮಾತೆತ್ತಿದರೆ ಶಿರ್ ಅಂತ ಬೀಳತ್ತೆ ಮೈ ಮೇಲೆ.

ಸೀತ—ಶಾಂತೂ - !

ರಾಮು—ಲೇ - !

ಸರು—(ದುರುದುರು ನೋಡಿ ಬುಸುಗುಟ್ಟಿ) ಏನು? ಏನಂದಿ? (ಹೆಜ್ಜೆಯ ಮೇಲೆ ಹೆಜ್ಜೆಯಿಡುತ್ತಾ) ಏನೇ ಅಂದಿದ್ದು ನೀನು? (ಶಾಂತೂ ಗಾಬರಿಯಿಂದ ಹಿಂದೆ ಹಿಂದೆ ಸರಿದು ಗೋಡೆಗೆ ಒರಗಿ ಸಿಕ್ಕಿಹಾಕಿಕೊಳ್ಳುವಳು)

ರಾಮು—ಲೇ ಲೇ – !

ಸೀತ—ಸರೋಜ !

ಸರು—ಯಾರನ್ನೇ ನೀನು ಕಾಡುಬೆಕ್ಕು ಅಂದಿದ್ದು ? (ತಟ್ಟನೆ ನುಗ್ಗಿ ಶಾಂತೂ ಮುಂದಲೆ ಹಿಡಿದು ಜಗ್ಗಿಸುತ್ತಾ) ಯೂ, ಯೂ ಊರಶಿಂಗಳೀಕಾ !

ಶಾಂತ—ಅಯ್ಯೋಪ್, ಅಯ್ಯೋಪ್, ಹೋಯಿತೂ, ಬಿಡೇ.

ರಾಮು—ಸೀತಾ -

ಸೀತ—(ನುಗ್ಗಿ ಸರೋಜಳನ್ನು ಎಳೆಯುತ್ತಾ) ಬಿಡೇ ಪಿಶಾಚೀ - ಏನು ಬಂತೇ ನಿನಗಿವತ್ತು ?

ಸರು — (ಶಾಂತೂನ ನುಂಗುವಂತೆ ನೋಡುತ್ತಾ — ಏದುಸಿರು ಬಿಡುತ್ತಾ) ಕಾಡುಬೆಕ್ಕಂತೆ, ಕಾಡುಬೆಕ್ಕು ! ನೋಡಬೇಕಾಗಿತ್ತು ಹೇಗಿರುತ್ತಿತ್ತೋ ಕಾಡು ಬೆಕ್ಕು ! ಮೂತಿ ಎಲ್ಲಾ ಪರಚಿಬಿಡುತ್ತಿದ್ದೆ !

ರಾಮು—ಸಾಕು ಸುಮ್ಮನಿರೇ, ಅವಳಂದಿದ್ದಕ್ಕೆ ನಿನ್ನ ಮಾನಕ್ಕೆ ಕಡಿಮೆ ಆಗಿ ಹೋಯಿತು. ಊರು ಊರೇ ಉಗುಳುತ್ತಾ ಇದೆಯಲ್ಲಾ, "ಛೀ", "ಥೂ", "ಬಜಾರಿ", "ಗಂಡುಬೀರಿ", "ಗಯ್ಯಾಳಿ" ಅಂತ, ಅದೇ ಸರಿ ನಿನಗೆ.

ಸರು—ಉಗುಳಿಕೊಳ್ಳಲಿ. ಬೊಗಳಿಕೊಳ್ಳಲಿ. ನನ್ನ ಬೆನ್ನ ಹಿಂದೆ ಬೊಗಳುತ್ತವೆ ಹೇಡಿಗಳು. ನನ್ನ ಎದುರಿಗೆ ಬಂದು ಮಾತಾಡಲಿ, ಒಂದು ಉಸಿರು ಬಿಡಲಿ - ಬಜಾರಿ, ಗಯ್ಯಾಳಿ, ಗಂಡುಬೀರಿ - ಗೊತ್ತಾಗುತ್ತೆ. (ಮತ್ತೆ ಸೀನಿ ಕಡೆ ಕೈಯೆತ್ತಿ ನುಗ್ಗುತ್ತಾ) ಎಲ್ಲಾ ಈ ಪ್ರಾರಬ್ಧದಿಂದ –

ಸೀತ—(ತಡೆದು ದೂರ ಎಳೆದು) ಬೇಡಮ್ಮ...., ಈಗ ಆದದ್ದು ಆಗಿ ಹೋಯಿತು ಬಿಡು. ಅವನು ಹೊತ್ತಿಗೆ ಸರಿಯಾಗಿ ಕಾಫಿ ಕೊಡಲಿಲ್ಲ ಅಂತ ತಾನೇ ಇಷ್ಟೆಲ್ಲಾ ರಂಪ ? ನಾನು ಮಾಡಿಕೊಂಡು ತಂದು ಕೊಡುತ್ತೀನಿ. (ಅಡಿಗೆ ಮನೆ ಕಡೆ ಹೋಗುತ್ತಿರಲು)

ಸರು—ನಿಮ್ಮ ಹಾಳು ಕಾಫಿ ನನಗೇನೂ ಬೇಡ. (ಬಿರುಸಿನಿಂದ ತನ್ನ ಕೋಣೆಗೆ ನುಗ್ಗಿ ಬಾಗಿಲು ಬಡಿದುಕೊಳ್ಳುವಳು)

ರಾಮು—(ಬಾಗಿಲಿಗೆ) ಬಿಡೇ. ಬೇಡದಿದ್ದರೆ ಬಿಡೇ...ನಿಮ್ಮ ಅಮ್ಮ

ತರುವ ಕಾಫಿ ನೀನು ಕುಡಿಯದಿದ್ದರೆ ಅಷ್ಟೇ ಹೋಯಿತೆ. ನಾನಿದೇನಿಲ್ಲಿ, ನಿಮ್ಮ ಅಪ್ಪ! ಒಂದು ಲೋಟ ಅಲ್ಲ, ಒಂದು ಹಂಡೆ ತರಲಿ - ಅಗಸ್ತ್ಯ ಗೋತ್ರ ನಮ್ಮದು!....ಹೆದರಿಸುತ್ತಾಳೆ!....ಶಾಂತು, ನೋಡಮ್ಮ...ಇವನ ತಲೆ...

ಶಾಂತ—(ನೋಡಿ) ಏನಿಲ್ಲ, ಆ ಸಾಸರು ಬಡಿದ ಜಾಗದಲ್ಲಿ ಸ್ವಲ್ಪ ರಕ್ತ –

ರಾಮು—ರಕ್ತ ?

ಶಾಂತ—ಹೆದರಿಕೋಬೇಡ, ಸೀನಿ. ಬಾ...ಉರಿಯದೆ ಇರುವ ಔಷಧಿ ಹಚ್ಚುತ್ತೀನಿ, ಬಾ.

ರಾಮು—ಜಾಣ. ಹೋಗು.

(ಶಾಂತು ಮತ್ತು ಸೀನಿ ಮರೆಯಾಗುವರು. ಸೀತಮ್ಮ ಕಾಫಿ ತರುವರು. ಸರೋಜ ಕೈಯಲ್ಲಿ ಬಣ್ಣದ ಛತ್ರಿ ಹಿಡಿದು, ಕಣ್ಣಿಗೆ ಕಪ್ಪು ಕನ್ನಡಕವೇರಿಸಿ, ಚಪ್ಪಲಿ ಹಾಕಿ-ಬೀದಿ ಕಡೆ ಹೊರಡುವಳು)

ಸೀತ—ತಗೋ...ತುಂಬ ಹಾಲು ಹಾಕಿ ಮಾಡಿಕೊಂಡು ತಂದಿದ್ದೀನಿ.

ಸರು—ನನಗೆ ಬೇಡ ನನಗೆ ಬೇಡ ನನಗೆ ಬೇಡ ಅಂತ ಎಷ್ಟು ಸರ್ತಿ ಹೇಳುವುದು ? (ಲೋಟವೆತ್ತಿ ಎಸೆಯುವಳು)

ಸೀತ—ಲೇ –

ಸರು—ನಿಮ್ಮ ದರಿದ್ರ ಕಾಫಿ ನೀವೇ ಕುಡಿದುಕೊಳ್ಳಿ. ಊರು ತುಂಬ ಹೋಟೆಲ್ಲುಗಳಿವೆ...ಎಲ್ಲೋ ಹೋಗಿ ಬಸಿದುಕೊಳ್ಳುತ್ತೀನಿ. (ಸುಂಟರಗಾಳಿ ಯಂತೆ ಬೀದಿ ಬಾಗಿಲಾಚೆ ಹೋಗುವಳು)

ಸೀತ— (ರೇಗಿತು) ಅಯ್ಯೋ, ಹೇಸರಗತ್ತೆ, ಹಾಳಾಗಿ ಹೋಗು. (ಸಾಸರನ್ನು ಅವಳು ಹೋದ ದಿಕ್ಕಿಗೇ ಎಸೆದು — ಪತಿಯ ಮೇಲೆರಗಿ) ಎಲ್ಲಾ ನಿಮ್ಮಿಂದ!

ರಾಮು—ಹೌದು. ನನ್ನಿಂದ. ಆದರೆ - ಒಂದು ಬಟ್ಟಲು -

ಪುಟ್ಟಿ—(ಹೊರಗೆ) ನಂಜಾ, ರಾವ್‌ಸಾಹೇಬರಿದಾರೇನೋ ?

ರಾಮು—ಅಗೋ ! ಜೋಯಿಸರು ! ಕಣ್ಣು ಒರೆಸಿಕೊಳ್ಳೇ, ನಾವು ನಾವು ಜಗಳ ಆಡುತ್ತಿದ್ದೆವು ಅಂದುಕೊಂಡಾರು !

ಸೀತ—ಶ್ – ನೀವು ದೂರ ಇರಿ...ಅಗೋ ಬಂದರು.

ರಾಮು--(ನಗು ತರಿಸಿಕೊಂಡು) ದಯಮಾಡಿಸಿ, ದಯಮಾಡಿಸಿ, ನಾವು ಈಗ ನಿಮ್ಮ ಮಾತೇ ಆಡುತ್ತಿದ್ದೆವು !

ಪುಟ್ಟ—(ಪ್ರವೇಶಿಸಿ) ಹೌದಾ ? ಹಾಗಾದರೆ ನಾನು ನೂರು ವರ್ಷ ಬದುಕಲೇಬೇಕು ? (ನಗುತ್ತಾ) ಏನಮ್ಮಾ ?

ಸೀತ—ಬನ್ನಿ, ಜೋಯಿಸರೇ. ನೀವು ನಮ್ಮನ್ನು ಮರೆತೇಬಿಟ್ಟಿರಿ –

ಪುಟ್ಟ—ಆಂ ? ನಾನೇ ? ಮರೆತೆನೇ ?

ರಾಮು—ವಾರದ ಮೇಲಾಯಿತು ನೀವು ಬಂದು. ಅದು ಯಾರೋ ಮೈಸೂರಿನ ವರ ಅಂದಿದ್ದಿರಿ – ಏನಾಯಿತು – ?

ಪುಟ್ಟ—ಹೇಳುತ್ತೀನಿ. ಕೂತುಕೊಂಡು ಹೇಳೋಕ್ಕಿಂತ - ಮೈಸೂರಿನವನ ಮಾತಾಮೇಲೆ...ನಿಮ್ಮನ್ನ ಮರೆತೆ ಅಂದಿರಲ್ಲಾ – ಈ ವಾರದಲ್ಲಿ ಏನಾಯಿತು ಅಂತ ನಾಟಕ ತೋರಿಸುತ್ತೀನಿ. ನೀವು...ಕೂತು...ಸಾವಧಾನವಾಗಿ ನೋಡಿ. (ಮುಂದೆ ಬರುವರು. ಕತ್ತಲು ಮುಚ್ಚುವುದು. ಒಂದು ಪಕ್ಕದಲ್ಲಿ ಸೊನ್ನೆಯಾಕಾರದ ಬೆಳಕು—ಜೋಯಿಸರ—ಏಕಪಾತ್ರಾಭಿನಯ !)

ಪುಟ್ಟ : ಹಾಗಲ್ಲ, ವೆಂಕಟರಾವ್‌ಜೀ, ಆ ಸರೋಜ ಆವತ್ತು ಅವರ ಮನೆಯಲ್ಲಿ ಹಾಗೆ ಮಾಡಿದಳು, ನಿಜ. ಆದರೆ ಅವಳ ಜಾತಕ ನಿಮ್ಮ ಕುಮಾರನ ಜಾತಕ ಹೇಗೆ ಕೂಡುತ್ತೆ, ಅಂದರೆ –

ವೆಂಕ : ಜಾತಕವನ್ನು ಜಾತಕಕ್ಕೆ ಕೊಟ್ಟು ಮದುವೆ ಮಾಡಿಸಿ. ನನ್ನ ಆಕ್ಷೇಪಣೆ ಇಲ್ಲ. ಆದರೆ ಅವಳು, ಆ ಸರೋಜ, ಹೆಣ್ಣೇನ್ರೀ ? ಆಂ ? ಆ ಕಾಳಿಯ ಕುತ್ತಿಗೆಗೆ ಕೈಲಾಸಪತಿ ಕೂಡ ಧೈರ್ಯವಾಗಿ ತಾಳಿ ಕಟ್ಟಲಾರ. ಜೋಯಿಸರೇ, ಅವಳ ಮಾತು ಬಿಡಿ. ಆ ಚಿಕ್ಕ ಹುಡುಗಿ, ಶಾಂತ ಅಂದಿರಲ್ಲವಾ ಅವಳ ಹೆಸರು ? ಅವಳನ್ನ ಕೊಡುತ್ತಾರಾ ಕೇಳಿ. ಸರೋಜಂಗೆ ನನ್ನ ಸಾವಿರ ನಮಸ್ಕಾರಗಳು.

(ಇನ್ನೊಂದು ಭಾಗದ ಇನ್ನೊಂದು ಸೊನ್ನೆಯಾಕಾರದ ಬೆಳಕಿನಲ್ಲಿ)

ಪುಟ್ಟೆ : ಓ ಹೋ ಹೋ ಹೋ, ಭಗವಂತರಾಯರಿಗೆ ಅಡ್ಡ ಬಿದ್ದ. (ನಶ್ಯದ ಡಬ್ಬಿ ಮುಂದೆ ಹಿಡಿದು) ಒಪ್ಪಿಸಿಕೊಳ್ಳಬೇಕು. ನಾನು ತಮ್ಮ ಬಂಗಲಿಗೇ ಹೊರಟಿದ್ದೆ. ಎದುರಿಗೇ ದಯಮಾಡಿಸಿದಿರಿ.

ಭಗ : ಹೌದಾ ? ತುಂಬಾ ಸಂತೋಷ. ಇಲ್ಲಿ ನೋಡಿ. ಈ ನಿಮ್ಮ ನಶ್ಯವನ್ನು ಸಂತೋಷದಿಂದ ಒಪ್ಪಿಸಿಕೊಳ್ಳುತ್ತಿದ್ದೇನೆ. ಆದರೆ-ಅಲ್ರೀ, ಜೋಯಿಸರೇ, ಆ ಹುಡುಗಿ, ನಿಮ್ಮ ರಾವ್‌ಸಾಹೇಬರ ಮಗಳು – ಅವಳು ಮನುಷ್ಯ ಜಾತಿಗೆ ಸೇರಿದವಳೇನ್ರಿ ? ಹೆಣ್ಣುದೆವ್ವ !

ಪುಟ್ಟೆ : ರಾಯರೇ !

ಭಗ : ಬ್ರಹ್ಮರಾಕ್ಷಸಿ ! ಅವಳು ಕೋಗಿಲೆಯ ಹಾಗೆ ಹಾಡುತ್ತಾಳೆ ಅಂದಿರಿ. ನಾನು "ನಿನಗೆ ಹಾಡು ಬರುತ್ತೇನಮ್ಮ ?" ಅಂತ ಕೇಳಿದರೆ, "ನಿಮಗೆ ತಬಲ ಬಡಿಯೋಕ್ಕೆ ಬರುತ್ತೆಯೇ ? ಅಂತ ನನ್ನನ್ನೇ ಕೇಳಿದಳಲ್ರೀ ! ನನ್ನನ್ನ ! ಇವಳ ಗಂಡನಾಗಬೇಕು ಅಂತ ಇರುವವನ ಅಪ್ಪನ್ನ ! ರೀ, ನಾನು ಇವತ್ತು ನನ್ನ ಹೆಂಡತಿಯನ್ನ "ಲೇ" ಅಂದರೆ, ಗಾಬರಿಯಲ್ಲಿ ಕೈಯಲ್ಲಿದ್ದ ಕಲಗಡಿಗೆ ಎತ್ತಿಹಾಕಿ, ಸಾರು ಹುಳಿ ಮೈಮೇಲೆ ಚೆಲ್ಲಿಕೊಳ್ಳುತ್ತಾಳೆ ! ಇವಳು ! ಈ ಚೋಟುದ್ದದ ಚಿನಕುರಳಿ - ಊಹೂ - ಬೇಡಿ....ನಿಮ್ಮ ರಾವ್‌ಸಾಹೇಬರು ಅವರ ಎರಡನೆ ಹುಡುಗಿಯನ್ನ ಕೊಡುತ್ತಾರಾ ಕೇಳಿ, ಅಮಾವಾಸ್ಯೆ ಬೇಕಾದರೂ, ಎರಡು ಖರ್ಚೂ ನಾವೇ ಹಾಕಿಕೊಂಡು-ಮಾಡಿಕೊಳ್ಳುತ್ತೇವೆ. ನಿಮ್ಮ ಸರೋಜಮ್ಮನಿಗೆ ಒಂದು, ಎರಡು, ಮೂರು, ನಾಲ್ಕು-ನಾಲ್ಕು ಲಕ್ಷ ನಮಸ್ಕಾರಗಳು. (ನಿಷ್ಕ್ರಮಿಸುವರು)

(ಇನ್ನೊಂದು ಭಾಗದ ಇನ್ನೊಂದು ಸೊನ್ನೆಯಾಕಾರದ ಬೆಳಕಿನಲ್ಲಿ)

ಪುಟ್ಟೆ : ಆ ಹಾ ಹಾ ಹಾ ಹಾ, ಅದೃಷ್ಟ ಅಂದರೆ ಇದಕ್ಕೆ ಅನ್ನಬೇಕು. ನಾನು ನಿಮ್ಮಲ್ಲಿಗೇ ಹೊರಟಿದ್ದೆ, ಸರ್ವೋತ್ತಮರಾಯರೇ –

ಸರ್ವೋ : ಹಾಗಾದರೆ ನಾನು ಬೆಳಗ್ಗೆ ಎಡ ಮಗ್ಗುಲಲ್ಲೇ ಎದ್ದೆ ಅಂತ ಆಯಿತು. ಅದಕ್ಕೇ ಇಲ್ಲಿ ನಿಮ್ಮ ಕೈಗೆ ಸಿಕ್ಕಿಹಾಕಿಕೊಂಡೆ.

ದಯವಿಟ್ಟು ಆ ಮದುವೆ ಮಾತು ಬಿಟ್ಟು ಏನಾದರೂ ಆಡಿ. ನನ್ನ ಮಗ, ನನ್ನ ಮಗಾರೀ, ಆ ಸಾಯಂಕಾಲ ಆ ಮಹಾತಾಯಿಯನ್ನ ನೋಡಿ ಮನೆಗೆ ಹಿಂತಿರುಗಿದಾಗಿನಿಂದ - ಹಾಸಿಗೆ ಹಿಡಿದುಬಿಟ್ಟಿದ್ದಾನೆ! ಕೆ-ಟ್ಟ ಜ್ವರ! ಕೋಲಮೇಲಿನ ಸೀರೆ ಕಂಡರೆ, ನೆಲದ ಮೇಲೆ "ಸರೋಜ, ಸರೋಜ" ಅಂತ ನಡುಗುತ್ತಾನೆ! ಕೈ ತುಂಬ ದಾರ, ಕುತ್ತಿಗೆ ಸುತ್ತ ತಾಯಿತಿ, ಹಣೆ ಭರ್ತಿ ವಿಭೂತಿ, ಕುಂಕುಮ - ಊ ಹೂ...ಏನು ಮಂತ್ರತಂತ್ರವೂ ಪ್ರಯೋಜನ ಆಗಿಲ್ಲ. ದಯವಿಟ್ಟು ನನ್ನ ಕ್ಷಮಿಸಿ. ದಾರಿ ಬಿಡಿ....ದಾರಿ...ದಾರಿ... ಏ ರಿಕ್ಷ, ನಿಲ್ಲಿಸು...ಹಾಂ...ಹಾಂ... ಓಡಿಸು, ಅವರೂ ಬಂದು ಹತ್ತಿಬಿಟ್ಟಾರು!"

(ಬೆಳಕು)

ಪುಟ್ಟ—ರಾವ್‌ಸಾಹೇಬರೇ, ಸೀತಮ್ಮಾ, ಇಲ್ಲಿಗೆ ನನ್ನ ಏಕಪಾತ್ರಾಭಿನಯ ಮುಗಿಯಿತು...ಕಣ್ಣು ಒರೆಸಿಕೊಳ್ಳಿ. ಹಣೆಬರಹ ಅನುಭವಿಸಬೇಕು.

ರಾಮ—ನೋಡಿದೆಯೇನೇ ನಿನ್ನ ಮಗಳ ಪ್ರತಾಪ ?

ಸೀತ—ನಾವೇನು ಮಾಡುವುದು, ಜೋಯಿಸರೇ ?

ಪುಟ್ಟ—ನಾನೀಗ ಬಂದದ್ದು, ನಾನೀಗ ಏನು ಮಾಡಬೇಕು ಅಂತ ಕೇಳೋಕ್ಕೆ. ಈಗ ಹನ್ನೊಂದು ಗಂಟೆ ರೈಲಿಗೆ ಮೈಸೂರಿನಿಂದ ನಾನು ಹೇಳಿದ ವರ ಬರುತ್ತಾನೆ. ಇಗೋ ಕಾಗದ ಬಂದಿದೆ. ನಾನೇನು ಮಾಡಲಿ –

ರಾಮ—ಒಂದು ಕೆಲಸ ಮಾಡಿ. ಸ್ಟೇಷನ್ನಿಗೆ ಹೋಗಿ ಅವನಿಗೆ ಒಂದು ರಿಟರ್ನ್ ಟಿಕೆಟ್ ಕೊಂಡು ಕೊಟ್ಟು - ನೀವೂ ಆರಾಮವಾಗಿ ಮನೆಗೆ ಹೋಗಿ.

ಪುಟ್ಟ—ಯಾಕೆ ? ಸೀತಮ್ಮಾ ?

ರಾಮ—ಅವಳು -

ಸೀತ—ಈಗತಾನೇ ಒಂದು ದೊಡ್ಡ ರಂಪ ಮಾಡಿ ಆಚೆಗೆ ಹೋಗಿದ್ದಾಳೆ.

ರಾಮ—ಅಲ್ಲೂ ಏನಾದರೂ ಇನ್ನೂ ದೊಡ್ಡ ರಂಪ ಮಾಡಿ ಮನೆಗೆ ಬರುತ್ತಾಳೆ. ಈ ಸಮಯದಲ್ಲಿ ಆ ಮೈಸೂರಿನವನು ಮೂರ್ತಿ ಇಟ್ಟರೆ–

(ಶಾಂತೂ ಪ್ರವೇಶಿಸಿ ಒಳಬಾಗಿಲ ಕಡೆ ಹೋಗುತ್ತಾ)

ಶಾಂತ—ಓ, ನಮಸ್ಕಾರ, ಜೋಯಿಸರೇ. ಲಕ್ಷಮ್ಮನವರು ಚೆನ್ನಾಗಿದ್ದಾರಾ ?

ಪುಟ್ಟ—ಓ ಹೋ - ಭರ್ಜರಿಯಾಗಿದ್ದಾಳೆ. ಥ್ಯಾಂಕ್ ಯೂ.

ಶಾಂತ—ಅಂ ?

ಪುಟ್ಟ—ಮತ್ತೆ ! ನಾನೂ ಸ್ವಲ್ಪ ಸ್ವಲ್ಪ ಕಾಲಕ್ಕೆ ತಕ್ಕ ಹಾಗೆ ಇಂಗ್ಲಿಷ್ ಜೋಯಿಸ ಆಗುತ್ತಾ ಇದ್ದೇನೆ. ಶಾಂತೂ, ನಿನ್ನ ಮದುವೆಯಲ್ಲಿ ಒಂದೆರಡು ಇಂಗ್ಲಿಷ್ ಮಂತ್ರವನ್ನೂ ಹೊಡೆದುಬಿಡುತ್ತೇನೆ !

ಶಾಂತ—ಹೋಗ್ರೀ, ಅದೇ...(ಓಡಿ ಮರೆಯಾಗುವಳು)

ಪುಟ್ಟ—ನೋಡಿ...ನೋಡಿದಿರಾ, ಸೀತಮ್ಮ. ನಾಚಿಕೆ ಹೀಗಿರಬೇಕು, ಕಾಲೇಜಿನಲ್ಲಿ ಓದುತ್ತಿದ್ದರೂ, ಬೈತಲೆ ಸೊಟ್ಟಗೆ ತೆಗೆದುಕೊಂಡಿದ್ದರೂ, ಬುದ್ಧಿ ನೆಟ್ಟಗೇ ಇಟ್ಟುಕೊಂಡಿದ್ದಾಳೆ ನೋಡಿ...ಅದೇ –

ಸೀತ—ಅಯ್ಯೋ, ನಮಗೆ ಇವಳ ಯೋಚನೆ ಸ್ವಲ್ಪವೂ ಇಲ್ಲ. ಎಲ್ಲಾ–

ಪುಟ್ಟ—ರಾವ್‌ಸಾಹೇಬರೇ, ನಾನು ಇಂಗ್ಲಿಷ್ ಪಂಗ್ಲೀಷ್ ಓದಿ ಬರೆದವನಲ್ಲ. ಆದರೂ ಈ ಸರೋಜ ಯಾಕೆ ಹೀಗೆ ಮಾಡುತ್ತಿದ್ದಾಳೆ ಅನ್ನುವುದಕ್ಕೆ ಯೋಚಿಸಿ ಯೋಚಿಸಿ -

ರಾಮು—ಹೂಂ - ? .

ಪುಟ್ಟ—ನಾನೇ ಒಂದು ಕಾರಣ ಕಂಡುಹಿಡಿದುಕೊಂಡಿದ್ದೇನೆ.

ಸೀತ—ಏನು - ?

ಪುಟ್ಟ— ಕಾಲೇಜಿನಲ್ಲಿ ಡಿಗ್ರಿ ತೊಗೊಂಡವಳು, ಸಂಗೀತ ಇಷ್ಟು ಚೆನ್ನಾಗಿ ಹಾಡುವವಳು, ಡ್ಯಾನ್ಸು ತಾನೇ ಪಾಠ ಕಲಿಸುತ್ತಿರುವವಳು, ಇನ್ನೂ ನೂರೆಂಟು ವಿದ್ಯೆ ಬರುವವಳು - ಹುಚ್ಚಾಸ್ಪತ್ರೆಯವರ ಥರ ಯಾಕೆ ಆಡುತ್ತಾಳೆ ?

ರಾಮು—ಉಂ...ಉಂ...?

ಪುಟ್ಟ—ಮೊದಲಿಂದ ಏನು ಆಗುತ್ತಾ ಇದೆ ? ಬಂದ ಒಬ್ಬೊಬ್ಬರೂ ಸ್ವಲ್ಪ ತಾಳ್ಮೆಯಿಂದ ವಿಚಾರಿಸಿ ತಿಳಿದುಕೊಳ್ಳದೆ, ಸರೋಜ ಬೇಡ, ಸರೋಜ ಬೇಡ, ಸರೋಜ ಬೇಡ ಅಂತ ಪಲ್ಲವಿ ಹಾಡುವುದರ ಹಿಂದೆಯೇ –

ಸೀತ—ಹುಂ ? ಹುಂ ?

ಪುಟ್ಟ—"ಆ ಚಿಕ್ಕವಳನ್ನ ಕೊಡುತ್ತಾರಾ ?" "ಶಾಂತೂನ ಕೊಡುತ್ತಾರಾ ?" ಅಂತ ಅನ್ನುತ್ತಿರುವುದು ಇವಳನ್ನ ಕೆರಳಿಸಿದೆ. "ಇವರಿಗೆ ಅವಳು ಬೇಕು, ನಾನು ಬೇಡ ಅಲ್ಲವಾ ? ಹಾಗೇ ಆಗಲಿ, ನಾನು ಬೇಡವೆನ್ನಿಸುವ ಹಾಗೇ ಆಡುತ್ತೀನಿ" ಅಂತ ಬೇಕುಬೇಕಂತ ಸಿಕ್ಕಸಿಕ್ಕ ಹಾಗೆ ಮಾಡುತ್ತಿದ್ದಾಳೆ. ನೀವು ನೋಡಿ ಬೇಕಾದರೆ, ಹೇಗೋ ಏನೋ ಇವಳ ಮದುವೆ ಆಗಿಹೋದರೆ, ಈ ಹುಚ್ಚು ಬಿಡತ್ತೋ ಇಲ್ಲವೋ ನೀವೇ ನೋಡುವಿರಂತೆ.

ಸೀತ—ಹುಚ್ಚು ಬಿಟ್ಟ ಹೊರತು ಮದುವೆ ಆಗೊಲ್ಲ, ಮದುವೆ ಆಗುವವರೆಗೂ ಹುಚ್ಚು ಬಿಡೊಲ್ಲ. ನಾವೇನು ಮಾಡಿ ಸಾಯೋಣ ಹೇಳಿ.

ರಾಮು—ನನಗೆ ಒಂದೂ ತೋರೊಲ್ಲ.

ಸೀತ—ನೀವೇ ತೋರಿಸಬೇಕು ದಾರಿ.

(ಹೊರಗೆ : ಸರು : 'ದಾರಿ ಬಿಡೋ, ಪಿಶಾಚಿ')

ರಾಮು—ಅಗೋ ! ತಾನೇ ಪಿಶಾಚಿ ; ಇನ್ನೊಬ್ಬನ್ನ ಪಿಶಾಚಿ ಅನ್ನುತ್ತಾಳೆ !

ಸೀತ—ಶ್, ಕೇಳೀತು ಅವಳಿಗೆ !

(ಸರೋಜ ಪ್ರವೇಶಿಸಿ ಕುಳಿತಿರುವವರನ್ನು ಕಸಕ್ಕಿಂತ ಕಡೆಯೆಂಬಂತೆ ತಿರುಗಿ ನೋಡದ ನಿರ್ಲಕ್ಷ್ಯದಿಂದ ತನ್ನ ಕೋಣೆಗೆ ಹೋಗುತ್ತಿರಲು)

ಪುಟ್ಟ—ಏನಮ್ಮಾ, ಸರೋಜ, ವಾಕಿಂಗ್ ಆಯಿತಾ ?

ಸರು—(ಸಮೀಪಿಸಿ) ಆಯಿತೋ ಬಿಡಿತೋ, ಇಮಗೆ ಏನು ಅದನ್ನ ಕಟ್ಟಿಕೊಂಡು ? ಬಂದ ಕೆಲಸ ನೋಡಿಕೊಂಡು ಮುಂದಕ್ಕೆ ಹೋಗಿ.

ರಾಮು—ಲೇ !

ಸೀತ—ಸರೋಜ !

ಸರು—ಸರೀ...ಇದೇನಿವತ್ತು ಒಬ್ಬರೇ ಬಂದಿದ್ದೀರಲ್ಲಾ ? ವರಗಳ ಪರಿವಾರ ಯಾವುದೂ ಸಿಕ್ಕಲಿಲ್ಲವೇನು, ಕರೆದುಕೊಂಡು ಬಂದು ನನ್ನನ್ನು ತೋರಿಸೋಕ್ಕೆ ?... ಇಲ್ಲಿ ನೋಡಪ್ಪಾ, ಇನ್ನು ಮೇಲೆ ಅವರಿವರು ಇಲ್ಲಿ ಬಂದು ನನ್ನ ಮೂಗಿನ ಉದ್ದ, ಕಿವಿ ಅಗಲ, ಮೈ ಸುತ್ತಳತೆ ಅಳೆಯೊಕ್ಕೆ ಹೊರಟರು ಅಂದರೆ, ನಾನು ಸುಮ್ಮನಿರೊಲ್ಲ. ನನ್ನನ್ನು ಯಾರೂ ನೋಡ ಬೇಕಾಗಿಲ್ಲ. ನಾನೂ ಯಾರನ್ನೂ ನೋಡುವುದೂ ಇಲ್ಲ.

ಪುಟ್ಟ—ಊಂ, ಹಾಗೆಂದರೆ ಹೇಗಾಗುತ್ತಮ್ಮಾ ? ಮದುವೆ ಅಂದರೆ, ಒಬ್ಬರನ್ನೊಬ್ಬರು ನೋಡೀ, ಒಪ್ಪೀ –

ಸರು—(ಅದೇ ರಾಗದಲ್ಲಿ) ನೀವೂ – ಸುಮ್ಮನೆ – ಕೂತುಕೊಳ್ಳೀ. ನಿಮ್ಮನ್ನ ಮಾತಾಡಿಸ್ತಲಿಲ್ಲ ನಾನು. ನೀವು ಬೇಕಾದರೆ ಒಬ್ಬರಿಗೊಬ್ಬರು ದುರ್ಬೀನು ಹಾಕಿಕೊಂಡೋ, ಮೈಕ್ರಾಸ್ಕೋಪಿಟ್ಟುಕೊಂಡೋ ನೋಡಿಕೊಳ್ಳಿ. ನಾನು ಯಾರನ್ನೂ ನೋಡೊಲ್ಲ. ಯಾವ್ನೋನು ಬೇಕಾದರೂ ಬಂದು ಮಾಡಿಕೊಳ್ಳಲಿ, ಅದು ಯಾವನಿಗೆ ಧೈರ್ಯ ಇದೆಯೋ, ನಾನು ಆಮೇಲೆ ನೋಡುತ್ತೇನೆ.

(ಉಪ್ಪರಪಕ್ಷಿ ಗೂಡು ಸೇರಿಕೊಳ್ಳುವುದು)

ಪುಟ್ಟ—...ಶಂಭೋ ಶಂಕರ...ಈಗ ಆ ಮೈಸೂರಿನವನು– ಬಂದರೆ – ನೀವು ಹೇಳಿದ ಹಾಗೆ –

ರಾಮು—ಜೋಯಿಸರೇ, ಹೀಗೆ ಮಾಡಿ. ನಾನು ಒಂದು ರಿಟರ್ನ್ ಟಿಕೆಟ್ಟು ತೆಗೆದುಕೊಟ್ಟು ಕಳುಹಿಸಿ ಅಂದೆನಲ್ಲಾ – ಬೇಡ. ಅವನನ್ನ ಕರೆದು ಕೊಂಡು ಬನ್ನಿ. ಎಲ್ಲಾ ಒಪ್ಪಿಗೆಯಾಗುವ ಹಾಗಿದ್ದರೆ, ಈ ಸರೋಜ ಹೀಗೇ ಸಾಯಲಿ, ನಮ್ಮ ಶಾಂತೂನೇ ಗೊತ್ತು ಮಾಡಿ ಮದುವೆ ಮಾಡಿಬಿಡೋಣ. ಏನೇ ?

ಸೀತ—ಶ್ ! ಮೆಲ್ಲಗೆ...ಅವಳು ತಿರುಗಿ...ಬಾಗಿಲ ಕಿಂಡಿಗೆ –

ರಾಮು—ಕಿವಿ ? ಇಟ್ಟುಕೊಂಡಿರಲಿ...ಏನು ಮಾಡುವುದೇ ?... ನಾನು ಹೇಳಿದ್ದು ಏನಂತೀರಿ ?

ಪುಟ್ಟ—ಊ ಹೂ. ಅದು ಸರಿಯಲ್ಲ. ಈಗಲೇ ಈ ಜಂಪ, ತಂಗಿಯ ಮದುವೆಯೂ ಆಗಿ ಹೋದರೆ, ಇನ್ನೂ ವಿಪರೀತಕ್ಕೆ ಏರಬಹುದು.

ಸೀತ—ಹೌದು, ಹೌದು. ಆಗದ ಹೋಗದ ಮಾತು ಯಾಕೆ ಬಿಡಿ...

ಪುಟ್ಟ—ತಡೆಯಿರಿ. ನನಗಿನ್ನೊಂದು ಛಾನ್ಸು ಕೊಡಿ. ನಾನೂ ಒಂದು ಕೈ ನೋಡಿಯೇ ನೋಡುತ್ತೇನೆ. ಅವಳು ತಾನಾಗಿ ಸಿಕ್ಕಿ ಹಾಕಿಕೊಂಡಿದ್ದಾಳೆ. ತಾನು ಯಾರನ್ನೂ ನೋಡೊಲ್ಲ, ತನ್ನ ಯಾರೂ ನೋಡಬೇಕಿಲ್ಲ ಅಂದಳಲ್ಲವೇ ?

ರಾಮು—ಹೂಂ ?

ಸೀತ—ಹೂಂ ?

ಪುಟ್ಟ—ಯಾಕೆ ಅಂದೆ ಅಂತ ಅನ್ನಿಸದೆ ಹೋದರೆ ಯಾಕೆ ?...ಈಗ ಅವಳದು ಯಾವುದಾದರೂ ಒಂದು ಫೋಟೋ ಇದ್ದರೆ ಕೊಡಿ.

ರಾಮು—ಲೇ, ಅಲ್ಲಿ, ಆ ಸ್ಟಾಂಡ್ ಮೇಲಿದೆಯಲ್ಲಾ ಅದನ್ನೇ ಕೊಡೇ. (ಸೀತಮ್ಮ ಹೋಗುತ್ತಿರಲು) ಜೋಯಿಸರೇ, ಎಲ್ಲಾ ನಿಮ್ಮ ಕೈಗೇ ಬಿಟ್ಟುಬಿಟ್ಟಿದ್ದೇವೆ. ಅದೇನು ಮಾಡುತ್ತೀರೋ ಮಾಡಿ. ಯಾವುದಾದರೂ ಒಂದು ಶನಿಯನ್ನ ತಂದು ಗಂಟುಹಾಕಿಬಿಡಿ ಈ ಹಾಳು ಪ್ರಾರಬ್ಧಕ್ಕೆ ! ಈ...ಈ... ಈ ಮಾರಿಯನ್ನ ಮದುವೆ ಮಾಡಿಕೊಳ್ಳುವ ಮುತ್ಠಾಳನಿಗೆ ನನ್ನ ಮುಕ್ಕಾಲು ಆಸ್ತಿಯನ್ನು ಬೇಕಾದರೂ ಬರೆದುಕೊಟ್ಟು ಬಿಡುತ್ತೇನೆ - (ಸೀತಮ್ಮ ಫೋಟೋ ತರಲು) ಕೊಡು.

ಸೀತ—(ಗಂಡನ ಕೈಗಿಟ್ಟು) ಕೊಡಿ.

ರಾಮು—(ಜೋಯಿಸರಿಗೆ ಕೊಡುತ್ತಾ) ತೊಗೊಳ್ಳಿ.

ಸೀತ—ಅದು ಅಷ್ಟೇನೂ ಚೆನ್ನಾಗಿಲ್ಲ. ಒಳ್ಳೊಳ್ಳೆಯದೆಲ್ಲಾ ಅವಳು ಒಳಗೆ ಕಟ್ಟು ಕಟ್ಟೇ ಇಟ್ಟುಕೊಂಡಿದ್ದಾಳೆ.

ಪುಟ್ಟ—(ಫೋಟೋ ನೋಡಿ) ಏನಾಗಿದೆ ಇದಕ್ಕೆ ? ಇಷ್ಟು ಯಾವ ಹೆಣ್ಣು ಇರುತ್ತಾಳೆ ? ಸರಿ ಸರಿಮುಖ ನೋಡಿ ಬರಬೇಕವನು...(ಎದ್ದು ಹೊರಟು) ನಾನೂ ಬರುತ್ತೇನೆ...

ರಾಮು—ಒಳ್ಳೆಯದು.

ಪುಟ್ಟ—(ಹಿಂತಿರುಗಿ) ಆಂ...ಆ ಇದು –

ರಾಮು—ಯಾವುದು ?

ಪುಟ್ಟ—ಅದೇ, ತಾವೀಗ ಅಪ್ಪಣೆ ಕೊಡಿಸಿದರಲ್ಲಾ –

ಸೀತ—ಏನು – ?

ಪುಟ್ಟ—ಅದೇ, ಇವಳನ್ನ ಮದುವೆ ಮಾಡಿಕೊಳ್ಳುವವನಿಗೆ... ಮುಕ್ಕಾಲಾಸ್ತಿ –

ರಾಮು—ಹುಂ ? ಹುಂ ?

ಪುಟ್ಟ—ಸಮಯ ಬಂದರೆ, ಪ್ರಸ್ತಾಪ ಮಾಡಬಹುದಲ್ಲಾ ?

ರಾಮು—ಒಹೋ...ಏನೇ ?

ಸೀತ—ಮಾಡಲಿ.

ರಾಮು—ಮಾಡಿ, ಮಾಡಿ, ಧೈ ಧೈ ಧೈರ್ಯವಾಗಿ ಮಾಡಿ.

–ತೆರೆ–

ದೃಶ್ಯ ೨

(ಸ್ವಲ್ಪ ಹೊತ್ತಿನ ನಂತರ. ರಸ್ತೆಯಲ್ಲಿ ಒಂದು ಕಡೆಯಿಂದ ಜೋಯಿಸರು, ಎದುರು ಕಡೆಯಿಂದ ಭೀಮು ಪ್ರವೇಶಿಸುವರು)

ಪುಟ್ಟ—(ಜುಟ್ಟು ಗಂಟುಹಾಕಿಕೊಳ್ಳುತ್ತಾ) ನಾನು ಬರಿ ಜುಟ್ಟು ಗಂಟು ಹಾಕಿಕೊಳ್ಳುವ ಪುಟ್ಟಾಜೋಯಿಸ ಅಲ್ಲವೇ ! ಹಿಡಂಬೀ, ಕೇಳೇ, ಇನ್ನು ಒಂದೇ ಒಂದು ವಾರದಲ್ಲಿ ಎಲ್ಲಿಂದಲಾದರೂ ಒಬ್ಬ ಭೀಮನ್ನ ಹಿಡಿದುಕೊಂಡು ಬಂದು ನಿನಗೆ ಗಂಟು ಹಾಕದಿದ್ದರೆ –"

ಭೀಮು—"ನಾನು ಗಂಟು ಹಾಕಿಕೊಂಡಿರುವ ನನ್ನ ಹೆಂಡತಿಯನ್ನ ಬಿಟ್ಟುಬಿಡುತ್ತೇನೆ. ಇದೇ ನನ್ನ ಘೋರ ಪ್ರತಿಜ್ಞೆ".

ಪುಟ್ಟ—ಲೋ...ಯಾರು – ಯಾರು– ?

ಭೀಮು—ಇನ್ನು ಯಾರು, ಪುಟ್ಟಾಜೋಯಿಸರೇ, ನಿಮ್ಮ ಹತ್ತಿರ ಹೀಗೆ ಹುಡುಗಾಟ ಆಡುವವರು – ?

ಪುಟ್ಟ—ಭೀಮು ? ನಮ್ಮ ಭೀಮು – ??

ಭೀಮು—ಅವನೇ. ನಿಮ್ಮ ಆಪ್ತಸ್ನೇಹಿತರ ಸುಪುತ್ರ, ಭೀಮೂನೇ !

ಪುಟ್ಟ—ನೀನೆಲ್ಲಿಂದ ಬಂದಿಯೋ ? ಎಲ್ಲಿ ಹೋಗಿದ್ದಿ ? ಯಾವಾಗ ಬಂದಿ ?

ಭೀಮು—ಮದ್ರಾಸಿಗೆ ಹೋಗಿದ್ದೆ. ಈಗ ತಾನೇ ಬಂದು ಇಳಿಯುತ್ತಿದ್ದೇನೆ.

ಪುಟ್ಟ—ಮದ್ರಾಸಿಗೆ ? ಅದು ಯಾಕೋ ? ಅಲ್ಲಿ ಏನು – ಕೆಲಸಕ್ಕೆಗಿಲಸಕ್ಕೆ –

ಭೀಮು—(ನಗುತ್ತಾ) ನನಗೆ ಯಾಕೆ ಕೆಲಸ, ಜೋಯಿಸರೇ ? ಅಪ್ಪ ಸಂಪಾದಿಸಿ ಬಿಟ್ಟು ಹೋಗಿರುವುದನ್ನು ನೆಟ್ಟಗಿಟ್ಟುಕೊಂಡಿದ್ದರೆ ಸಾಲದಾ ? ಅವರಿವರಿಗೆ ನಾನು ಯಾಕೆ ಕೈ ಮುಗಿಯಬೇಕು ?

ಪುಟ್ಟ—ಅದು ಸರೀನೇ...ನಾನೂ ಅದೇ ಅಂದದ್ದು...ಮತ್ತೆ – ?

ಭೀಮು—ಅದು ಹೀಗಾಯಿತು. ಹುಡುಗ ಮದುವೆಗಿದಾನೆ ಅಂದರೆ ಸುದ್ದಿ ಹೇಗೆ ಹೇಗೋ ಎಲ್ಲೆಲ್ಲಿಗೋ ಹೊರಟು ಹೋಗುತ್ತೆ ! ಮದ್ರಾಸಿಗೆ ಹೋಯಿತು. ಒಬ್ಬರು ಭಾರಿ ಶ್ರೀಮಂತರು ಕರೆಯಿಸಿಕೊಂಡರು. ಹೋದೆ. ಬಂದೆ.

ಪುಟ್ಟ—ಯಾಕೋ ? ಹೆಣ್ಣು ಒಪ್ಪಲಿಲ್ಲವೇನೋ ?

ಭೀಮು—ಹೆಣ್ಣು ಒಪ್ಪಿತು. ಗಂಡೂ ಒಪ್ಪಿತು. ಹೆಣ್ಣಿನ ಅಪ್ಪ ಅಮ್ಮ, ಅವರೂ ಒಪ್ಪಿದರು. ಜೋಯಿಸರು ಒಪ್ಪಲಿಲ್ಲ.

ಪುಟ್ಟ—ಏನು ? ಏನೋ ಹಾಗೆಂದರೆ ? ಜಾತಕ ಕೂಡಲಿಲ್ಲವಾ ? ಮೊದಲೇ ನೋಡಿರಲಿಲ್ಲವಾ ?

ಭೀಮು—ನೋಡಿದ್ದರು. ಕೂಡಿತ್ತು. ಆದರೆ ಕೂಡಿದ್ದನ್ನ ಜೋಡಿಸಿ

ಕೊಳ್ಳುವಾಗ, ಮಂಡೋದರಿ ಜಾತಕದ ಜೊತೆಗೆ ರಾವಣಂದು ಇಡದೆ ರಾಮನದು ಇಟ್ಟು, ಕಾಗದ ಭೀಮುನಿಗೆ ಬರೆದಿದ್ದರು !

ಪುಟ್ಟೆ—ತ್ಸು ತ್ಸು ತ್ಸು ತ್ಸು...ಉಂಟೇನೋ ಇಂತಾ ಬೇಹುಷಾರಿ ?

ಭೀಮು—ಆಂ ? ಬ್ರಹ್ಮಸಂಕಲ್ಪ. ಜೋಯಿಸರೇ, ತಪ್ಪಿಸೋಕ್ಕಾಗುತ್ತೆಯೇ ? ಹಿಡಂಬಿ ಇಲ್ಲಿರುವಾಗ ನಾನು – ಮೌಂಟು ರೋಡಿನಲ್ಲಿ ತಡಕಾಡಿದರೆ –

ಪುಟ್ಟೆ—ಲೋ. ಭೀಮು—ಉ ಹು ಹು ಹು ಹು...ನಿನಗೆ ಗೊತ್ತಿಲ್ಲ... ಈ ಹಿಡಂಬಿ – ನಾನೇನೋ ಅಂದೆ – ಆದರೆ _ ಉ ಹು ಹು ಹು – ಇವಳ ಸಹವಾಸ...ಬೇಡ ಬೇಡ...ಹಾಯ್ ಅಂತ ಸುಖವಾಗಿದ್ದಿ...ಭೀಮು, ತಡಿ ತಡಿ. ಒಂದು ಕೆಲಸ ಮಾಡಬಹುದೋ...ಈ ಹಿಡಂಬಿಗೆ ಒಬ್ಬಳು ತಂಗಿ ಇದ್ದಾಳೆ...ಬಂಗಾರ ಕಾಣೋ, ಬಂಗಾರ.

ಭೀಮು—ಅವಳನ್ನ ಬಳಿ ಮಾಡಿಸಿ ಹಾಕ್ಕೋ ಅಂತ ನೀವು – ?

ಪುಟ್ಟೆ—ಹೌದೋ. ಎಂಥ ಹುಡುಗಿ ಅನ್ನುತ್ತೀಯೋ, ಭೀಮು ! ನಾನು ಏರ್ಪಾಟು ಮಾಡುತ್ತೀನಿ ಸುಮ್ಮನಿರು. ಹೌದು, ಹೌದು, ಆದೇ –

ಭೀಮು—ಹಾಗೇ ಮಾಡುವಿರಂತೆ...ಆದರೆ ಸುಮ್ಮನೆ, ಕುತೂಹಲಕ್ಕೆ ಆ ಅಕ್ಕನ ವಿಷಯ – ಒಂದೆರಡು ಪ್ರಶ್ನೆ ಕೇಳುತ್ತೀನಿ. ದಯವಿಟ್ಟು ಹೇಳಿ. ಅವಳ ಹೆಸರು – ?

ಪುಟ್ಟೆ—ಸರೋಜ ಅಂತ. ಅಮ್ಮನೋ, ಬಾಯೋ, ದೇವಿಯೋ ನನಗೆ ಗೊತ್ತಿಲ್ಲಪ್ಪಾ. ನಾವು ಸರೋಜ ಅಂತ ಕೂಗುತ್ತೀವಿ.

ಭೀಮು—ಸರೋಜ ! ಸೊಗಸಾದ ಹೆಸರು. ಕಿವಿಗೆ ಇಂಪು. ರೂಪ ಹೇಗೆ ? ಕಣ್ಣಿಗೆ ? ಕಪ್ಪಗೆ, ದಪ್ಪಗೆ, ಕೋರೆ ಹಲ್ಲು – ?

ಪುಟ್ಟೆ—ಲೋ ಲೋ ಲೋ ಬಿಡಿತು ಬಿಡಿತು ಅನ್ನೋ...ನಮ್ಮ ಸರೋಜ—ಲೋ, ಅವಳು ಪದ್ಮಿನೀನೋ ! ಬಣ್ಣ, ಹಾಲುಬೆಳುದಿಂಗಳೋ !

ಭೀಮು—ಓ ಹೋ –

ಪುಟ್ಟೆ—ಹೂ...ಅಯ್ಯೋ, ನನಗೇನು ಆಗಿದೆ ಇವತ್ತು—ಪೋಟೋ

ಕೈಯಲ್ಲಿಟ್ಟುಕೊಂಡು ಪುರಾಣ ಹೇಳುತ್ತಾ ಇದ್ದೀನಿ ನೋಡೋ!... ತೊಗೋ...ನೋಡು...ಹೇಗಿದ್ದಾಳೋ ?

ಭೀಮು— ಜೋಯಿಸರೇ, ಅರ್ಜುನನಿಗೆ ಶಾಪ ಕೊಟ್ಟ ಊರ್ವಶಿ ಇದ್ದ ಹಾಗಿದಾಳಲ್ರೀ !

ಪುಟ್ಟ—ಮತ್ತೆ !

ಭೀಮು —ಅಲ್ಲ, ಜೋಯಿಸರೇ, ಇಂಥ ಚೆಲುವಾಂಬೆಯನ್ನು ಬಿಟ್ಟು ಆ ತಂಗಿಯನ್ನು ಮಾಡಿಕೋ ಅಂದಿರಲ್ಲಾ —

ಪುಟ್ಟ—ಅಂದೆ. ಯಾಕೆ ಅಂದೆ? ಇವಳು ಚೆಲುವಾಂಬೆಯೇನೋ ಹೌದು. ಆದರೆ ರೂಪ ಒಂದೇ ಮುಖ್ಯವೇನೋ ?

ಭೀಮು—ಮುಖ್ಯಗಳ ಮುಕ್ತಾಹಾರದಲ್ಲಿ ರೂಪ ಮೊಗಟಿದ್ದ ಹಾಗೆ. ಅದು ಇದ್ದೇ ತೀರಬೇಕು. ಇಲ್ಲದೆ ಇರುವುದು ಏನು ? ವಿದ್ಯೆ ನೈವೇದ್ಯವೋ? ಅ ಆ ಇ ಈ ನಾದರೂ ಬರುತ್ತೋ —

ಪುಟ್ಟ—ಫ, ಅವಳು ಬಿ.ಎ. ಪ್ಯಾಸು ಮಾಡಿದ್ದಾಳೆ, ಇಂಗ್ಲೀಷಿನಲ್ಲಿ ! ಅ ಆ ಇ ಈ ನಂತೆ ! ಆಮೇಲೆ ಕೇಳು, ಹಿಂದಿಯಲ್ಲಿ ಮಧ್ಯಾಹ್ನಿಕ, ರಾಷ್ಟ್ರ ವೀರ (ಭೀಮು ನಗಲು) ಯಾಕೋ ನಗುತ್ತೀಯಾ ?

ಭೀಮು—(ನಗುತ್ತಾ) ಅಲ್ರೀ, ನಿಮಗೆ ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ ಮೂರು ಮೂರು ಹೊತ್ತೂ ಮೂಗು ಹಿಡಿದುಕೊಂಡು ಸಂಧ್ಯಾವಂದನೆ ಮಾಡಿ ಮಾಡಿ, ಅದು ನಿಮ್ಮ ಕನ್ನಡವನ್ನು ಕುಲಗೆಡಿಸಿ ಬಿಟ್ಟಿದೆ. ಜೋಯಿಸರೇ, ಹಿಂದಿಯಲ್ಲಿ ಪ್ಯಾಸು ಮಾಡುವುದು ಮಧ್ಯಾಹ್ನಿಕ ಅಲ್ಲ, ಮಾಧ್ಯಮಿಕ ; ಪ್ರಾಥಮಿಕ ಆದ ಮೇಲೆ ಮಾಧ್ಯಮಿಕ ; ಅಯ್ಯೋ, ನೀವು ಯಾಕೆ ಹೀಗೆ ಮಿಕ ಮಿಕ ನೋಡುತ್ತೀರಿ ?

ಪುಟ್ಟ—ಅಲ್ಲವೋ —

ಭೀಮು —ಆಮೇಲೆ ಕೇಳಿ. ಈ ಮಿಕೆಗಳಾದ ಮೇಲೆ ರಾಷ್ಟ್ರಭಾಷ ! (ನಗುತ್ತಾ) ರಾಷ್ಟ್ರವೀರ, ಛತ್ರಪತಿ—

ಪುಟ್ಟ—ಲೋ, ಲೋ, ನನಗವೆಲ್ಲಾ ಏನು ಗೊತ್ತೋ ? ನಾನು ಹೇಳಿದ್ದು ಅವಳಿದೆಲ್ಲಾ ಪ್ರ್ಯಾಸು ಮಾಡಿದ್ದಾಳೆ ಅಂತ.

ಭೀಮು—ಭಲೆ !

ಪುಟ್ಟ—ಷಹಬ್ಬಾಸ್ ಅಂತಲೂ ಅನ್ನು, ಇನ್ನೂ ಹೇಳುತ್ತೇನೆ.

ಭೀಮು—ಅಂ ?

ಪುಟ್ಟ—ಹೂಂ. ಅವಳು ಸಂಗೀತದಲ್ಲೂ ಘಸ್ಟೋ. ವೀಣೆ ಹಿಡಿದು ಕೂತರೆ ಸತ್ಯಲೋಕದಿಂದ ಇಳಿದು ಬಂದ ಸರಸ್ವತೀನೋ !

ಭೀಮು—ಓಹೋಹೋಹೋ—ಅ ಆ ಇ ಈ, ಎ ಬಿ ಸಿ ಡಿ, ಸರಿಗಮ, ಜೋಯಿಸರೇ, ವಹ್ವವ್ಹಾ ಅನ್ನುತ್ತೇನೆ, ಮುಂದೆ ಹೇಳಿ. ಇನ್ನೂ ಏನೇನು—

ಪುಟ್ಟ—ಹೇಳುತ್ತೀನೋ ! ಭೀಮು, ಅವಳು ಡ್ಯಾನ್ಸು ಮಾಡು ತ್ತಾಳೋ, ರಂಭೆ ಊರ್ವಶಿಯರನ್ನು ನಿವಾಳಿಸಿ ಎಸೆಯಬೇಕೋ !

ಭೀಮು—ತ್ಸು ತ್ಸು ತ್ಸು ತ್ಸು –

ಪುಟ್ಟ—ಆಮೇಲೆ ನಾಜೂಕು ಕೆಲಸಗಳು ! ಹೊಲಿಗೆ, ಕಸೂತಿ -

ಭೀಮು—ಕೂಸು ಹುಟ್ಟೋಕ್ಕೆ ಮುಂಚೆ ಕುಲ್ಲಾವಿ ಹಾಕುತ್ತಾಳೆ ?

ಪುಟ್ಟ—ಕೂಸು ಯಾಕೆ, ಕೂಸಿನ ಅಪ್ಪನಿಗೇ -

ಭೀಮು—ಟೋಪಿ ?

ಪುಟ್ಟ—ಹಾಕಬಲ್ಲಳು. ಹಾಕುತ್ತಾಳೆ. ನೆಲದ ಮೇಲೆ ರಂಗೋಲೆ –

ಭೀಮು—ಜೋಯಿಸರೇ, ಸಾಕು ಸಾಕು...ನೆಲ, ಆಕಾಶ...ಸಾಕು... ಅಲ್ಲ, ಇಷ್ಟೆಲ್ಲಾ ಇರುವ ಈ ಸಕಲ ವಿದ್ಯಾಪಾರಂಗತೆಯನ್ನು ಬಿಟ್ಟು –

ಪುಟ್ಟ—ಅಲ್ಲವೋ, ಇವೆಲ್ಲಾ ಇಲ್ಲ ಅಂತ ನಾನು ಅನ್ನಲಿಲ್ಲವೋ... ಆದರೆ ಹೆಂಗಸಿಗೆ ಏನಿದ್ದರೆ ಏನೋ – ಗುಣ, ಗುಣ ಅನ್ನುವುದು –

ಭೀಮು—ಹೌದು...ಇವಳಿಗೆ ಗುಣವೇ ಇಲ್ಲವೇನು ? ಅಥವಾ ಇದ್ದರೆ ಏನಿವಳ ಅವಗುಣ ?

ಪುಟ್ಟಿ—ಒಂದೇ ಮಾತಿನಲ್ಲಿ ಹೇಳಬೇಕು ಅಂದರೆ – ನಮ್ಮ ಹಳೆ ಪುರಾಣದ ಚಂಡಿ ಕತೆ ಕೇಳಿದ್ದೀಯೋ ಇಲ್ಲವೋ ?

ಭೀಮು—ಉದ್ದಾಲಕನ ಹೆಂಡತಿ ?

ಪುಟ್ಟಿ—ಅವಳೇ. ಹಬ್ಬ ಅನ್ನು, ತಿಥಿ ಅನ್ನುತ್ತಾಳೆ. ಹುಣ್ಣಿಮೆ ಅನ್ನು-

ಭೀಮು—ಅಮಾವಾಸ್ಯೆ ಅನ್ನುತ್ತಾಳೆ ?

ಪುಟ್ಟಿ—ಭೂಮಿ ಅನ್ನು –

ಭೀಮು—ಆಕಾಶ ?

ಪುಟ್ಟಿ—ಏತಿ ಅಂದರೆ ಪ್ರೇತಿ.

ಭೀಮು—ನನಗೆ ಅಂಥವಳನ್ನು ಕಂಡರೇ ಪ್ರೀತಿ.

ಪುಟ್ಟಿ—ಹುಚ್ಚ !

ಭೀಮು—ನನಗೆ "ಏನೇ" ? ಅಂದರೆ, "ಏನೂಂದ್ರೆ ?" ಅನ್ನುವವಳು, "ಬರುತ್ತೀಯಾ ?" ಅಂದರೆ, "ಬರೊಲ್ಲ ಅನ್ನುತ್ತೇನೆಯೇ" ಅನ್ನುವವಳು,ನೀರಸ. ಹಳ್ಳಿಯಲ್ಲಿ ಹೊತ್ತು ಹೋಗಬೇಕಲ್ಲಾ, ಜೋಯಿಸರೇ.

ಪುಟ್ಟಿ—ಹೊತ್ತು ಹೋಗೊಕ್ಕೋಸ್ಕರ ಹೊಡೆದಾಡುವವಳು ಬೇಕು ?

ಭೀಮು—ಬೇಕು. ನೀವು ನನ್ನ ವಿಷಯಕ್ಕೆ ಸಂಕೋಚ ಪಟ್ಟುಕೊಳ್ಳ ಬೇಡಿ. ನಾನು ಈ ಹಿಡಂಬಿಯ ನೀವು ಹೇಳಿದ ಯಾವ ಕಲ್ಯಾಣಗುಣಗಳಿಗೂ ಬೆದರುವ ಗಿರಾಕಿ ಅಲ್ಲ. ನಾನು ಸಾಮಾನ್ಯವಾಗಿ ಹಸುವಿನ ಹಾಗೆ ಸಾಧು ಪ್ರಾಣಿಯೇ. ಆದರೆ ಸಂದರ್ಭಕ್ಕೆ ತಕ್ಕಹಾಗೆ ಹುಲಿಯಾಗಬಲ್ಲೆ. ಅವಳು ನಗುನಗುತ್ತಿದ್ದರೆ, ನಾನೂ ಮೂವತ್ತೆರಡು ಹಲ್ಲುಗಳನ್ನೂ ತೋರಿಸುತ್ತೇನೆ. ಕಿರಿಚಿದಳೂ, ಅರಚುತ್ತೇನೆ. ಗುಡುಗಿದಳೂ, ಸಿಡಿಲಾಗುತ್ತೇನೆ. ನನ್ನ ತಂತ್ರ, ಅಗ್ನೇಯಾಸ್ತ್ರಕ್ಕೆ ವಾರುಣಾಸ್ತ್ರ ಅಲ್ಲ, ಆಗ್ನೇಯಾಸ್ತ್ರವೇ...! ಈಗ ನಡೆಯಿರಿ ಗುಹೆಗೆ ಹೋಗೋಣ.

ಪುಟ್ಟಿ—ಭೀಮು...ಲೋ, ಭೀಮು...ನಾನು...ನೋಡು, ನಾನು ಹೇಳುವುದೆಲ್ಲಾ ಕೇಳಿದೆ-

ಭೀಮು— – ಕೇಳದೆ ಈ ಕಂಪೆನಿ ಅನುಭವಿಸಬಹುದಾದ ನಷ್ಟಕ್ಕೆ ನಾನೇ ಹೊಣೆ – ನಡೆಯಿರಿ...ಹುಂ...

ಪುಟ್ಟಿ—ಆಯಿತು. ಆಯಿತು ಬಿಡು...ಒಟ್ಟಿನಲ್ಲಿ ರಾವ್‌ಸಾಹೇಬರ ಪುಣ್ಯ –

ಭೀಮು—ರಾವ್ ಸಾಹೇಬರು ? ಯಾರವರು ?

ಪುಟ್ಟಿ—ಓ...ನಾನು ಹೇಳಲೇ ಇಲ್ಲ ! ಅವರೇ ನಿನ್ನ ಮಾವನೋ... ರಾವ್‌ಸಾಹೇಬ ರಾಮರಾಯರು ಅಂತ...ಭಾರಿ ಶ್ರೀಮಂತರು...ಆಮೇಲೆ, ಭೀಮು, ಇನ್ನೊಂದು ವಿಷಯ –

ಭೀಮು—ಏನು ?

ಪುಟ್ಟಿ—ಅವರಂದಿದ್ದರು, ಈ ಕುಮಾರಿಯನ್ನು ಮದುವೆ ಮಾಡಿ ಕೊಳ್ಳುವ ಮು...ಮು...

ಭೀಮು—ಮುತ್ತೈಳನಿಗೆ ಅನ್ನಿ ... ಸಂಕೋಚ ಏನು ? ಬೇರೆ ಪದ ಹೊಂದುವುದೇ ಇಲ್ಲ.

ಪುಟ್ಟಿ—(ನಗುತ್ತಾ) ಮುಕ್ಕಾಲು ಆಸ್ತಿ ಕೊಡುತ್ತೇನೆ ಅಂದಿದ್ದಾರೋ– ಎರಡು ಮೂರು ಲಕ್ಷಕ್ಕೆ ಕಡಿಮೆ ಇಲ್ಲ.

ಭೀಮು—ಎರಡು ಮೂರು ಲಕ್ಷ ? – ಹಾಗಾದರೆ ನಡೆಯಿರಿ. ನಾಳೆ ಮದುವೆ. ನಾಡಿದ್ದು –

ಪುಟ್ಟಿ—ಭೀಮು, ಭೀಮು, ಈಗ ಸಧ್ಯಕ್ಕೆ ನಮ್ಮ ಮನೆಗೆ ಹೋಗೋಣ ನನ್ನ ಇವಳನ್ನೂ ನೋಡಿದ ಹಾಗಾಗತ್ತೆ. ತೊಗರಿ ನುಚ್ಚಿನ ಉಂಡೆ ಮಾಡು ತ್ತೇನೆ ಅಂದಿದ್ದಳು. ಊಟ ಮಾಡಿ, ಸ್ವಲ್ಪ ಹೊತ್ತು ಮಲಗಿ, ಕಾಫಿ ಕುಡಿದು–

ಭೀಮು—ಉ ಹು ಹು...ಮೊದಲು–

ಪುಟ್ಟಿ—ಈಗ ರಾಹುಕಾಲವೋ – ಅದಕ್ಕೆ ಹೇಳುತ್ತಾ ಇದ್ದೀನಿ–

ಭೀಮು—ಓ, ಹಾಗಾದರೆ ಸರಿ. ರಾಹುವನ್ನ ಎದುರು ಹಾಕಿಕೊಳ್ಳುವ ಹಾಗಿಲ್ಲ...ಹೀಗೆ ಮಾಡೋಣ. ಇಲ್ಲೇ ನನ್ನ ಸ್ನೇಹಿತ ಒಬ್ಬಿದಾನೆ. ಸೆಂಟ್ರಲ್ ಹೋಟೆಲಲ್ಲಿ. ಅವನನ್ನು ನೋಡಿಕೊಂಡು ಬರುತ್ತೇನೆ.

ಪುಟ್ಟಿ—ಸ್ನೇಹಿತ ಅಂತ ಹರಟೆ ಕೊಚ್ಚುತ್ತಾ ಮರೆತುಬಿಟ್ಟರೆ ?

ಭೀಮು—ಏನು, ಜೋಯಿಸರೇ. ಮದುವೆ ವಿಷಯದಲ್ಲೂ ಮೈ ಮರೆಯಬಲ್ಲನೇ ಮನುಷ್ಯ...? ಇಲ್ಲಿ ನೋಡಿ, ಈ ಸ್ವೀಟ್ ಹಾರ್ಟ್, (ಫೋಟೋ ಜೇಬಿಗಿಡುತ್ತಾ) ಇಲ್ಲಿರುತ್ತಾಳೆ. ನಿಯರೆಸ್ಟ್ ಟು ದಿ ಹಾರ್ಟು... ಮರೆತರೆ ಬಡಿದು ಎಬ್ಬಿಸುತ್ತಾಳೆ. ಊಟಕ್ಕೆ ಕಾಯಬೇಡಿ. ಉಂಡೆ ಖಾಲಿ ಮಾಡಬೇಡಿ. ಕಾಫಿ ಟೈಮಿಗೆ ಹಾಜರ್...ಗುಡ್ ಮಾರ್ನಿಂಗ್...ಓ... ನಮಸ್ಕಾರ...ಇವಳ ಪ್ರಭಾವ, ಜೋಯಿಸರೇ -

ಪುಟ್ಟಿ—ಹೋಗೋ...ಅತೀ...

(ಬೇರೆ ಬೇರೆಯಾಗಿ ನಿಷ್ಕ್ರಮಿಸುವರು

ದೃಶ್ಯ ೩

[ಸೆಂಟ್ರಲ್ ಹೋಟೇಲಿನಲ್ಲಿ ಚಂದ್ರೂ ಕೋಣೆ. ಮೆಡಿಕಲ್ ಕಾಲೇಜು ವಿದ್ಯಾರ್ಥಿಯ, ಸಂಗೀತಗಾರನ ಕೋಣೆ. ಚಂದ್ರು : ಹಾಸಿಗೆಯಲ್ಲಿ ಒರಗಿ, ಶಾಂತೂ ಫೋಟೋ ಕೈಯಲ್ಲಿ ಹಿಡಿದು, ಅವಳ ಮೇಲೆ ತಾನೇ ರಚಿಸಿದ ಒಂದು ಪ್ರೇಮ ಗೀತೆ ಹಾಡುತ್ತಿರುವನು. ಭೀಮು ಪ್ರವೇಶಿಸಿ, ಗೊತ್ತುಕೊಡದೆ ಗೋಡೆಗೆ ಒರಗಿಸಿದ್ದ ಬೈಸಿಕಲ್ಲಿಗೆ ಬೆನ್ನು ಕೊಟ್ಟು, ಗೋವನ್ನು ಒರಗಿ ನಿಂತ ಕೃಷ್ಣನಂತೆ ನಿಲ್ಲುವನು. ಗೀತೆ ಕೇಳುವನು. ನಂತರ, ಸೈಕಲ್ಲ ಬೆಲ್ಲು ಬಾರಿಸುವನು]

ಚಂದ್ರು—(ಗಾಬರಿಯಿಂದ) ಆಂ ?

ಭೀಮು—ಭಲೆ, ಶಹಬ್ಬಾಸ್. ವಹ್ವಾವಾ -

ಚಂದ್ರು—ಆಂ ? ಭೀಮು ? ನೀನು ? (ಫೋಟೋವನ್ನು ಹಾಸಿಗೆಯಡಿ ಅವಿಸಿಡುತ್ತಾ) ಯ...ಯ...ಯಾವಾಗ ಬಂದೆಯೋ ?

ಭೀಮು—(ನುಗ್ಗಿ) ಲೋ ಲೋ ಲೋ ಕೊಲೆ ಕೊಲೆ ? (ಫೋಟೋ ಹೊರಗೆಳೆಯುತ್ತಾ) ಏನೋ -

ಚಂದ್ರು—ಲೋ, ಲೋ, ಇಲ್ಲಿ ಕೊಡು -

ಭೀಮು—ಹಿಡೀ, ನಾನು ಎತ್ತಿಕೊಂಡು ಹೋಗೋಲ್ಲಪ್ಪಾ, ಇವಳನ್ನ,

ಚಂದ್ರು—ಹಾಗಲ್ಲವೋ -

ಭೀಮು—ಇನ್ನು ಹೇಗೋ ? ಎಂಥ ಪ್ರೀತಿಯೋ ಇದು ? ಗಂಡಸು ಹೆಂಗಸನ್ನು ಪ್ರೀತಿಸಿ, ಅವಳ ಫೋಟೋ ಕೈಯಲ್ಲಿಟ್ಟುಕೊಂಡು ಹಾಡು ಹೇಳುವುದು ರಾಜಮಾರ್ಗ. ನಮ್ಮ ಸಂಸ್ಕೃತ ನಾಟಕ ರಾಜರೆಲ್ಲಾ ಹಿಡಿದ ಮಾರ್ಗ. ನೀನು ಹೀಗೆ ಇವಳನ್ನ ಹಾಸಿಗೆ ಕೆಳಗೆ ಮಲಗಿಸುವುದು (ಫೋಟೋ ನೋಡಿ) ಅಂ ? ಅಲೆ ! ಅಲೆ ! ಲೋ, ಚಂ...ಚಂದ್ರೂ, ಯಾರಿವಳು ?

ಚಂದ್ರು—ಯಾಕೋ - ?

ಭೀಮು—ಬೇಗ ಹೇಳೋ, ಬೇಕೂಫಾ, ಕ್ವಿಕ್ -

ಚಂದ್ರು—ಇವಳು, ಈ ಊರಿನಲ್ಲಿ ರಾಮರಾಯರು ಅಂತ ಇದ್ದಾರೆ -

ಭೀಮು—ರಾವ್‌ಸಾಹೇಬ್ ರಾಮರಾಯರು - ?

ಚಂದ್ರು—ಹೌದು. ನಿನಗೆ ಹೇಗೆ ಗೊತ್ತೋ ಅವರು ?

ಭೀಮು—ತಡಿ, ತಡೀ... (ಮತ್ತೆ ಚಿತ್ರ ನೋಡಿ) ಇವಳು ಅವರ ಎರಡನೇ ಮಗಳಲ್ಲವೇನೋ ?

ಚಂದ್ರು—ಹೌದು - ನೀನು -

ಭೀಮು—ತಡಿ.. (ತನ್ನ ಜೇಬಿನಿಂದ ಸರೋಜಳ ಫೋಟೋ ಹೊರಗೆ ತೆಗೆದು ತೋರಿಸುತ್ತಾ) ನೀನು ಇವಳನ್ನು ನೋಡಿದ್ದೀಯಾ ?

ಚಂದ್ರು—ಇವಳು ? ಮೈಗಾಡ್...ಇವಳು ಇವಳ ಅಕ್ಕನೋ !

ಭೀಮು—ಇವಳು ಇವಳ ತಂಗಿ ?

ಚಂದ್ರು—ಹೌದು. ಅವಳ ಹೆಸರು ಸರೋಜ ಅಂತ. ಆ ಫೋಟೋ ಹೇಗೆ ಬಂತೋ ನಿನ್ನ ಹತ್ತಿರ ?

ಭೀಮು—ಫೋಟೋ ಅಷ್ಟೇ ಅಲ್ಲ, ಇವಳೇ ಬಂದುಬಿಡುತ್ತಾಳೆ ನನ್ನ ಹತ್ತಿರ.

ಚಂದ್ರು—ಏನು ?

ಭೀಮು—ಹೂ[illegible]ಲೋ !

ಚಂದ್ರು—ಆಂ ?

ಭೀಮು—ನಾನು ಯಾರು ಗೊತ್ತೇನೋ ಈಗ ?

ಚಂದ್ರು—ನೀನು -

ಭೀಮು—ನೀನು ಯಾರು ಗೊತ್ತೇನೋ ಈಗ ?

ಚಂದ್ರು—ನಾನು -

ಭೀಮು—ನಾವು ಯಾರು ಗೊತ್ತೇನೋ ಈಗ ? ಡ್ಯಾಂ ಫೂಲ್, ನಾವಿಬ್ಬರೂ ಈ ಅಕ್ಕ ತಂಗಿಯರ ಗಂಡಂದಿರೋ, ದೇರ್‌ಫೋರ್ ಅಣ್ಣ ತಮ್ಮಂದಿರೋ ! ಇನ್ನು ಕೆಲವೇ ಗಂಟೆಗಳಲ್ಲಿ ಇಂಟರ್‌ವ್ಯೂ, ನಾಳೆ ಮದುವೆ, ನಾಡಿದ್ದು -

ಚಂದ್ರು—ಈಡಿಯಟ್ !

ಭೀಮು—ಯಾಕೋ ?

ಚಂದ್ರು—ಫೂ—ಲ್ !

ಭೀಮು—ಲೋ !

ಚಂದ್ರು—ಆಸ್ !

ಭೀಮು—ಚಂದ್ರೂ - ?

ಚಂದ್ರು—ಯಾರು, ಯಾರೋ ನಿನಗೆ ಟೋಪಿ ಹಾಕಿದ್ದು ?

ಭೀಮು—ಯಾರೂ ಹಾಕಲಿಲ್ಲಿ, ನಾನೇ ಹಾಕಿಕೊಂಡೆ. ಪುಟ್ಟಾ ಜೋಯಿಸರು ಅಂತ ಇದ್ದಾರೋ - ನಮ್ಮ ಅಪ್ಪನ ದೋಸ್ತು...ಅವರು ತೋರಿಸಿದರು. ನಾನು - .

ಚಂದ್ರು—ಹಾಕಿಕೊಂಡಿ ?...ದೇವರ ದಯ. ಇಟ್ ಈಸ್ ನಾಟ್ ಟೂ ಲೇಟ್...ಈ ಯೋಚನೆ ತಕ್ಷಣ ಬಿಡು. ಇವಳು, ಷೀ ಈಸ್ ದಿ ಟೆರ್‍ರರ್ ಆಫ್ ದಿ ಹೋಲ್ ಟೌನು, ಭೀಮು.

ಭೀಮು—ದಟ್ ಈಸ್ ಎಕ್ಸಾಕ್ಟ್ಲೀ ವೈ ಐ ವಾಂಟ್ ಟು ಮ್ಯಾರಿ ಹರ್, ಚಂದ್ರೂ.

ಚಂದ್ರು—ಲೋ -

ಭೀಮು—ಸ್ವಲ್ಪ ತಡಿಯೋ. ನಿನಗೆ ಯಾಕೋ ಈ ಸುಕುಮಾರಿಯ ಮೇಲೆ ಇಷ್ಟು ಆಗ್ರಹ ?

ಚಂದ್ರು—"ಸುಕುಮಾರಿ" ? ಯಾವೋಳೋ "ಸುಕುಮಾರಿ" ?

ಭೀಮು—ಇವಳು.

ಚಂದ್ರು—ಇವಳು ಸುಕುಮಾರಿ ಅಲ್ಲ. ಕುಮಾರಿ ಹೌದು. ಇನ್ನೂ ಸರಿಯಾಗಿ ಹೇಳಬೇಕು ಅಂದರೆ ಆ "ಕು"ನೂ ಕಿತ್ತಿ ಹಾಕಿ ಬರಿ "ಮಾರಿ" ಅನ್ನ ಬೇಕು. ಷಿ ಈಸ್ ಪ್ಯೂರ್ ಅಂಡ್ ಸಿಂಪಲ್ ಮಾರಿ !

ಭೀಮು—ಆಲ್ ರೈಟ್. ಹಾಗೇ ಆಗಲಿ. ಈ ಮಾರಿಯನ್ನ ಮ್ಯಾರಿ ಮಾಡಿಕೊಂಡು, ಇವಳನ್ನ ಒಬ್ಬ ನಾರ್ಮಲ್ ನಾರಿ ಮಾಡೋಕ್ಕಾಗತ್ತೋ ಇಲ್ಲವೋ ನೋಡೋಣ. ಎಕ್ಸ್‌ಪೆರಿಮೆಂಟು –

ಚಂದ್ರು—ಎಕ್ಸ್‌ಪೆರಿಮೆಂಟು ಹೇಗೋ? ಕಟ್ಟಿಕೊಂಡ ಮೇಲೆ ಬಿಡುವ ಬಾಬತ್ತೆಲ್ಲೋ ?

ಭೀಮು—ನನಗೆ ಗೊತ್ತು. ಆದರೆ ಹಾಗಂತ ಹೆದರಿ ತೆಪ್ಪನೆ ಕೂಡುವ ಹೇಡಿತನ ನನಗೆ ಹಿಡಿಸೊಲ್ಲ. ಅಲ್ಲದೆ ನಾವು, ಕೈಲಾಸಂ ಹೇಳುತ್ತಿದ್ದ ಹಾಗೆ, ಈ ಭೂಮಿಯಲ್ಲಿ ಹುಟ್ಟಿದ್ದು ಸಾರ್ಥಕ ಎನ್ನಿಸಬೇಕಾದರೆ ನೆರೆಹೊರೆಯವರಿಗೆ ಉಪಕಾರಿಗಳಾಗಬೇಕು. ಈಗ ಈ ಮಗಳಿಂದ ಮಾತಾಪಿತೃಗಳಿಗೆ ಸಂಕಟ ; ಊರಿನವರಿಗೆ ಭಯ ; ಇವಳ ಕುತ್ತಿಗೆಗೆ ಯಾರು ಧೈರ್ಯ ಮಾಡಿ ತಾಳಿ ಬಿಗಿಯುತ್ತಾರೋ ? ಕ್ರಮ ತಪ್ಪಬಹುದಾದರೂ, ಅಕ್ಕನ ಕುತ್ತಿಗೆಗೆ ತಾಳಿ ಬಿತ್ತು ಅಂದರೆ, ತಂಗಿ ಅಡೆತಡೆಯಿಲ್ಲದೆ ರಿಲೀಸಾಗುತ್ತಾಳೆ ಸ್ವಯಂವರಕ್ಕೆ - ನಿನಗೆ ! ಎಷ್ಟು ದಿನ ನೀನು ಹೀಗೆ ಮಂಚದ ಮೇಲೆ ಹಾಡುತ್ತಾ, ಕೆಳಗೆ ಅವಳನ್ನ ಮಲಗಿಸುತ್ತಾ –

ಚಂದ್ರು—ಹೌದೋ. ನಾನದೆಲ್ಲಾ ಒಪ್ಪುತ್ತೇನೋ. ಆದರೆ ನಮ್ಮ ಸೌಕರ್ಯಕ್ಕೋಸ್ಕರ ನೀನು –

ಭೀಮು—ಏನೋ ನೀನೂ ಹೀಗೆ ಹೆದರುತ್ತೀಯಾ ? ನಾನೇನು ಮೇಕೆ ಮಯೆರೀನೋ – ?

ಚಂದ್ರು—ಗೊತ್ತು, ನಿನ್ನ ಸಹವಾಸ ಕರಡಿ ಸಹವಾಸ ಅಂತ ಗೊತ್ತು. ಮೈ ಕೊಡವಿದರೆ ಮುಳ್ಳು ಹಂದಿಯೇ ಅಂತ ಗೊತ್ತು. ಆದರೂ –

ಭೀಮು—ಆದರೂ ಗೀದರೂ ಅಂತ ಅಪಶಕುನ ನುಡಿಯೊಕ್ಕೆ ತೊಡಗ ಬೇಡ. ನನ್ನ ಕೇಸು ಸೆಟಲ್ಡು. ಈಗ ನಿನ್ನ ಕತೆ ಸ್ವಲ್ಪ ಹೇಳು. ನಿನ್ನ ರೊಮ್ಯಾನ್ಸು –

ಚಂದ್ರು—ರೊಮ್ಯಾನ್ಸ್ ಗಿಮ್ಯಾನ್ಸ್ ಏನಿಲ್ಲಪ್ಪಾ !

ಭೀಮು—ಸ್ಟ್ರೈಟ್ ಲವ್ವು. ಆಗಲಿ ಅದೇ ಹೇಳು.

ಚಂದ್ರು—ಹೇಳುವುದೇನಿಲ್ಲವೋ...ನಾವು ಕ್ಲಾಸ್‌ಮೇಟ್ಸೊ –

ಭೀಮು—ಗುಡ್ ಸ್ಟಾರ್ಟಿಂಗು. ಆಮೇಲೆ ?

ಚಂದ್ರು—ನಮ್ಮ ಕಾಲೇಜ್ ಯೂನಿಯನ್ ಒಂದು ಸರ್ತಿ ನನ್ನ ಸಂಗೀತದ ಪ್ರೋಗ್ರಾಂ ಅರೇಂಜ್ ಮಾಡಿತು.

ಭೀಮು—ಸರೀ –

ಚಂದ್ರು—ನಾನು ಚೆನ್ನಾಗಿ ಹಾಡುತ್ತೀನಿ ಅಂತ ಗೊತ್ತಿತ್ತು. ಹಾಲು ತುಂಬಿ ಹೋಗಿತ್ತು.

ಭೀಮು—ಇವಳು ಎಲ್ಲರಿಗಿಂತ ಮುಂಚೆ ಬಂದು ಮೊದಲು ಸಾಲನ್ನು ಅಲಂಕರಿಸಿದ್ದಳು ?

ಚಂದ್ರು—ಲೋ -

ಭೀಮು—ಇಲ್ಲ ಅನ್ನು, ಕೆನ್ನೆಗೆ ಹೊಡೆದುಕೊಳ್ಳುತ್ತೇನೆ.

ಚಂದ್ರು—ಇಲ್ಲವೋ, ಕೂತಿದ್ದಳೋ !

ಭೀಮು—ನಮ್ಮ ದೇವಿ ಸತ್ಯ ನನಗೆ ಗೊತ್ತಿಲ್ಲವೇ ! ಹುಂ, ಮುಂದು ವರಿಸು. .

ಚಂದ್ರು—ಸಂಗೀತ ತುಂಬ ಚೆನ್ನಾಗಾಯಿತು.

ಭೀಮು—ಯಾರ ಅಪ್ಪನ ಉಪಕಾರಕ್ಕೆ ? ಕಣ್ಣೆದುರಿಗೆ ಇನ್ಸ್‌ಪಿ-ರೇಷನ್ ಹೆಣ್ಣಾಗಿ ಕೂತಿರಲಿಲ್ಲವಾ ?...ಹೇಳೋ...ಇರಲಿ ಹೇಳೋ—ಹುಂ—

ಚಂದ್ರು—ಕಚೇರಿ ಮುಗಿದ ಮೇಲೆ ಕಂಗ್ರಾಚ್ಯುಲೇಷನ್ಸ್ ಸುರಿಮಳೆ.

ಭೀಮು—ಈ ಮಳೆಯಲ್ಲಿ, ಈ ಸರ್ವಮಂಗಳೆ, ಛತ್ರಿ ಹಿಡಿದು ನಿನ್ನ ಮುಂದೆ ಬಂದು, "ಥಾಂಕ್ ಯೂ ಫಾರ್ ಯುವರ್ ಸ್ವೀಟ್ ಮ್ಯೂಸಿಕ್" ಅಂತ ಮ್ಯೂಸಿಕಲ್ಲಾಗಿ ಅಂದು, ನಗುಗಳ ಮಲ್ಲಿಗೆ ಹಾರ ನಿನ್ನ ಕೊರಳಿಗೆ ಹಾಕಿದಳು !

ಚಂದ್ರು—ಲೋ, ಭೀಮೂ, ನೀನು -

ಭೀಮು—ನಾನೇನಪ್ಪಾ ಮಾಡಲಿ ? ನನಗೆ ವರ—ವೋ ಇದು. ಹೀಗೇ ಆಗಿದೆ ಅಂತ ಚಾಚೂ ತಪ್ಪದೆ ಹೇಳಬಲ್ಲೆನೋ. ನಿನಗೆ ಅವಳು ಆ ಹಾರ ಹಾಕಿದಳು. ಆಗಿನಿಂದ ನೀನು ಅನ್ನ ಆಹಾರ ಬಿಟ್ಟು, ಸಂಗೀತಕ್ಕೆ ಸಲಾಮು ಹೊಡೆದು ಈ ಅಂಗನೆಯ ಭಜನೆ ಪ್ರಾರಂಭಿಸಿದಿ.

ಚಂದ್ರು—ಹೋಪ್ಲೆಸ್ ಫೆಲೋ –

ಭೀಮು—ತಪ್ಪು. ನಾನು ಯಾವಾಗಲೂ ಹೋಪ್‌ಫುಲ್ಲು ಫೆಲೊ. ಇರಲಿ, ಮುಂದಿನ ಅಧ್ಯಾಯ - ?

ಚಂದ್ರು—ನಾವು ಎಡರನೇ ಸರ್ತಿ ಮೀಟ್ ಮಾಡಿದ್ದು ಲೈಬ್ರರಿಯಲ್ಲಿ.

ಭೀಮು—ಒಂದು ಸೆಕೆಂಡ್. ಮೀಟ್ ಅಂದರೆ ಹೇಗೆ ? ನೀನು ಹೋಗುತ್ತಾ ಇದ್ದದ್ದು ನೋಡಿ ಅವಳು ಬಂದಳೋ, ಅವಳು ಹೋಗುತ್ತಾ ಇದ್ದದ್ದು ನೋಡಿ ನೀನು ಬೆನ್ನು ಬಿದ್ದೆಯೋ ?

ಚಂದ್ರು—ಇಲ್ಲ. ಇಲ್ಲ. ಹಾಗೇನಿಲ್ಲ. ಅದು ಜಸ್ ಆಕ್ಸಿಡೆಂಟ್ –

ಭೀಮು—ಪ್ರಮಾದ - ಪ್ರಮಾದ ಪ್ರೇಮ ! (ನಕ್ಕು) ಒಂದು ತರಹಾ ಕಾದಂಬರಿ ಟೈಟಲ್ಲಿದ್ದ ಹಾಗೆ ! ಉಂ...ಮೀಟ್ ಮಾಡಿದಿರಿ, ಆಮೇಲೆ—?

ಚಂದ್ರು—ಅಲ್ಲಿ ನಮ್ಮಿಬ್ಬರಿಗೂ ಒಂದೇ ಪುಸ್ತಕ ಬೇಕಾಗಿತ್ತು.

ಭೀಮು—ತ್ಸು ತ್ಸು ತ್ಸು...ಇಬ್ಬರದೂ ಒಂದೇ ಮನಸ್ಸು, ಒಂದೇ ಪುಸ್ತಕ ಬೇಕಾಗಿತ್ತು. ಹುಂ –

ಚಂದ್ರು—ಆ ಪುಸ್ತಕ ನಾನು ತೊಗೊಂಡುಬಿಟ್ಟಿದ್ದೆ.

ಭೀಮು—ಹುಂ–

ಚಂದ್ರು—ಅವಳು ಹುಡುಕಿ, ಹುಡುಕಿ, ಅದು ಸಿಗದೆ, ನನ್ನ ಕಡೆಗೆ ತಿರುಗಿ, "ಇಲ್ಲಿ ಒಂದು ಪುಸ್ತಕ ಇರಬೇಕಿತ್ತು, ಇಲ್ಲ" ಅಂದಳು—

ಭೀಮು—ಇನ್ನೇನು ಮಾಡುತ್ತಾಳೆ ?

ಚಂದ್ರು—ಅಂ ?

ಭೀಮು—ಅಲ್ಲವ್ರೋ ಪೆದ್ದಂಭಟ್ಟ .... ನೋಡಿದಳು, ನೋಡಿದಳು, ನಿನ್ನ ಬಾಯಿಂದ ಒಂದು ಮಾತು ಹೊರಡಲಿಲ್ಲ. ಇಲ್ಲದ ಪುಸ್ತಕದ ನೆಪ ತೆಗೆದು ತಾನೇ ಮಾತಾಡಿಸಿದಳು.

ಚಂದ್ರು—ಲೋ, ನನಗೆ–

ಭೀಮು—ಹೆದರಿಕೆ ಅಲ್ಲ, ಕೊಂಚ ಅಂಜಿಕೆ ! ಚಂದ್ರೂ, ನಾನೂ ಕಾಲೇಜನಲ್ಲಿ ಓದಿದ್ದೇನೋ–ಲೈಬ್ರರಿ ನೋಡಿದ್ದೇನೋ ; ನಮ್ಮ ನಮ್ಮ ಎತ್ತರದ ಬೀರುಗಳು, ನಡುನಡುವೆ ಸಣ್ಣ ಸಣ್ಣ ಓಣಿಗಳು - ಅಂಥ ಒಂದರಲ್ಲಿ ನೀವಿಬ್ಬರೇ ಇಬ್ಬರು....ಹೆದರಿಕೆ ಸಹಜವ್ರೋ !

ಚಂದ್ರು—ಭೀಮೂ.

ಭೀಮು—ತಪ್ಪಾಯಿತು, ನಾನು ಇಂಟರಪ್ಟ್ ಮಾಡೊಲ್ಲ, ಮುಂದು ವರಿಸು.

ಚಂದ್ರು—"ನಾನು ಆ ಪುಸ್ತಕ ತೊಗೊಂಡಿದ್ದೇನೆ" ಅಂತ ಅವಳಿಗೆ ಹೇಳಿದೆ.

ಭೀಮು—ಅಂ ? ಸೆಂಟೆನ್ಸ್ ಪೂರ್ತಿ ? ಈಗ ನೀನು ಹೇಳಿದ ಹಾಗೇ? ಒಂದು ಸರ್ತಿಯೂ ತೊದಲದೆ ? ಭಲೆ–

ಚಂದ್ರು —ಹೋಗೋ, ನಾನು–

ಭೀಮು—ಬಾರೋ, ಬಾರೋ–ಚಂದ್ರು, ಇನ್ನು ಮುಂದಿನದೆಲ್ಲಾ

ನಾನೇ ಹೇಳುತ್ತೇನೆ, ನನ್ನ ದಿವ್ಯದೃಷ್ಟಿಯಲ್ಲಿ ನೋಹುತ್ತಾ, ತಪ್ಪಿದಾಗ "ಸ್ಟಾಪ್"ಅನ್ನು, ಏನು ? ಅಹೆಮ್....ನಿನ್ನ ಮಾತನ್ನು ಕೇಳಿದ ಆ ಚಾರು ಹಾಸಿನಿ—"ಓ, ನೀವು ತೊಗೊಂಡಿದ್ದೀರಾ ? ಇಟ್ ಈಸ್ ಆಲ್ ರೈಟ್" ಅಂದು ನಕ್ಕಳು. "ನೀವು ಬೇಕಾದರೆ ತೊಗೊಳ್ಳಿ, ಓದಿ ಕೊಡಿ" ಅಂತ ನೀನು ಅಂದಿ. "ಉಂಟೆ, ಉಂಟೆ ? ನೀವೇ ಮೊದಲು ಓದಿ, ಆಮೇಲೇ ನನಗೆ ಕೊಡಿ" ಅಂದಳವಳು. "ನೋ, ನೋ, ಲೇಡೀಸ್ ಫಸ್ಟ್" ಅನ್ನುತ್ತಾ ನೀನು ಪುಸ್ತಕ ಕೊಟ್ಟೆ ; ಆವಳು ಇಸಕೊಳ್ಳಲಿಲ್ಲ. ಅದು ಕೆಳಗೆ ಬಿತ್ತು. "ಅಯ್ಯೋ, ಬಿತ್ತು" ಅನ್ನುತ್ತಾ ಇಬ್ಬರೂ ಅದನ್ನ ಎತ್ತೊಕ್ಕೆ ಒಟ್ಟಿಗೆ ಬಗ್ಗಿದಿರಿ ; ಆ-ಗ (ಹರಿಕಥೆಯಂಥೆ) ಆ ಯಾವ ಸಮಯದಲ್ಲಿ ಯಾವ ಆಕೆಯ ಮುಂಗುರುಳು ಗಳೂ, ನಿನ್ನ ಯಾವ-ಹೂ-ನಿನ್ನ ಮುಂಗುರುಳುಗಳೂ ಒಂದಕ್ಕೊಂದು ಢಿಕ್ಕಿ ಹೊಡೆದು-ಕಲಸಿ ಹೋದವು – ಸುಲಗ್ನ ಸಾವಧಾನ – ಸುಮುಹೂರ್ತ ಸಾವಧಾನ-ಲಕ್ಷ್ಮೀನಾರಾಯಣ ಧ್ಯಾನ–

ಚಂದ್ರು—ಲೋ, ಲೋ–ಏನು ಹಾರಿಬಿಟ್ಟೋ ನೀನು-

ಭೀಮು—ಯಾಕೋ ? ಹೇಳಿದ್ದು ಕರಾರುವಾಕ್ಕೇನೋ ? (ನಗುತ್ತಾ) ನಾನಾಗೇ ಹೇಳಲಿಲ್ಲ ?....ಬಿಡು. ಲೈಬ್ರರಿ ದೃಶ್ಯ ಮುಗಿಯಿತು. ಮುಂದೆ ಹೀಗೇ ಅನೇಕ "ಪ್ರಮಾದ"ಗಳು ಸಂಭವಿಸಿ, ಈ ಫೋಟೋ ಇಲ್ಲಿ ಬಂದು ತಲಪುವ ಘಟ್ಟ ಮುಟ್ಟಿದೆ, ಗಿಡ್ಡು. ಇವಳ ಅಪ್ಪನಿಗೆ ಗೊತ್ತಿದೆಯಾ ಈ.... ಈ....ನಿಮ್ಮ ಪ್ರೇಮಲೀಲೆ ?

ಚಂದ್ರು—ಉ ಹು ಹು ಗೊತ್ತಿರಲಾರದು.

ಭೀಮು—ಗೊತ್ತಿದೆಯೋ ಗೊತ್ತಿಲ್ಲವೋ ಅಂತ ನಿನಗೆ ಖಂಡಿತ ಗೊತ್ತಿಲ್ಲ ? ಬೇಡ, ನಿಮ್ಮ ಅಪ್ಪನಿಗಾದರೂ ಅಪ್ರೈಸ್ ಮಾಡಿದ್ದೀಯಾ ?.... ಚಂದ್ರೂ....ಯಾಕೋ ಮುಖ....ಚಂದ್ರಗ್ರಹಣದ ತರಹಾ– ?

ಚಂದ್ರು—ಕರೆಕ್ಟಾಗಿ ಹೇಳಿದಿ ನೀನು. ಇದು ಗ್ರಹಣದ ಬಾಬತ್ತೇ, ನಮ್ಮಪ್ಪನಿಗೆ ನಾನು ತಿಳಿಸಿಲ್ಲ, ತಿಳಿಸುವ ಹಾಗೂ ಇಲ್ಲ. ತಿಳಿಸುವ ಸಮಯವೂ ಅಲ್ಲ.

ಭೀಮು—ಏನೂ- ?

ಚಂದ್ರು—ನಾಡಿದ್ದು ಮದುವೆ –

ಭೀಮು—ಯಾರದು ?

ಚಂದ್ರು—ನಂದು.

ಭೀಮು—ಏನು ? ಏನೋ – ?

ಚಂದ್ರು—ನಮ್ಮ ಹಾರನಹಳ್ಳಿ ವಿಶ್ವೇಶ್ವರಭಟ್ಟರ ಮಗಳಿಲ್ಲವೇನೋ?

ಭೀಮು—ಗೌರಿ ?

ಚಂದ್ರು—ಹೂಂ, ಆ ಗೌರಿಯನ್ನು ತಂದುಕೊಳ್ಳುವುದು ಅಂತ ನಮ್ಮ ಅಪ್ಪನೇ ತೀರ್ಮಾನಿಸಿ–

ಭೀಮು—ಹೂಂ ?

ಚಂದ್ರು—ಮೂರು ಸಾವಿರ ರೂಪಾಯಿ ವರದಕ್ಷಿಣೆ ಇಸಗೊಂಡು-

ಭೀಮು—ಲೋ–

ಚಂದ್ರು—ಲಗ್ನಪತ್ರಿಕೆಯೂ ಮಾಡಿಸಿ, ಒಂದು ವಾರದಿಂದ ನನ್ನ ಎಕ್ಸ್‌ಪೆಕ್ಟ್ ಮಾಡುತ್ತಾ ಇದ್ದಾರೆ. ನಾಡಿದ್ದು ಬುಧವಾರ ಲಗ್ನ. ನಿನ್ನೆ ಸಂಜೆ ತಂತಿ ಬಂತು.

ಭೀಮು—ಭಲೆ....ಇದೀಗ ಹೇಳಬೇಕು....ನಿಮ್ಮ ಅಪ್ಪ ನಿನಗೆ ಚಂದ್ರು ಅಂತ ಹೆಸರಿಟ್ಟಿದ್ದು ಸಾರ್ಥಕ. ಚಂದ್ರಸಂಗೀತ ಕೂಲಾಗಿ ಕೂತು ಹಾಡು ಹೇಳುತ್ತಾ ಇದ್ದೀಯಲ್ಲೋ ! .... ಅಥವಾ....ನೀವಿಬ್ಬರೂ....ಮಾಮೂಲಿನ ಹಾಗೆ...ಮಾತಾಡಿಕೊಂಡು...ಆತ್ಮಹತ್ಯೆ - ?

ಚಂದ್ರು—ನೋ - ನೋ –

ಭೀಮು—ಯಾಕೆ, ಅದೇ ತಾನೇ ನಿಮ್ಮಂಥವರು ಮಾಡಿದ್ದು, ಇನ್ನೂ ಮಾಡುತ್ತಿರುವುದು ? ಮಾಡಬೇಕಾದ್ದೂ ಹೀಗೇನೋ ಏನೋ-ಸಾಹಿತಿಗಳ ಬೆನಿಫಿಟ್ಟಿಗೆ ! ರೋಮಿಯೋ ಜೂಲಿಯಟ್ಟರು ಸತ್ತರೆ ತಾನೇ, ಷೇಕ್ಸ್‌ಪಿಯರ್ ನಾಟಕ ಬರೆಯುವುದು ? (ತಲೆಯಾಡಿಸಿ) ನನಗೆ ಒಂದೂ ಅರ್ಥವೇ ಆಗೊಲ್ಲ. ಹಸಿವಾದರೆ ಚಿಪ್ಪು ಹಿಡಿದು ಹೊರಟು, ಮನೆ ಮನೆ ಮುಂದೆ ನಾಚಿಕೆಯಿಲ್ಲದೆ

ನಿಂತು "ಭವತಿ ಭಿಕ್ಷಾಂ ದೇಹಿ" ಕೂಗುತ್ತೀವಿ; ನೀರಡಿಕೆಯಾದಾಗ ಕೈ ಬೊಗಸೆ ಹಿಡಿದು, "ನೀರು, ಅಮ್ಮಾ" ಅಂತ ಚೀರುತ್ತೀವಿ. ಈ ಮದುವೆಯ ಹಸಿವು-ಬಾಯಾರಿಕೆ ಹುಟ್ಟಿದಾಗ ಸದ್ದಿಲ್ಲದೆ ಸತ್ತುಬಿಡುತ್ತೀವಿ! ನನಗೆ ದುರಂತ ಸ್ಟೇಜಿನಲ್ಲೂ ಆಗೊಲ್ಲ. ನನಗೆ ನಗು ಬೇಕು. ಸಂತೋಷ ಬೇಕು. ಮದುವೆ ಬೇಕು. ಮಕ್ಕಳು ಬೇಕು. ಅಡ್ಡಿ ಬರುವವರನ್ನ ಬಡಿದು ಬುದ್ಧಿ ಕಲಿಸಬೇಕು. ನಾನು ಕಲಿಸುತ್ತೇನೆ. ಕಲಿಸುವ ಶಕ್ತಿ ನನಗಿದೆ. ಏಳು, ಕೋಟು ಹಾಕಿಕೋ–

ಚಂದ್ರು—ಅಲ್ಲವೋ-ಈಗೇನು ಮಾಡೋಕ್ಕಾಗತ್ತೋ? ನಮ್ಮಪ್ಪ-

ಭೀಮು—ನಿಮ್ಮಪ್ಪ ಅಲ್ಲ, ಅವರಪ್ಪ ಬಂದರೂ, ನಾನು ಭೀಮಸೇನೋ, ವಾಯುದೇವರೋ–

ಮಾಣಿ—(ಪ್ರವೇಶಿಸಿ) ಸಾರ್, ಸಾಪಾಡ ರೆಡಿಯಾಯಿರಕ್ಕು, ವರ್ರುಲಾ, ಸಾರ್–

ಚಂದ್ರು—ಊಟ-

ಭೀಮು—ಡ್ಯಾಂ ಯುವರ್ ಊಟ. (ಮಾಣಿಗೆ) ಡ್ಯಾಂ ಯುವರ್ ಸಾಪಾಡ ಪ್ರೀಡಾ....(ಚಂದ್ರೂಗೆ) ನೆಟ್ಟಗೆ ನಮ್ಮ ಜೋಯಿಸರ ಮನೆಗೆ ಹೋಗೋಣ....ತೊಗರಿ ನುಚ್ಚಿನ ಉಂಡೆ ಮಾಡಿದ್ದಾರಂತೋ–ಚೆನ್ನಾಗಿ ಊಟ ಹೊಡೆದು–ರಾವ್ ಸಾಹೇಬರ ಕೋಟೆ ದಾಳಿ ಮಾಡೋಣ-ಬಾರೋ–

—ತೆರೆ—

ದೃಶ್ಯ ೪

[ಒಂದು ಬೀದಿ. ಚಂದ್ರು, ಭೀಮು, ಪುಟ್ಟಾಜೋಯಿಸರು ರಾವ್‌ಸಾಹೇಬರ ಬಂಗಲಿಯ ಕಡೆ ಹೊರಟಿದ್ದಾರೆ.]

ಭೀಮು—ತಿಂದರೆ ತಿನ್ನಬೇಕು. ತೊಗರಿ ನುಚ್ಚಿನುಂಡೆ! ಆಹಾಹಾ-ಹಾಹಾ ಏನು ರುಚಿ !.... ಜೋಯಿಸರೇ,

ಪುಟ್ಟ....ಏನಪ್ಪಾ ?

ಭೀಮು....ನೀವು.... (ಜೇಬು ಮುಟ್ಟಿಕೊಳ್ಳುತ್ತಾ) ಈ ಇವಳು –

ಪುಟ್ಟ—ಹುಂ ?

ಭೀಮು—ಬಿ. ಎ. ಪ್ಯಾಸು ಮಾಡಿದ್ದಾಳೆ, ಹಿಂದಿ, ಸಂಗೀತ, ವೀಣೆ, ಡ್ಯಾನ್ಸು, ಕಸೂತಿ, ಕುಲ್ಲಾಯಿ ಎಲ್ಲಾ ಹೇಳಿದಿರಿ –

ಪುಟ್ಟ—ಹೂಂ – ?

ಭೀಮು—ಮುಖ್ಯವಾಗಿ ಹೆಂಡತಿ ಅಂತ ಮನೆಗೆ ಬಂದ ಮೇಲೆ, ಈ ತೊಗರಿ ನುಚ್ಚಿನ ಉಂಡೆ –

ಪುಟ್ಟ—ಅದು....ಉ ಹು ಹು....ಅವಳಿಗೆ ಅಡಿಗೆ ಕೆಲಸ ಬರಲಾರದಪ್ಪಾ –

ಭೀಮು—ಛೀ ಛೀ. ನಾನು ಉಂಡೆ ಮಾಡೊಕ್ಕೆ ಬರುತ್ತೆಯೋ ಅಂತ ಅಲ್ಲ ಕೇಳಿದ್ದು - ಅದಕ್ಕೆ ಶಂಕರ ಇದ್ದಾನೆ –

ಪುಟ್ಟ—ಮತ್ತೆ ?

ಭೀಮು—ತಿನ್ನೊಕ್ಕೆ !

ಪುಟ್ಟ—ಲೋ - ಚಂದ್ರಶೇಖರಾ, ನೋಡಪ್ಪಾ, ನಿನ್ನ ಸ್ನೇಹಿತ ಹೇಗೆ ಹುಚ್ಚುಹುಚ್ಚಾಗಿ ಆಡುತ್ತಾನೆ !

ಚಂದ್ರು—ಇವನು ಹೀಗಾಡುತ್ತಿರಲಿಲ್ಲ. ನೀವು ಅವನ ಜೇಬಿಗೆ ಆ ಫೋಟೋ ಸೇರಿದಿರಿ - ಅವನು -

ಪುಟ್ಟ—ಕೋತಿಗೆ ಹೆಂಡ ಕುಡಿಸಿದ ಹಾಗೆ –

ಭೀಮು—ಜೋಯಿಸರೇ, ನಿಮಗೆ ಒಂದೊಂದು ಪದಗಳ ಸೃಷ್ಟಿ, ಚಮತ್ಕಾರಗಳ ಸ್ವಾರಸ್ಯ ಗೊತ್ತಿಲ್ಲ ಅಂತಾಯಿತು. ತಿ. ಇದು ಒಂದು ಅಕ್ಷರ, ಹೌದಾ ?

ಪುಟ್ಟ—ಏನು ?....

ಭೀಮು—ತಿ. ತ ಗುಡಿಸು ತಿ. ಹೆಂಡ ಅನ್ನುವುದು ಒಂದು ಪದ. ಈ ಪದಕ್ಕೆ "ತಿ" ಅನ್ನುವ ಅಕ್ಷರವನ್ನು ಕೂಡಿಸಿ ಹೇಳಿ... ಏನಾಗತ್ತೆ ?

ಚಂದ್ರು—ಹೆಂಡತಿ –

ಭೀಮು—ಹೌದಾ, ಜೋಯಿಸರೇ ? ಅದೇ ಗುಟ್ಟು. ಹೆಂಡತಿ ಅನ್ನುವ ಪದದಲ್ಲಿ ಹೆಂಡ ಸೇರಿರುವುದರಿಂದಲೇ, ನಾವು ಅವಳ ಮಾತು ಬಂದಾಗ ಹೆಂಡ ಕುಡಿದವರ ಹಾಗಾಡುವುದು –

ಪುಟ್ಟ—ಅಯ್ಯೋ ಅಯ್ಯೋ ಅಯ್ಯೋ, ಏನು ಸಾಹಿತ್ಯವೋ ?

ಭೀಮು—ಈ ಸಂಶೋಧನೆ ಇದುವರೆಗೂ ಯಾರಾದರೂ ಮಾಡಿದ್ದರೆ ಹೇಳಿ –

ಪುಟ್ಟ—ನಾನಲ್ಲ. ನಾನಲ್ಲ ಹೇಳಬೇಕಾದವನು. ಅಲ್ಲಿ ಈಗ ಹೋಗು ತ್ತೀಯಲ್ಲ, ನಿನ್ನ ಹೆಂಡತಿಯನ್ನು ಕೇಳು, ಅವಳು ಸರಿಯಾದ ಉತ್ತರ ಕೊಡು ತ್ತಾಳೆ.... ಈಗ.... ನಾವು ಒಂದು ಕೆಲಸ ಮಾಡೋಣ. ನೀವಿಬ್ಬರೂ ಹೀಗೇ ಹೋಗಿ - ಆಗೋ ಅಲ್ಲಿ ಬಲಕ್ಕೆ ತಿರುಗಿದರೆ, ಎಡಗಡೆ ಎರಡನೆ ಬಂಗಲೆಯೇ - ನಾನು –

ಭೀಮು—ಅಂದರೆ... ನಮ್ಮನ್ನ ನೀವು ನಡು ರೋಡಿನಲ್ಲಿ ಬಿಟ್ಟು, ನಾವು ನಾವೇ –

ಪುಟ್ಟ—ಹಾಗಲ್ಲವೋ, ಮದುವೆ ಮಾತಿಗೆ ಹೋಗುತ್ತಿರುವುದು. ಮೂರು ಜನ ಯಾಕೆ ಅಂತ -

ಭೀಮು—ಬೇಡ, ಬೇಡ. ಐ ಅಗ್ರೀ – ಟು ಬಿ.... ಮೂಢ !.... ಇದು ಮೂಢ ನಂಬಿಕೆ ಅಲ್ಲ, ಜೋಯಿಸರೇ... ವಿಶ್ವಾಮಿತ್ರ, ರಾಮ, ಲಕ್ಷ್ಮಣ ಈ

ಮೂರು ಜನ ಹೋಗಿ, ಈಶ್ವರನ ಬಿಲ್ಲು ಮುರಿದು, ಸೀತೆಯನ್ನ ಮದುವೆ ಮಾಡಿಕೊಂಡದ್ದಕ್ಕೇ ಆ ರಾಮಾಯಣ ಹಾಗೆ ಆದದ್ದು –

ಪುಟ್ಟ—ಲೋ – ಇದೂ....ಇದೂ ಒಂದು ಸಂಶೋಧನೆಯೇ – !

ಭೀಮು—ಅಲ್ಲ ಅಣ್ಣ....ಹೋಗಲಿ ಚರ್ಚೆ ಯಾಕೆ ? ನನ್ನ ಭಯ, ನನ್ನ ನಂಬಿಕೆ ನನ್ನದು. ನನ್ನ ಹಕ್ಕು. ನೀವಿಬ್ಬರೂ ಮೊದಲು ಹೋಗಿ -

ಪುಟ್ಟ—ಅವರ ಮನೆಗೆ ? ಚೆನ್ನಾಗಿದೆ. ಮದುವೆ ಮಾಡಿಕೊಳ್ಳುವ ವರನೇ ಇಲ್ಲದೆ -

ಭೀಮು—ನೀವೇ ಹೇಳಿದಿರಲ್ಲಾ, ನಾವು ಊಟ ಮಾಡುತ್ತಿದ್ದಾಗ, ನಾನು ಅವಳನ್ನ ನೋಡಬೇಕಾಗಿಲ್ಲ, ಅವಳು ನನ್ನನ್ನ ನೋಡೊಲ್ಲ ಅಂತ -

ಪುಟ್ಟ— ಹೌದೋ – ಆದರೂ -

ಚಂದ್ರು—ನಿನ್ನ ಐಡಿಯ ಸ್ಪುಟಿಡ್ನು : ನೀವಿಬ್ಬರೂ ಹೋಗಿ, ನಾನು -

ಭೀಮು—ಅದೂ ಸರಿಹೋಗೊಲ್ಲ....ಒಬ್ಬ ಗೆಳೆಯನಿಗೂ ಗತಿಯಿಲ್ಲದೆ ಬಂದ ಇವನೆಂಥ ಅಳಿಯ ಅಂತ - ನೋ, ನೋ, ನೀನಿರಲೇಬೇಕು –

ಪುಟ್ಟ ಅದಕ್ಕೇ ನಾನು ಹೇಳಿದ್ದು -

ಭೀಮು ನೀವೂ ಇರಲೇಬೇಕಲ್ಲಾ – ಯಾರಿದ್ದರೂ ಪುರೋಹಿತ ರಿಲ್ಲದೆ -

ಪುಟ್ಟ—ನಾನು ಎಲ್ಲೂ ಓಡಿಹೋಗೊಲ್ಲವೋ - ನೀವು ಅಲ್ಲಿ ಹೋಗಿ ಸೇರುವುದರೊಳಗೆ ನಾನು ಹೀಗೆ ಈ ಕಾಲುದಾರಿ ಹಿಡಿದು - ಅಗೋ ಅದೇ ಕೃಷ್ಣಭಾಗವತರ ಮನೆ -

ಭೀಮು—ಕೃಷ್ಣಭಾಗವತರು ?

ಪುಟ್ಟ—ಒಳ್ಳೆ ಸಂಗೀತ ವಿದ್ವಾಂಸರು,

ಭೀಮು– ಸರಿ. ಅವರು ಯಾಕೆ ಈಗ ?....ನಮ್ಮ ಮದುವೆ ರಿಸೆಪ್ಷನ್ನಿನಲ್ಲಿ - ಕಚೇರಿ - ?

ಪುಟ್ಟ— ಅಲ್ಲ, ಅಲ್ಲ. ನಿನ್ನ ಹೆಂಡತಿಯ ತಂಗಿ ಇದ್ದಾಳಲ್ಲ, ಅವಳಿಗೂ ಸಂಗೀತ ಪಾಠವಾಗಿ ಬರುತ್ತೆ. ಚೆನ್ನಾಗಿ ಹೇಳಿಸೋಣ –

ಭೀಮು—ನನ್ನ ನಾದಿನಿಗೆ ಸಂಗೀತ ಪಾಠಕ್ಕೆ ಅನ್ನಿ ?

ಪುಟ್ಟಿ—ಹೂಂ—ಹೋದ ವಾರವೇ ನಾನು ಹೇಳಿದ್ದೆ. ಇವರು ಯಾಕೋ ಇನ್ನೂ ಹೋಗಿಲ್ಲವಂತೆ.

ಭೀಮು—ನಿಮಗೆ ಯಾಕೆ ಅಂತ ಗೊತ್ತಿಲ್ಲವೇನು ? ನಾನು ಹೇಳು ತ್ತೀನಿ.

ಪುಟ್ಟಿ—ನೀನು ? ನೀನು ಹ್ಯಾಗೆ – ನಿನಗೇನು – ?

ಭೀಮು—ಅದು ಬ್ರಹ್ಮ ಸಂಕಲ್ಪ. ನಿಮ್ಮ ರಾವ್‌ಸಾಹೇಬರ ಚಿಕ್ಕ ಮಗಳಿಗೆ ಸಂಗೀತ ಕಲಿಸಬೇಕಾದವರು ಕೃಷ್ಣಭಾಗವತರಲ್ಲ –

ಪುಟ್ಟಿ—ಮತ್ತೆ ?

ಭೀಮು—ಇವನು ?

ಚಂದ್ರು—ಲೋ !

ಪುಟ್ಟಿ. ಇವನು ?

ಭೀಮು—ಹೌದು. ಇವನೇ.

ಪುಟ್ಟಿ—ಅಲ್ಲವೋ, ಶಾಸ್ತ್ರೀಯವಾಗಿ ಹೇಳಿಕೊಡುವಷ್ಟು –

ಭೀಮು-ಕೃಷ್ಣಭಾಗವತರಿಗೇ ಹೇಳಿಕೊಡುವಷ್ಟು ಶಾಸ್ತ್ರ ಬಲ್ಲ, ಇವನು.

ಚಂದ್ರು-- ಭೀಮು –

ಭೀಮು ನೀನು ಸುಮ್ಮನಿರಯ್ಯ....ಇವನಿಗೆ ಎಲ್ಲಾ ತರಹದ ಸಂಗೀತವೂ ಬರುತ್ತೆ. ಕನಕದಾಸರ ಪದಗಳಿಂದ ಕಾನನ್‌ಬಾಲಾ ಟ್ಯೂನುಗಳ ವರೆಗೂ ಸಿಗಿದುಹಾಕಿ ಬಿಡುತ್ತಾನೆ. ಜತೆಗೆ - ಕವಿ ಬೇರೆ !

ಚಂದ್ರು—ಲೋ !

ಭೀಮು – ಅಲ್ಲವೇನೋ ? ಯಾಕೋ ನಾಚಿಕೆ ? ಇರುವ ಕ್ವಾಲಿಫಿ ಕೇಷನ್ಸ್ ಹೇಳಿಕೊಳ್ಳಬೇಡವೇ?....ಜೋಯಿಸರೇ, ಇವನು ಯಾವುದಾದರೂ ಒಂದು ಮೂರ್ತಿಯನ್ನು ನೋಡಿದ ಅನ್ನಿ, ಅದರ ಮೇಲೆ ಪ್ರೀತಿ ಹುಟ್ಟಿತು ಅನ್ನಿ –

ಪುಟ್ಟ—ಹೂಂ– ?

ಭೀಮು—ತಕ್ಷಣ–ಗೀತೆ ತಾನಾಗಿ ಹುಟ್ಟಿ, ಹಾಡಿಸಿಕೊಳ್ಳುತ್ತೆ ! ಭಾವ ಗೀತೆ, ಭಾವಮೈದುನನ ಗೀತೆ –

ಚಂದ್ರು—ಲೋ -

ಭೀಮು—ರಸಭಂಗ ಮಾಡಬೇಡಯ್ಯಾ, ಸ್ವಲ್ಪ ತಡಿ. (ಜೋಯಿಸಂಗೆ) ಆ ನಿಮ್ಮ ಕೃಷ್ಣಭಾಗವತರು ಎಷ್ಟು ಕೇಳುತ್ತಾರೆ, ತಿಂಗಳಿಗೆ, ಪಾಠಕ್ಕೆ ?

ಪುಟ್ಟ—ಅವರು....ಐವತ್ತಕ್ಕೆ ಕಡಿಮೆ ಇಲ್ಲ....

ಭೀಮು—ಐವತ್ತು, ತಿಂಗಳಿಗೆ, ಬರುವುದು ದಿನ ಬಿಟ್ಟು ದಿನ, ಮಲೇರಿಯಾ ಹಾಗೆ ! ನಮ್ಮ ಚಂದ್ರು ಆದರ ಅರ್ಧಕ್ಕೆ ಒಪ್ಪಿಕೊಳ್ಳುತ್ತಾನೆ. ಅಲ್ಲವೇನೋ ?

ಚಂದ್ರು—ಲೋ !

ಭೀಮು—ನೋಡಿದಿರಾ ? ಒಪ್ಪಿಕೊಂಡ. ಆಮೇಲೆ ಇವನು ಈ ಪಾಠಕ್ಕೆ, ದಿನ ಬಿಟ್ಟು ದಿನ ಅಲ್ಲ, ದಿನವೂ ಅಲ್ಲ, ದಿನಕ್ಕೆ ಎರಡು ಹೊತ್ತು ಬೇಕಾದರೂ ಹೋಗುತ್ತಾನೆ -

ಚಂದ್ರು— ಭೀಮೂ -

ಪುಟ್ಟ ಲೋ -

ಭೀಮು—ಅಷ್ಟೇ ಅಲ್ಲ. ನನ್ನ ನಾದಿನಿ ಸಂಗೀತ ಪಾಠದಲ್ಲಿ ಆಸಕ್ತಿ ತೋರಿಸಿ, ಹೇಳಿದ್ದಲ್ಲಾ ಕಲಿತುಕೊಳ್ಳುತ್ತೀನಿ ಅಂದರೆ, ದಿನಕ್ಕೆ ಮೂರು ಹೊತ್ತೂ –

ಚಂದ್ರು—ಲೋ ಲೋ -

ಪುಟ್ಟ—ಸರಿ, ಸರಿ, ನನಗೇನು ? ಬಿಡು....ಇವನೇ ಆಗಲಿ....ನೋಡಿದೆಯಾ–ಭಗವಂತನ ಇಚ್ಛೆ....ಕೃಷ್ಣಭಾಗವತರ ಕೈಗೆ ಬೀಳುತ್ತಿದ್ದ ಐವತ್ತು ಇವನ ಕೈಗೆ ಬೀಳಿಸಿತು.

ಭೀಮು—ಅಯ್ಯೋ, ಆ ಭಗವಂತ, ಈ ಐವತ್ತಕ್ಕೇ ನಿಲ್ಲಿಸುತ್ತಾನೊ,

ಇನ್ನೂ ಏನೇನು ಕೇಳಿಸುತ್ತಾನೋ - !

(ಸೀನಿ ಓಡಿಬಂದು)

ಸೀನಿ ಜೋಯಿಸರೇ –

ಪುಟ್ಟ –ಓ–(ಭೀಮು, ಚಂದ್ರೂಗೆ) ನಮ್ಮ ರಾವ್ ಸಾಹೇಬರ ಮನೆಯವನು. (ಸೀನಿಗೆ) ಏನೋ, ಬುಲಾವೇನೋ ?

ಸೀನಿ ನೀವು ಆದೇನೋ. ಮೈಸೂರಿನಿಂದ ಯಾರೋ ಬರುತ್ತಾರೆ ಅಂತ ಹೇಳಿದ್ದಿರಂತೆ. ಅವರು ಬಂದರಾ, ನೀವು ಬರುತ್ತೀರಾ, ತಾವು ಕ್ಲಬ್ಬಿಗೆ ಹೋಗಬಹುದಾ, ಬೇಡವಾ -

ಪುಟ್ಟ—ಬೇಡ, ಬೇಡ ಅಂತ ಹೇಳು. ಓಡುತ್ತಾ ಹೋಗಿ ಹೇಳು. ನಾವೀಗ ಅಲ್ಲಿಗೇ ಬರುತ್ತಿದ್ದೇವೆ. ಓಡು–(ಸೀನಿ ಹೊರಡಲು) ತಡಿ, ತಡಿ, ತಡಿ....ಬೇಡ, ನಿಲ್ಲು....ಲೋ, ಭೀಮು, ಇವತ್ತು ಏನು ಅದೃಷ್ಟವೋ ನನ್ನದು! ಬೆಳಗ್ಗೆ ಹಿಡಂಬಿಗೆ ಭೀಮನ್ನ ಹುಡುಕಿಕೊಂಡು ಹೊರಟಿದ್ದೆ. ನೀನು ಸಿಕ್ಕಿಬಿಟ್ಟೆ.

ಭೀಮು—ಹುಂ, ಈಗ ಕೃಷ್ಣಭಾಗವತರಿಗೆ ಹೇಳುತ್ತೀನಿ ಅಂತ ಹೊರಟಿದ್ದಿರಿ -

ಪುಟ್ಟ —ಇವನು ಸಿಕ್ಕಿ ಬಿಟ್ಟ !

ಚಂದ್ರು—ಮದುವೆ ಮಾತು, ಮೂರುಜನ ಅಂತ ಒದ್ದಾಡುತ್ತಿದ್ದವು–

ಮೂವರೂ – ಇವನು ಬಂದು ಬಿಟ್ಟ !

ಪುಟ್ಟ– ಶಕುನ - !

ಭೀಮು—ಶುಭ ಶಕುನ !....ನಡೆಯಿರಿ, ಕಿವಿಯಲ್ಲಿ ಕನುಕೊಟಿನಿ ಕೇಳಿಸುತ್ತಾ ಇದೆ !

ಪುಟ್ಟ—ಹೂಂ....ಅಲ್ಲಿ ನಿನ್ನವಳು ಕದನ ಕುತೂಹಲವನ್ನೂ ಕೇಳಿಸುತ್ತಾಳೆ, ನಡೀ -

ಭೀಮು—ಕೇಳಿಸಲಿ....ಆದರೆ ನಾನು ಮನೆಯಲ್ಲಿ ಹೇಳಿದ್ದು ಮಟ್ಟಿಗೆ ಜ್ಞಾಪಕ ಇರಲಿ. ನಾಟಕ....ಅಲ್ಲಿ ಆಡಬೇಕಾದ ನಾಟಕ....ಚಂಡಿಯನ್ನು

ಕೆಡಪ್ಪವುದು ಮುಂಗುರುಳು ತಿದ್ದಿ ಅಲ್ಲ, ಮುಂದೆಲೆ ಜಗ್ಗಿಸಿ ಅಂತ–

ಪುಟ್ಟಿ—ಸರಿ, ಸರಿ. ನೀವು ಮುಂದೆಲೆಯಾದರೂ ಜಗ್ಗಿಸು. ಹಿಂದೆಲೆಯಾದರೂ ಜಗ್ಗಿಸು ; ನನಗೆ, ಮುಂದೆ ಬಾಳೆಎಲೆ, ಚಿರೋಟಿ, ಫೇಣಿ, ಹಾಲು ಖೀರು, ಹಾಕಿಸಿಬಿಡು

ಭೀಮು ನನಗೆ ಬಿಡಿ ಅದನ್ನ... ನೀವು, ದಯವಿಟ್ಟು ರಾವ್ ಸಾಹೇಬರಿಗೆ ರೆಕಮಂಡ್ ಮಾಡಿ, ಒಂದು ದೊಡ್ಡ ಡಬರಿ ಗೊಜ್ಜು ಕಾಳಿ, ಎರಡು ಡಜನ್ ನುಚ್ಚಿನುಂಡೆ-ನನಗೆ-ಹಾಕಿಸಿಬಿಡಿ—

ಪುಟ್ಟಿ ನಡಿಯೋ-ಅತೀ ಹುಚ್ಚು ಹುಚ್ಚನಾಗಾಡಬೇಡ, ಅದೇ... ನಡೀಯೋ, ಸೀನೀ-

ಭೀಮು—(ಚಂದ್ರುಗೆ) ವಾರುಂಗೋ, ಪಾಗವದರೇ—

(ನಿಷ್ಕ್ರಮಿಸುವರು)

ದೃಶ್ಯ ೫

[ರಾವ್ ಸಾಹೇಬರ ಬಂಗಲೆಯ ನಡುಮನೆ. ರಾಮರಾಯರು, ಸೀತಮ್ಮ, ಭೀಮು, ಚಂದ್ರು, ಜೋಯಿಸರು—ಎಲ್ಲರೂ ಕುಳಿತಿರುವರು.

ಪುಟ್ಟಿ—ಇವನ ಹೆಸರು ಭೀಮರಾವ್ ಅಂತ. ಇವನು... ಇವನದು ಆಮೇಲೆ ಹೇಳುತ್ತೇನೆ. ಒಬ್ಬೊಬ್ಬರದಾಗಾಗಲಿ.

ರಾಮು ಮೈಸೂರು ಕಡೆ ಹೇಗೆ ? ಮಳೆಗಿಳೆ- ?

ಪುಟ್ಟಿ—ಉಹುಹು, ಇವನು ಆ ಮೈಸೂರಿನವನಲ್ಲ. ಅವನು ಬರಲೇ ಇಲ್ಲ. ನಾನಿಲ್ಲಿಂದ ಮನೆಗೆ ಹೋದೆನಲ್ಲಾ, ಅಲ್ಲಿ ಒಂದು ತಂತಿ ಬಂದು ಕೂತಿತ್ತು. "ರೈಲು ತಪ್ಪಿ ಹೋಯಿತು...ಮಧ್ಯಾಹ್ನ ಹೊರಟು ಸಂಜೆ ಬರುತ್ತೀನಿ" ಅಂತ–

ರಾಮು—ಓಹೋ–

ಸೀತ—ಮತ್ತೆ—ಇವರು—

ಪುಟ್ಟ—ನನಗೆ ಆಕಸ್ಮಾತ್ ಸಿಕ್ಕಿದ. ಇವನ ಅಪ್ಪನೂ ನಾನೂ ಉಡಿದಾರದ ಸ್ನೇಹಿತರು–ಶಿವಮುಗ್ಗಿ ಯಿಂದ ಇಪ್ಪತ್ತೈದು ಮೈಲಿ ಇವನ ಊರು

ಭೀಮು—ಕ್ಷಮಿಸಿ, ನಮ್ಮದು ಊರಲ್ಲ, ಹಳ್ಳಿ.

ಪುಟ್ಟ—ಆದರೇನೋ? ರಾವ್ ಸಾಹೇಬರೇ, ಇವನದೂ ಬಂಗಲೆಯೇ. ಉಂ, ನಿಮ್ಮದರ ಹಾಗೇ ಮೂರು ಮಹಡಿ.

ಭೀಮು—ಆಕಾಶಕ್ಕೆ ಅಷ್ಟೇ ಹತ್ತಿರ.

ರಾಮು—(ನಗುತ್ತಾ) ಹೌದು, ಹೌದು.

ಪುಟ್ಟ—ಭೂಮಿಗೆ ಅಷ್ಟೇ ದೂರ... ಆದೇ....(ರಾಯರಿಗೆ) ಇವನ ಬಂಗಲೆಯ ಹೊರಗೆ, ಸುತ್ತ ತೋಟ....ಉದ್ಯಾನ–

ಭೀಮು—ತ್ಚು ತ್ಚು ತ್ಚು–ಯಾಕೆ ಅವಸರ? ಬಂಗಲೆಯ ಹೊರಗೆ ಹೊರಟು ಬಿಟ್ಟಿರಿ? ಒಳಗಿನ ಒಕ್ಕಣೆ ಹೇಳಿ, ಅಥವಾ ನಾನೇ ಹೇಳಿಕೊಳ್ಳು ತ್ತೇನೆ, ಬಿಡಿ, ಸಾರ್, ನಮ್ಮ ಬಂಗಲೆಯಲ್ಲಿ ಅಪ್ಪ ಇಲ್ಲ, ಅಮ್ಮ ಇಲ್ಲ–

ರಾಮು—ಆಂ?

ಸೀತ—ಏನು-?

ಪುಟ್ಟ—ಲೋ–

ಭೀಮು—ಹೌದು, ಸಾರ್, ನಮ್ಮ ಮನೆಗೆ ಮಾವನ ಕಾಟ. ಅತ್ತೆ ಕಾಟ–ಇಲ್ಲ.

ಪುಟ್ಟ—ಭೀಮೂ-

ಭೀಮು—ನಿಮಗೆ ಗೊತ್ತಿಲ್ಲ. ಎಷ್ಟೋ ಕನ್ಯಾಪಿತೃಗಳು ಈ ಭಾಗ್ಯ ವಿಶೇಷವನ್ನ ಬಯಸುತ್ತಾರೆ. ತಪ್ಪಲ್ಲ. ತಮ್ಮ ಮಗಳ ಹಿತ ತಮಗೆ ಮುಖ್ಯ... ಆಮೇಲೆ. ಸಾರ್, ಮನೆಗೆಲ್ಲಾ ನಾನೊಬ್ಬನೇ ಮಗ!

ಪುಟ್ಟ— ರಾಮ ರಾಮ–

ಭೀಮು—ಇದೂ ಮುಖ್ಯ ಜೋಯಿಸರೇ. ಭಾಗ ಕೇಳೊಕ್ಕೆ ಬನ್ನಿ ಹಿಂದೆ ಮುಂದೆ ಯಾರೂ ಅಣ್ಣ ತಮ್ಮ ಹುಟ್ಟಲಿಲ್ಲ. ಅಂದ ಮೇಲೆ ವಾರ

ವಾರಗಿತ್ತಿಯರವಾರ್ರೂ ಇಲ್ಲ.

ರಾಮು—ಭಲೆ, ಭಲೆ, ವೆಲ್ ಸೆಡ್. ಏನೇ ಕೇಳಿದೆಯಾ ಹೇಗೆ.

ಭೀಮು—ಹೇಳಿದ್ದರಲ್ಲಿ ಸ್ವಲ್ಪ ಹೊಸತನ ಇರಬಹುದು. ಅದೇ ತಾನೇ ಎಲ್ಲರೂ ಈಗ ಬೇಕು ಬೇಕು ಅನ್ನುವುದು....ಅಡಿಗೆಗೆ ಶಂಕರ ಇದ್ದಾನೆ. ಹೈದರ್, ಸಿದ್ದ, ಖಾಸಾ ಜವಾನರು. ಕಾವೇರಿ, ಕಪಿಲ, ತುಂಗ–

ಸೀತ—ಕೆಲಸದ ಹೆಂಗಸರು–?

ಭೀಮು—ಅಲ್ಲಲ್ಲ, ಹಸುಗಳು. ಹಾಲು ಕರೆಯುವ ಹಸುಗಳು,

ರಾಮು—ಹಸುಗಳು?

ಭೀಮು—ಎಮ್ಮೆಗಳೂ ಇವೆ. ಲೆಕ್ಕ ತಿಮ್ಮನಿಗೆ ಗೊತ್ತು.

ಪುಟ್ಟ—ಹಾಲು, ಮೊಸರು, ಬೆಣ್ಣೆ-

ಭೀಮು—ನಿಮ್ಮ ಮಗಳಿಗೆ ಈಜು ಬರುವುದಾದರೆ; ಒಂದು ತೊಟ್ಟಿ ಕಟ್ಟಿಸಿ ಕೊಡುತ್ತೇನೆ-ಹಳೆ ರಾಣಿಯ ತರಹ ಹಾಲಿನಲ್ಲಿ ಈಜಾಡಲಿ.

ಸೀತ—ಅಷ್ಟೊಂದು-?

ಭೀಮು-ಅನ್ಯಾಯವಾಗಿ, ಉಪಯೋಗಿಸುವವರಿಲ್ಲದೆ, ಡೈರಿಗೆ ಕೊಟ್ಟು ಬಿಡುತ್ತಾ ಇದ್ದೇನೆ....ಉಂ....ನಿಮಗೆ ಒಂದು ಅನುಮಾನ ಬರುತ್ತಿರಬಹುದು. ನಾನು ಈ ಬೆಣ್ಣೆ, ಮೊಸರು ತಿಂದು ಕೊಬ್ಬಿರುವ ಕೋಣ ಅಷ್ಟೇ ಇರಬಹುದು ಅಂತ. ನಾನು ಎಂ. ಎ. ಮಹಾರಾಜಾ ಕಾಲೇಜು. ಮೈಸೂರು. ನಿಮ್ಮ ಮಗಳು ಬಿ.ಎ. ಅಂತ ಕೇಳಿದೆ. ಸಂತೋಷ. ಅವಳು ಹೆಮ್ಮೆಯಿಂದ ಗೌನು ಹಾಕಿ ಬಂದು ನಿಂತರೆ,! ನಾನು ನನ್ನ ಸರ್ಟಿಫಿಕೇಟನ್ನು ಬಿಚ್ಚಿ ತೋರಿಸಬಲ್ಲೆ.

ರಾಮು—ಗುಡ್, ಗುಡ್, ಏನೇ?

ಸೀತ—ಅವಳಗಿಂತ ಹೆಚ್ಚೇ ಆಯಿತಲ್ಲ!

ರಾಮು—ವಿದ್ಯೆ-

ಭೀಮು—ನಾನು ವಿದ್ಯಾವಂತ ಅಷ್ಟೇ ಅಲ್ಲ. ಬುದ್ಧಿವಂತನೂ.

ಪುಟ್ಟ—ಭೀಮೂ-

ಭೀಮು—ಸುಳ್ಳೇ, ಹೇಳಿ. ಡಿಗ್ರಿ ಸಿಕ್ಕಿತು ಅಂತ ಹಳ್ಳಿ ಬಿಟ್ಟು ಪಟ್ಟಣ ಸೇರಿ; ಕ್ಲಾರ್ಕೋ, ಕಾಲೇಜು ಮೇಷ್ಟರೋ ಆಗಿ ಕೆಟ್ಟಿದ್ದೇನೇನು ?

ಪುಟ್ಟ—ಅದು ನಿಜ. ಹಳ್ಳಿಯಲ್ಲೇ ಉಳಿದು, ಪಟ್ಟಣವನ್ನೇ ಅಲ್ಲಿಗೆ ತೊಗೊಂಡು ಹೋಗಿದ್ದಾನೆ.

ಭೀಮು—ಕರ್ರೆಕ್ಟ್. ನಿಮ್ಮ ಮಗಳು ಬೆಳಗಾಗಿ ಎದ್ದು, ಸಗಣಿ ವಾಸನೆ ಕುಡಿಯಬೇಕಾಗಿಲ್ಲ. ಮಲ್ಲೆ ಮಲ್ಲಿಗೆ ಜಾಜಿ ರೋಜಾ ತೋಟದಲ್ಲಿ ಸಿನಿಮಾ ಸ್ಟಾರುಗಳ ಹಾಗೆ ಸುಳಿದಾಡಬಹುದು. ಅಲ್ಲೂ ಸ್ವಿಚ್ ಹಾಕಿದರೆ ಹೀಗೇ ದೀಪ ಬರುತ್ತೆ. ಚಿಮಣಿ ಒರಸುವುದು, ಬತ್ತಿ ಕತ್ತರಿಸುವುದು, ಎಣ್ಣೆ ತುಂಬುವುದು—ಊಹೂ—ಗಾಳಿ ಬೇಕಾದರೆ ಫ್ಯಾನು, ಚಳಿ ಬೇಡವಾದರೆ ಹೀಟರ್ರು! ಒಟ್ಟಿನಲ್ಲಿ ಕುತ್ತಿಗೆಗೆ ಕಟ್ಟಿಸಿಕೊಂಡ ತಾಳಿ ಒಂದು ವ್ಯತ್ಯಾಸವೇ ಹೊರತು, ಅಲ್ಲಿ ಬಂದರೂ ಇಲ್ಲಿದ್ದ ಹಾಗೇ ಇರುತ್ತೆ, ನಿಮ್ಮ ಮಗಳಿಗೆ.

ರಾಮು—ಏನೇ? ಇನ್ನೇನೆ?

ಭೀಮು—ಆಮೇಲೆ, ನಿಮ್ಮ ಡಾಟರ್ರಿಗೆ ಸೈಕಲ್ ಅಭ್ಯಾಸ—ಊಹೂ, ಇರಲಾರದು. ಯಾಕೆಂದರೆ, ಆದಿದ್ದಿದ್ದರೆ, ಇಷ್ಟು ಹೊತ್ತಿಗೆ ಏಂದೋ ಮದುವೆ ಆಗಿರುತ್ತಿತ್ತು!

ಸೀತ—ಏನು?

ರಾಮು—ನೀವು-? ಸೈಕಲ್ಲಿಗೂ ಮದುವೆಗೂ—?

ಭೀಮು—ಗಂಟು. ತಾವು ಈಚಿನ ಸಿನಿಮಾಗಳನ್ನ ನೋಡುತ್ತಿಲ್ಲ ಅಂತ ಆಯಿತು. ಅಲ್ಲೆಲ್ಲಾ ಹೀಗೇ. ಹೆಣ್ಣು ಸೈಕಲ್ಲ ಮೇಲೆ ಕಾಲೇಜಿಗೆ ಹೋಗುತ್ತಾಳೆ. ಗಂಡೂ ಹೋಗುತ್ತಾನೆ. ಸಂಜೆ ಇಬ್ಬರೂ ಹೊರಡುತ್ತಾರೆ. ಒಂದಕ್ಕೆ ಒಂದು ಡಿಕ್ಕಿ ಹೊಡೆದು ಇಬ್ಬರೂ ಬೀಳುತ್ತಾರೆ. ಅವಳು ಏಳುತ್ತಾಳೆ. ಇವನು ಏಳುವುದೇ ಇಲ್ಲ! ಅವಳ ಚಕ್ರಕ್ಕೆ ಸಿಕ್ಕಿಹಾಕಿಕೊಂಡು, ಮದುವೆ ಅಂತ ಆದಮೇಲೆ ಮೋಕ್ಷ, ಪ್ರಾಣಿಗೆ.

ರಾಮು—(ನಕ್ಕು) ಹೌದು, ಹೌದು. ಬಟ್ ನಮ್ಮ ಸರೋಜಳಿಗೆ ಸೈಕಲ್ಲು ಬರುತ್ತೆ. ನಾನು ಎಷ್ಟೋ ಸರ್ತಿ "ನೀನು ಸರ್ಕಸ್ಸಿಗೆ ಸೇರಬಹುದೇ"

ಅಂದಿದ್ದೇನೆ. ಆದರೂ ಮದುವೆ....ಅದು....ಅದು....ಯಾಕಾಗಿಲ್ಲ ಅಂದರೆ, ಇವಳು ಹೊರಟದ್ದನ್ನ ಕಂಡ ಕೂಡಲೆ, ಸೈಕಲ್ಲು, ಬಸ್ಸು, ಆಟೋಗಳೆಲ್ಲಾ ಬೇರೆ ಬೇರೆ ರೂಟುಗಳನ್ನ ಹಿಡಿದು ಓಡಿ ಬಿಡುತ್ತವೆ—

ಸೀತ—ಅಯ್ಯೋ, ಸುಮ್ಮನಿರಿ ಅಂದ್ರೇ .... (ಭೀಮೂಗೆ) ಇವರು ಯಾವಾಗಲೂ ಹೀಗೇ. ಮಗಳನ್ನ–ಪ್ರೀತಿಗೆ–(ನಗುವಿನಲ್ಲಿ ಮಾತು ಮುಗಿಸಲು)

ರಾಮು—ಇವಳು ಹೇಳಿದ್ದು ಕರೆಕ್ಟು. ಇಲ್ಲಿ ಕೇಳಿ. ಜೋಕಿಂಗ್ ಅಪಾರ್ಟ್, ಅವಳು ಸೈಕ್ಲಿಂಗಷ್ಟೇ ಅಲ್ಲ, ಕಾರನ್ನೂ ಓಡಿಸುತ್ತಾಳೆ.

ಭೀಮು—ಹೌದಾ?

ರಾಮು—ಲೈಸನ್ಸಿದೆ, ಅವಳದೇ ಬೇರೆ.

ಭೀಮು—ಹಾಗಾದರೆ... ತುಂಬ ಒಳ್ಳೆಯದಾಯಿತು. ನಮ್ಮ ಬಂಗಲಿ ಯಲ್ಲಿ ಎರಡು ಕಾರುಗಳಿವೆ, ಸಾರ್.

ರಾಮು—ಎಷ್ಟು? ಎಷ್ಟು ಅಂದಿರಿ? ಜೋಯಿಸರೇ, ಎರಡು ಕಾರುಗಳು ಅಂದರು. ನಮ್ಮ ಬಂಗಲಿಯಲ್ಲೂ ಎರಡು ಕಾರುಗಳಿವೆ.

ಭೀಮು—ಏನ್, ಜೋಯಿಸರೇ, ಜಾತಕಗಳು ಕೂಡುವುದು ಅಂದರೆ ಇದು! ಅಕೂಟ ಈ ಕೂಟಗಳ ಜೊತೆಗೆ ಕಾರ್ ಕೂಟವೂ—

ಪುಟ್ಟೆ—ಮುಗಿಯಿತಾ ನಿನ್ನ ಹರಿಕತೆ? ಇನ್ನು ನೀನು ಸ್ವಲ್ಪ ಗಂಭೀರವಾಗಿ ಸುಮ್ಮನೆ ಕೂತುಕೊಳ್ಳುತ್ತೀಯಾ?—ರಾವ್ ಸಾಹೇಬರೇ, ಇವನ ಈ ಕಲ್ಯಾಣಗುಣಗಳನ್ನ ಒಪ್ಪಬಹುದೇ ಆದರೂ-

ರಾಮು—ಅಗೋ, ಏನೋ ತೆಗದಿರಲ್ಲಾ-

ಪುಟ್ಟೆ—ಹಾಗಲ್ಲ. ಇದು ಮದುವೆ ಮಾತು. ಮುಚ್ಚುಮರೆ ಕೂಡದು. ನಾವು ಸರೋಜನನ್ನ ಏನೇನೋ ಅನ್ನುತ್ತೇವೆ. ಮೊಂಡಿ, ಫಂಡಿ ಅಂತ, ಅವಳು ಬೇಕು, ಇವನು ಬೇಡ. ಇವನಂಥ ಜಗಮೊಂಡ-

ಭೀಮು—ಜೋಯಿಸರೇ—

ಪುಟ್ಟೆ—ಅಲ್ಲ ಅಂತ ಹೇಳು, ನೋಡುತ್ತೀನಿ. ಅಲ್ಲವೊ. ನಾವು

ಇಲ್ಲಿಗೆ ಬರುವುದು ಅನಗತ್ಯ, ಸರೋಜ ತಾನು ಯಾರನ್ನೂ ನೋಡೊಲ್ಲ, ತನ್ನನ್ನೂ ಯಾರೂ ನೋಡಬೇಕಾಗಿಲ್ಲ ಅಂದಿದಾಳೆ—ನಾನು ಮುಹೂರ್ತ ಇಡಿಸಿ ಬರತ್ತೇನೆ ಅಂತ ಹೇಳಿದೆನೋ ಇಲ್ಲವೋ?

ಭೀಮು—ಹೇಳಿದಿರಿ.

ಪುಟ್ಟ—ಕೇಳಿದೆಯಾ?

ಭೀಮು—ಕೇಳಲಿಲ್ಲ. ಸಾರ್, ನಮ್ಮ ಜೋಯಿಸರು ಎಲ್ಲಾ ಹೇಳಿದರು—

ರಾಮು—ಸರೀ-

ಪುಟ್ಟ—"ಸೊಟ್ಟು" ಅಂದ ಇವನು!

ಭೀಮು—ಅಂದೆ. ಯಾಕೆ ಅಂದೆ? ಸಾರ್, ನಿಮ್ಮ ಮಗಳು ಯಾವ ಮೂಡಿನಲ್ಲೊ ಹಾಗೆ ಹೇಳಿರಬಹುದು. ಅಷ್ಟೇ ಸಾಕು ಅಂತ ನಾವು ಅದನ್ನ ದುರುಪಯೋಗ ಮಾಡಿಕೊಳ್ಳುವುದು ಯೋಗ್ಯ ಅಲ್ಲ. ನಾನಾದರೂ ನಿಮ್ಮ ಮಗಳ ಫೋಟೋ ನೋಡಿದ್ದೇನೆ. ಶೇಕಡ ಐವತ್ತೇ ಡಿಸ್ಕೌಂಟು ಅಲೋ ಮಾಡಿದರೂ-

ರಾಮು—ಐ ಸೇ-

ಭೀಮು—ನಾನು ಈ ಕೇಸಿನಲ್ಲಿ ಅಂತ ಹೇಳುತಾ ಇಲ್ಲ, ಸಾರ್. ನನ್ನ ಸ್ನೇಹಿತ ಒಬ್ಬ, ಹೀಗೇ ಫೋಟೋದಲ್ಲಿನ ಬ್ಯೂಟೀನ ಮೆಚ್ಚಿ, ವಿಶಾಲಾಕ್ಷಿ ಅಂತ ಒಬ್ಬಳನ್ನ ಮದುವೆ ಮಾಡಿಕೊಂಡ—

ರಾಮು—ಹುಂ?

ಭೀಮು—ತಲೆಗೆ ಸೀರೆ, ಸೊಟ್ಟ ಜೈತಲೆ, ಲೋಲಾಕು, ಕೂಲಿಂಗ್ ಗ್ಲಾಸಸ್ಸು ಹಾಕಿ ನಿಂತಿದ್ದಳು-ಬಿದ್ದ-ಮದುವೆಯಾದಾಗ ಗೊತ್ತಾಯಿತು. ಹೆಂಡತಿ ವಿಶಾಲಾಕ್ಷಿ ಅಲ್ಲ,ಏಕಾಕ್ಷಿ-ಕೆಂಪು ಡೊಂಕು ಮುಚ್ಚಿತು ಅನ್ನುತ್ತಾರಲ್ಲಾ ಈ ಕೇಸಿನಲ್ಲಿ ಕನ್ನಡಕದ ಕಪ್ಪು ಡೊಂಕು ಮುಚ್ಚಿತ್ತು; ಅಳಿಯನ ಕುರುಡು ಬೆಳಿಗ್ಗೆ ಗೊತ್ತಾಗುವ ಹಾಗೆ, ಸೊಸೆ ಕುರುಡು ರಾತ್ರಿ ಗೊತ್ತಾಯಿತು!

ರಾಮು—ಛೀ, ಛೀ, ಛೀ,—ನಾವು ಕೊಟ್ಟ ಫೋಟೋ—

ಭೀಮು—ನಾನೇ ಹೇಳಿದೆನಲ್ಲಾ-ನಾನು ಅಷ್ಟಾದರೂ ನೋಡಿದ್ದೇನೆ. ಆದರೆ ನಿಮ್ಮ ಮಗಳಿಗೆ ನಾನು ಹೇಗಿದ್ದೇನೋ—ಹೇಗೇನು-ಇದ್ದೇನೆ ಅನ್ನುವುದೇ ಗೊತ್ತಿಲ್ಲವಲ್ಲಾ-! ನನ್ನ ಮುಖವನ್ನೂ ನೋಡೀ-

ಪುಟ್ಟ—ನಾನು ಬೇಡವೋ ಅಂದೆ. ಹಟ. ಸರೋಜ ಮನೆಯಲ್ಲಿದ್ದಾಳೇನು?

ರಾಮು—ಅವಳು....ಅವಳು....(ಸೀತಮ್ಮನ ಕಡೆ ನೋಡುವರು)

ಸೀತ—(ಜಾರಿಕೊಳ್ಳುವ ಜಾಣೆ) ನಾನು ನೋಡಲಿಲ್ಲ.

ಭೀಮು—ನಾನು ನೋಡಿಸಿಕೊಳ್ಳಲೇ ಬೇಕು-ನನ್ನದು ಮೊಂಡು ಮೂಗೋ, ಆನೆ ಕಿವಿಯೋ, ಪರಕು ಬಾಯೋ, ನೋಡಲೇ ಬೇಕು—ನಿಮ್ಮ ಮಗಳು, ಆಡಿದ ಮಾತನ್ನು ಉಳಿಸಿಕೊಳ್ಳೊಕ್ಕೆ, ಲೈಕ್ ಎ ಜಂಟಲ್‌ವುಮನ್, ಲೇಡಿ, ತಾಳಿ ಕಟ್ಟಿಸಿ ಕೊಳ್ಳೊಕ್ಕೆ ಸಬ್ಮಿಟ್ಟಾದರೂ, ನಾನೂ ಜಂಟಲ್‌ಮ್ಯಾನ್ನೇ. ಮದುವೆ ವಿಷಯದಲ್ಲಿ ಗಂಡಿಗೆ ಕೊಂಬಿದೆ ಅಂತ ಒಪ್ಪುವವನಲ್ಲ. ನಿಮ್ಮ ಮಗಳೂ ನನ್ನ ನೋಡಿ, ಒಪ್ಪಿ, ಹೂ ಅಂದರೇ ಮದುವೆ, ಇಲ್ಲದಿದ್ದರೆ ಉಹೂ—ಅಂತ ನಾನಂದೆ, ಸಾರ್, ಇವರ ಮುಂದೆ. ಫನ್ ಜೋಯಿಸರೇ?

ಪುಟ್ಟ—ಅಂದ. ಇಷ್ಟೂ ಅಂದ.

ರಾಮು—ವೆರಿ ಗುಡ್... ಬಟ್—ವಿನೇ-

ಸೀತ—ಅವಳು ಮನೆಯಲ್ಲಿ ಇರಲಾರಳು-

ರಾಮು—ಹೌದು. ಹೌದು—ಇದ್ದಿದ್ದರೆ—

ಸೀತ—ನನಗಿಂತ ಮುಂಚೆಯೇ ಡ್ರೆಸ್ ಮಾಡಿಕೊಂಡಿದ್ದಳು—

ರಾಮು—ಎಲ್ಲೋ ಫ್ರೆಂಡ್ಸ್ ಮನೆಗೆ ಹೋಗಿರಬೇಕು — (ಸರೋಜ ಬಾಗಿಲು ತೆಗೆದು ಕಾಣಿಸಿಕೊಳ್ಳುವಳು) ಓ!

ಸೀತ—ಮನೆಯಲ್ಲೇ ಇದ್ದೆಯಾ, ಸರೋಜ, ಬಾ, ಬಾ.

ರಾಮು—ಬಾ, ಬಾಮ್ಮ....ಮಿಸ್ಟರ್ ಭೀಮರಾವ್, ದಿಸ್ ಈಸ್ ಮೈ ಡಾಟರ್....

ಭೀಮು—(ಎದ್ದು ನಿಂತು) ನಮಸ್ಕಾರ.

ಪುಟ್ಟ—ಓ!

ಚಂದ್ರು—ಭೀಮು!

ರಾಮು—ಸಾರ್!

ಸೀತ—ಅಯ್ಯೋ!

ಭೀಮು—ಯಾಕೆ? ಏನು ತಪ್ಪಾಯಿತು?

ಪುಟ್ಟ—ಮದುವೆಗೆ ಮುಂಚೆಯೇ ಹೆಂಡತಿಗೆ ನಮಸ್ಕಾರ?

ಭೀಮು—ನೀವೆಲ್ಲಾ ಆಮೇಲೆ ಗುಟ್ಟಾಗಿ ಹಾಕುತ್ತಿರುವುದನ್ನ ನಾನೀಗ ಓಪನ್ನಾಗಿ ಮೊದಲೇ ಹಾಕುತ್ತಿದ್ದೇನೆ. ನಿಮ್ಮೆಲ್ಲರಿಗಿಂತ ನಾನು ಹೆಚ್ಚು ಪ್ರಾಮಾಣಿಕ ಗಂಡ ಅಂತ ಪ್ರೂವ್ ಮಾಡಿಕೊಟ್ಟೆ ಅಲ್ಲವೇ? ಇಗೋ, ಇನ್ನೊಂದು ಸರ್ತಿ, ನಮಸ್ಕಾರ.

ಸರು—ಆಶೀರ್ವಾದ.

ಪುಟ್ಟ—ಆಂ?

ರಾಮು—ಲೇ!

ಸೀತ—ಸರೋಜ....!

ಭೀಮು—ಯಾಕೆ? ಯಾಕೆ? ನಿಮ್ಮ ಆಕ್ಷೇಪಣೆಯ ಧ್ವನಿ ನನಗೆ ಅರ್ಥವಾಗಲಿಲ್ಲ. ನಮಸ್ಕಾರಕ್ಕೆ ಆಶೀರ್ವಾದ ಸರಿಯಲ್ಲಾ!

ಸರು—ಥ್ಯಾಂಕ್ಸ್. ವರ ಕೇಳಬಹುದು.

ಭೀಮು—ವಧು ಅನುಗ್ರಹಿಸಬೇಕು.

ಸರು—ಆಂ?

ರಾಮು—ಭಲೆ, ಭಲೆ!

ಪುಟ್ಟ—ಭೀಮು....ತಡಿ....ಸರೋಜ, ಸ್ವಲ್ಪ ಹೀಗೆ ಬಾ, ನಿನಗೊಂದು ಮಾತು ಹೇಳುತ್ತೇನೆ, ಬಾ...ಬಾ... (ಮೆಲ್ಲಗೆ) ನೋಡು, ನನ್ನನ್ನು ನೀನೇನು ಬೇಕಾದರೂ ಅಂದುಕೊ. ನಿನ್ನ ಹಿತಕ್ಕೆ ನಾನು ಹೇಳುತ್ತಾ ಇದ್ದೀನಿ, ನಾವು

ತಕ್ಕಮಟ್ಟಿಗೆ ಗಟ್ಟಿಯಾಗೇ ಮಾತಾಡುತ್ತಾ ಇದ್ದೆವು. ನಿನಗೆ ಅಷ್ಟೊ ಕೇಳಿ ಸಿಯೀ ಇರಬೇಕು...ಭೀಮು ಬಂಗಾರ. ವಿದ್ಯಾವಂತ, ರೂಪವಂತ, ಗುಣ ವಂತ, ಭಾಗ್ಯವಂತ. ನೀನು "ಹುಂ" ಅಂದರೆ ರಾಣಿಯು ಹಾಗಿರಬಹುದು. ಒಪ್ಪಿಕೊಂಡರೆ ಒಳ್ಳೆಯದಮ್ಮಾ. ಆದರೆ ನಿನಗೂ ಒಂದು ಮಾತು ಮೊದಲೇ ಹೇಳಲೇಬೇಕು. ಅವನು ಎಲ್ಲಾ ಸರಿ, ಆದರೆ ಬಲು ಹಟಮಾರಿ. ನಾನು ಹೀಗಂದೆ ಅಂತ ನೀನು ಏನೂ ತಿಳಿದುಕೊಳ್ಳಬೇಡ—ನೀನು ಜಂಡಿ ಅಂತ ನಾನು ಅವನ ಮುಂದೆ ಅಂದದ್ದು ಉಂಟು. ಅವನೇನಂದ ಗೊತ್ತಾ? "ನನ್ನ ಮುಂದೇನೇ?" ಅಂದ,

ಸರು —ಆಂ ?

ಪುಟ್ಟ—ಹೂಂ. ಬರೀ ಜಂಬ....ಕೊಚ್ಚಿಕೊಳ್ಳಲಿ ಬಿಡು...ಅವನು ಒಂದು – ಇದು...ನಾನು...."ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಿಸು" ಅನ್ನುತ್ತಾರೆ. ಅದು ನನಗೆ ಹಿಡಿಸೊಲ್ಲ. ನೀನು ಅವನ ಮನೆಗೆ ಹೋಗುತ್ತಾ ವೀಣೆ ಇಲ್ಲೇ ಇಟ್ಟು ಹೋಗಬೇಕು.

ಸರು—ಏನು?

ಪುಟ್ಟ—ಹೌದು. ಅದನ್ನ ತುಂಡು ತುಂಡು ಮಾಡಿ ನೀರೊಳಗೆ ಇಟ್ಟರೂ ಇಟ್ಟಾನು....ಅದು ಯಾಕೋ ಏನೋ ಸಂಗೀತ ಅಂದರೆ ಅವನಿಗಾ ಗೊಲ್ಲ. ಬದ್ಧ ದ್ವೇಷ... "ಜೋಯಿಸರೇ, ಸರಿಗಮದ ಶಬ್ದ ಮಾತ್ರ ಕೇಳಿಸ ಬೇಡಿ, ನನಗೆ ತಲೆನೋವು ಬಂದು ಓಡಿ ಬಿಡುತ್ತೇನೆ". ಅಂತ ಹೇಳಿದ್ದಾನೆ. ಆದ್ದರಿಂದ ನಿಮ್ಮ ಅಮ್ಮ ಎಲ್ಲಾದರೂ ಬಾಯಿ ತಪ್ಪಿ, ಹಾಡು ಹೇಳು ಅಂದರೆ ಬಾಯಿ ಬಿಂ ಅಂತ ಭದ್ರ ಮಾಡಿಕೊ-ಇಷ್ಟರ ಮೇಲೆ ನಿನ್ನಿಷ್ಟ....ಭೀಮೂ.... ನಿನ್ನ ಕೆಲಸ ನಾನು ಮಾಡಿದ್ದೇನಪ್ಪ. ಮುಂದೆ ನೀವು ನೀವು—

ಸರು—"ಸಾಕ್ಷಾತ್ಕಾರನೀ" (ಹಾಡುವಳು)

ಸೀತ—ಅಯ್ಯೋ !

ರಾಮು—ಲೇ !

ಪುಟ್ಟ—ಸರೋಜಾ !

ಭೀಮು—ಓ, ಸಂಗೀತ....ಪ್ಯೈಗಾಡ್....(ಕಿವಿಗೆ ಬೆಟ್ಟಿಟ್ಟು ಪರದಾಡು ವನು:)

ಪುಟ್ಟ—(ರಾಯರಿಗೆ) ಅವನಿಗೆ ಸಂಗೀತ ತಲೆನೋವು!

ರಾಮು—ಸರೋಜ, ಸಾಕೆ, ನಿಲ್ಲಿಸೇ.

ಸರು—(ಹಾಡುತ್ತಾ) "ಸಂಗೀತಜ್ಞಾನ ವಿಹೀನಲುಕು ಮೋಕ್ಷಮು ಗಲದಾ?"

(ಎಂಬ ಸಾಹಿತ್ಯವನ್ನು ಭೀಮೂಗೆ ಒತ್ತಿ ಹೇಳಲು)

ಸೀತ—ಸರೋಜ, ಸಾಕೊ—

ಪುಟ್ಟ—ಹೋಗಲಿ ಬಿಡಿ....ಅದೆಷ್ಟು ಹಾಡುತ್ತಾಳೋ ಹಾಡಲಿ.

ಸರು—(ಪೂರ್ತಿ ಕೀರ್ತನೆ ಹಾಡಿ) ಜೋಯಿಸರೇ—

ಪುಟ್ಟ—ಆಗಿ ಹೋಯಿತಾ! ಅಯ್ಯೋ, ಅಯ್ಯೋ, ಏನು ದಿವಿನಾಗಿ ಹಾಡಿದೆಯಮ್ಮಾ!

ಸರು—ಥ್ಯಾಂಕ್ ಯೂ, ಇದೊಂದೇ ಸಾಕಾ, ಇನ್ನೊಂದು ಹಾಡಲಾ ಕೇಳಿ.

ರಾಮು—ಸಾಕೇ, ಸಾಕೇ, ತೊಲಗೇ ಒಳಗೆ—ಇಲ್ಲಾ ಹೊರಗೆ!

ಭೀಮು—ಯಾಕೆ? ಪ್ಯೆ? ಯಾಕೆ, ಜೋಯಿಸರೆ, ತಂದೆ ಮಗಳನ್ನ?—

ಪುಟ್ಟ—ಯಾರಿಗೆ ಗೊತ್ತಪ್ಪಾ?

ರಾಮು—ಅಲ್ಲ, ನೀವೇ ಹೇಳಿದಿರಲ್ಲಾ, ಜೋಯಿಸರೇ, ಅವರಿಗೆ ಸಂಗೀತ ತಲೇನೋವು ಅಂತ-

ಸರು—ಸುಳ್ಳು....ಜೋಯಿಸರೇ, ಸಂಗೀತ ಅಂದರೆ ಅವರಿಗೆ ತುಂಬ ಇಷ್ಟ ಅಂತ ಅಲ್ಲವಾ ನೀವು ನನಗೆ ಹೇಳಿದ್ದು?

ಪುಟ್ಟ—ಆಂ? (ಚೇತರಿಸಿಕೊಂಡು ತಿರುಗುಬಾಣ ಬಿಡುತ್ತಾ) ಹೂಂ, ನಾನದೇ ಹೇಳಿದ್ದು

ಸರು—ಆಂ?

ಪುಟ್ಟ—ಹೂಂ. ಅದೇ ನಾನು ಹೇಳಿದ್ದು. ಅದಕ್ಕೇ ಅಲ್ಲವಾ ನೀನು ಸಂಗತಿ ಮೇಲೆ ಸಂಗತಿ ಹಾಕಿಕೊಂಡು ವಿಸ್ತಾರವಾಗಿ ಹಾಡಿದ್ದು ?

ಸರು—ಏನು ?

ರಾಮು—ಅಲ್ಲ ಮತ್ತೆ, ಅವರಿಗೆ ತಲೆನೋವು –

ಭೀಮು—ನನಗೆ ಯಾಕೆ ತಲೆನೋವು ? ನಾನು ಹಾಗಂತ ಹೇಳಿದನೇ ? ಜೋಯಿಸರೇ ?

ಪುಟ್ಟ—ಅವನಲ್ಲಿ ಹೇಳಿದ ? ಅವನಿಗೆ ಸಂಗೀತ ಕೇಳದೆ ಇದ್ದರೆ ತಲೆನೋವು –

ಸರು—ಆಂ ?

ಪುಟ್ಟ—ಹೌದು. ಅದಕ್ಕೇ ಅಲ್ಲವಾ, ನೀನು, "ಸಾಕಾ, ಇನ್ನೊಂದು ಹಾಡಲಾ, ಕೇಳಿ" ಅಂದದ್ದು ?

ಸರು—(ಅರ್ಥ ಮಾಡಿಕೊಂಡು) ಓ !

ರಾಮು—ಮತ್ತೆ....ಕಿವಿಯಲ್ಲಿ ಬೆಟ್ಟಿಟ್ಟುಕೊಂಡು – ?

ಭೀಮು—ಓ, ಅದು ನಿಮ್ಮನ್ನ ಮಿಸ್ಲೀಡ್ ಮಾಡಿತಾ ? ಐ ಆಮ್ ಸಾರಿ. ವೆರಿ ಸಾರಿ. ಅದು ನಾನು ಅವರ ಸ್ವೀಟ್ ಸಂಗೀತಕ್ಕೆ ಮಾತ್ರ ಎಷ್ಟು ಜಾಗ ಬೇಕೋ ಅಷ್ಟು ಬಿಟ್ಟು, ಮಿಕ್ಕ ಬೇರೆ ಶಬ್ದಗಳು ಕಿವಿ ಹೊಕ್ಕು ಡಿಸ್ಟರ್ಬ್ ಮಾಡದೆ ಇರಲಿ ಅಂತ, ಸೌಂಡ್ ಕಂಟ್ರೋಲ್ ಮಾಡುತ್ತಾ ಇದ್ದೆ.

ಸರು—ಓ !

ರಾಮು—ಅಂದರೆ ? ಸಂಗೀತ ನಿಮಗಿಷ್ಟವೇ ?

ಭೀಮು—ಹುಚ್ಚು.

ಸರು—ಹೌದು.

ಭೀಮು—ಅಷ್ಟೇ ಅಲ್ಲ. ಶುದ್ಧ ಹೌದು. ಯಾಕೆಂದರೆ ನನ್ನದು ಬರೀ ಹುಚ್ಚಲ್ಲ. ಶುದ್ಧ ಹುಚ್ಚು -

ಸರು—ಷಟ್ ಅಪ್ !

ಸೀತ—ಅಯ್ಯೋ-

ರಾಮು—ಸರೋಜ!

ಭೀಮು—ಪ್ರಾರಂಭ ಅಷ್ಟೇ ಇನ್ನೂ. (ನಗುವನು)

ಸರು—ನಗಿ. ನಗಿ. ನನಗೆ ನಿಮ್ಮ ಮೋಸ ಅರ್ಥವಾಗಲಿಲ್ಲ ಅಂತ ಇದ್ದೀರಾ?

ರಾಮು—ಮೋಸ?

ಸೀತ—ಏನು ಮೋಸ? ಯಾರಿಗೆ?

ಪುಟ್ಟ—(ನಗುತ್ತಾ) ಶುದ್ಧ ಮೋಸ. ಅವಳಿಗೆ. ಇನ್ನೂ ನಿಮಗೆ ಅರ್ಥವೇ ಆಗಲಿಲ್ಲವೇ?...."ಸರೋಜಾ, ಭೀಮೂಗೆ ಸಂಗೀತ ತುಂಬ ಇಷ್ಟ, ಒಂದು ಕೀರ್ತನೆ ಹಾಡಮ್ಮ" ಅಂದಿದ್ದರೆ, ಅವಳು ತಿರುಕನೋರ್ವ ನೂರ ಮುಂದೆ"ನೋ "ಇಟ್ಟರೆ ಸಗಣಿಯಾದೇನೊ ತಟ್ಟದೆ ಬಿಡುತ್ತಿದ್ದಳೇನು?

ಸೀತ—ಹೂಂ?

ರಾಮು—ಹೂಂ?

ಪುಟ್ಟ—ನಾವಿಬ್ಬರೂ ಹಾದಿಯಲ್ಲಿ ಬರುತ್ತಾ ಮಾತಾಡಿಕೊಂಡು ಬೇಕೆಂತಲೇ ಈ ಬಲೆ ಬೀಸಿದೆವು. ಬಿದ್ದಳು! ಅಬಲೆ!

ಸರು—ಷಟ್ ಅಪ್!

ಭೀಮು—ಎರಡನೆಯ ಸಾರಿ—

ರಾಮು—ಅಂದರೆ....ಅಂದರೆ— ಮಿಸ್ಟರ್ ಭೀಮರಾವ್....ಇವಳು ಇಷ್ಟಾದರೂ....ನೀವು ಇವಳನ್ನು ಒಪ್ಪಿಕೊಳ್ಳುತ್ತೀರಾ?

ಭೀಮು—ಇಂಥ ಸ್ವೀಟ್ ಏಂಜಲ್ಲನ್ನು ಬೇಡ ಅಂತ ಬಿಟ್ಟು ಹೋದ ಅಷ್ಟು ಮುಠ್ಠಾಳರಿಗೂ ಕನಿಕರಿಸಿ, ಈ ಸುಯೋಗ ನನಗೆ ರಿಸರ್ವ್ ಮಾಡಿಟ್ಟ ಚತುರ್ಮುಖನಿಗೆ ಥ್ಯಾಂಕ್ಸ್ ಹೇಳಿ....ಒಪ್ಪುತ್ತೇನೆ,ಒಪ್ಪುತ್ತೇನೆ, ಒಪ್ಪುತ್ತೇನೆ ಅಂತ ಒತ್ತಿ ಒತ್ತಿ ಹೇಳುತ್ತೇನೆ. ಆದರೆ ನಾನಾಗಲೇ ಹೇಳಿದೆ. ನಾನು ಒಪ್ಪಿದಷ್ಟಕ್ಕೆ ತಾಳಿ ಕಟ್ಟುವವನಲ್ಲ. ವಧು ಸಂತೋಷದಿಂದ ಕುತ್ತಿಗೆ

ಕೊಟ್ಟಿರೀ ಕರಿಮಣಿ.-ಓಲಗ, ಬ್ಯಾಂಡ್ ; ಇಲ್ಲದಿದ್ದರೆ ನೋ ವೈಫ್, ನೋ ಹಸ್‌ಬ್ಯಾಂಡ್, ಆಲ್ ಡಿಸ್‌ಬ್ಯಾಂಡ್. (ಹ್ಯಾಟು ಎತ್ತಿ ನಿಲ್ಲುವನು)

ರಾಮು—ಸ್ವಲ್ಪ, ಸ್ವಲ್ಪ, ಒಂದು ಸೆಕೆಂಡ್ ತಡೆಯಿರಿ - ನಾವು....ಲೇ.... ಜೋಯಿಸರೇ....ಸರೋಜ -

ಸರು—ಅಪ್ಪಾ, ನೀನು ವರ್‍ರಿ ಮಾಡಿಕೊಳ್ಳಬೇಡ. ಅಮ್ಮ, ಕಣ್ಣೀರು ಒರಸಿಕೋ. ನಿಮ್ಮಿಬ್ಬರನ್ನೂ ನೋಡಿ ನನಗೆ ಸಂಕಟವಾಗತ್ತೆ. (ಭೀಮೂಗೆ) ಸ್ವೀಟ್ ಏಂಜಲ್ ! ಬಲೆ ಬೀಸಿದಿರಿ ! ಅಬಲೆ, ಬಿದ್ದುಬಿಟ್ಟಳು ಅಲ್ಲ ?.... ಅಮ್ಮ, ಇವರು ನಿಜವಾಗಲೂ ನನ್ನನ್ನು ಮದುವೆ ಮಾಡಿಕೊಳ್ಳೊಕ್ಕೆ ಬಂದಿದ್ದಾರೆ ಅಂದುಕೊಂಡಿದ್ದೀಯೇನಮ್ಮ ? ಊಹೂ. ನಮ್ಮನ್ನ ಮೋಸ ಮಾಡಿ, ಆಟ ಆಡಿ, ಓಡಿಹೋಗೊಕ್ಕೆ, ಬಂದಿರುವವರಮ್ಮಾ ಇವರು – (ಭೀಮೂಗೆ) ನಾನು ಚಂಡಿ ಅಂತ ಜೋಯಿಸರು ನಿಮಗೆ ಹೇಳಿದ್ದರು. ಹಾಡು ಬೇಡ ಅಂದರೆ ನಾನು ಹಾಡುತ್ತೇನಿ ಅಂತ ಬಲೆ ಬೀಸಿದಿರಿ. ನಾನು ಬಿದ್ದೆ, ನಿಜ....ಆದರೆ ನಾನು ಅಬಲೆ ಅಲ್ಲ. ನಿಮ್ಮ ಬಲೆಯನ್ನು ಹರಿದು ಚೂರು ಚೂರು ಮಾಡುವ ಶಕ್ತಿ ನನಗಿದೆ. ನನ್ನನ್ನು ಮದುವೆ ಮಾಡಿಕೊಳ್ಳೊಕ್ಕೆ ಒಪ್ಪುತ್ತೇನೆ ಒಪ್ಪುತ್ತೇನೆ ಒಪ್ಪುತ್ತೇನೆ ಅಂತ ಒತ್ತಿ ಒತ್ತಿ ಹೇಳಿದರೆ, ನಾನು ಮತ್ತೆ ಬೇಗ ಬಿದ್ದು, ಒಪ್ಪೊಲ್ಲ, ಒಪ್ಪೊಲ್ಲ ಒಪ್ಪೊಲ್ಲ ಅನ್ನುತ್ತೇನೆ ಅನ್ನುವ ಧೈರ್ಯದ ಮೇಲೆ, "ಹು, ಉಹು". ಅನ್ನೊಕ್ಕೆ ನನಗೆ ಛಾನ್ಸು ಕೊಟ್ಟು ನಾಟಕ ಆಡಿ ಓಡಿಹೋಗೋಣ ಅಂತ ಇದ್ದಿರಿ ಅಲ್ಲವೇ ? ಮಿಸ್ಟರ್, ನಾನು ಛಾನ್ಸು ತೊಗೊಳ್ಳುತ್ತೇನೆ. ಈ ಸರ್‍ತಿ ಚಂಡಿಯಾಗೊಲ್ಲ. ಜೋಯಿಸರೇ, ಕೈಗೆ ತೊಗೊಂಡಿರುವ ಹ್ಯಾಟನ್ನ ಆ ರ್‍ಯಾಕಿಗೆ ಹಾಕೊಕ್ಕೆ ಹೇಳಿ. ಅಮ್ಮಾ, ನಾನು ಅವರನ್ನು ಮದುವೆ ಮಾಡಿಕೊಳ್ಳೊಕ್ಕೆ ಒಪ್ಪುತ್ತೇನೆ,ಒಪ್ಪುತ್ತೇನೆ,ಒಪ್ಪುತ್ತೇನೆ (ಭೀಮೂನ ನೋಡುತ್ತಾ) ಅಂತ ಒತ್ತಿ ಒತ್ತಿ ಹೇಳುತ್ತೇನೆ. ಜೋಯಿಸರೇ, ಬಿಚ್ಚೀ ಪಂಚಾಂಗ, ಇಡಿಸಿ ಲಗ್ನ, ಆಗಲಿ ಮದುವೆ. ಇಗೋ ಕುತ್ತಿಗೆ !

ರಾಮು—ಲೇ !

ಸೀತ— ಸರೋಜ !

ಭೀಮು—ಭಲೆ, ಭಲೆ, ಭಲೆ, ಸ್ಪಿರಿಟ್ಟೆಂದರೆ ಇದು. ಹೆಂಡತಿ

ಅಂದರೆ ಹೀಗಿರಬೇಕು. ಜೋಯಿಸರೇ, ಯಾಕೆ ಹೀಗೆ ತೆಪ್ಪಗೆ ಕೂತಿರಿ ? ನನ್ನ ಬೆಟರ್‌ಹಾಫ್ ಆರ್ಡರ್ ಮಾಡಿದ್ದು ಕೇಳಲಿಲ್ಲವೇ ? ತಡ ಮಾಡಬೇಡಿ. ಹೇಳಿ, ಸುಲಗ್ನ ಸಾವಧಾನ ; ನುಡಿಯಿರಿ, ಸುಮುಹೂರ್ತ ಸಾವಧಾನ ; ಈ ನಡುಮನೆಯೇ ಮಂಟಪ ; ಚಂದ್ರೂ, ಹಾಡೋ, ನಿನ್ನ ಪೋಕಲ್ಲೇ ಓಲಗ, ನನ್ನ ಈ ಬರಿ ತೋಳುಗಳೇ ತಾಳಿ - (ಸರೋಜಳ ಕಡೆ ಹೊರಡಲು)—

ಸರು—(ಕಕ್ಕಾವಿಕ್ಕಿಯಾಗಿ) ಓ.... (ತುಟಿ ಬಿಗಿದು...ಕಡಿದು...ತಾನೇ ಭೀಮೂ ಕಡೆ ನುಗ್ಗುವಳೋ ? ಊಹೂ...ಸೋತು—) ಓ. ಅವರಿಗೆ ಹುಚ್ಚು, ಅವರಿಗೆ ಹುಚ್ಚು, ಅವರಿಗೆ ಹುಚ್ಚು !

(ತನ್ನ ಕೋಣೆಗೆ ಓಡುತ್ತಿರಲು)

—ತೆರೆ—

ದೃಶ್ಯ ೬

[ಒಂದು ಬೀದಿ. ರಾಮರಾಯರೂ ಪುಟ್ಟಾಜೋಯಿಸರೂ]

ರಾಮು—ಅಸಾಧ್ಯ ಹುಡುಗ, ಅಸಾಧ್ಯ ಹುಡುಗ –

ಪುಟ್ಟ—ನಾವು ಸುಮ್ಮನೆ ಈಗಿನ ಕಾಲದವರು ಅಂದುಬಿಡುತ್ತೇವೆ, ನೋಡಿ - ಅಂ ?

ರಾಮು—ಪಟ್ಟಿಗೆ ಪಟ್ಟು, !ಪಟ್ಟಿಗೆ ಪಟ್ಟು. ಮಣ್ಣು ಮುಕ್ಕಿಸಿ ಬಿಟ್ಟನೇ ಮಟ್ಟಿಯಲ್ಲಿ, ಜಟ್ಟಿ – ನನ್ನ ಮಗಳನ್ನ !

ಪುಟ್ಟ—ಹೆಸರಿಗೆ ತಕ್ಕ ಹಾಗೇ ಭೀಮ ಅಂದರೆ ಭೀಮನೇ. ಏನ್ನನ್ನು ತ್ತೀರಿ ?

ರಾಮು—(ನಗುತ್ತಾ) ಹಲ್ಲಾ, ನನಗಿನ್ನೂ ನಗು ಬರುತ್ತೆ....ಅವಳು ಅವಳ ಜನ್ಮದಲ್ಲಿ ಇಂಥ ಗಿರಾಕಿ ಗಂಟು ಬೀಳುತ್ತಾನೆ ಅಂತ - ಸ್ವಪ್ನದಲ್ಲಿ ಕೂಡ ಅಂದುಕೊಂಡಿರಲಾರಳು.

ಪುಟ್ಟ— ನಿಮ್ಮ ಮನೆಯಲ್ಲೇ ಹೀಗೆ ನೀರು ಕುಡಿಸಿದವನು, ಊರಿಗೆ ಕರೆದುಕೊಂಡು ಹೋದಮೇಲೆ. ದೇವರೇ ಗತಿ ನೀರಿಗೆ ನೀರು—

ರಾಮು—ಅನುಭವಿಸಲಿ, ಸುಮ್ಮನಿರಿ. ಇಲ್ಲಿ ಇದುವರೆಗೂ ನಮ್ಮನ್ನೆಲ್ಲಾ ಹುರಿದು ಮುಕ್ಕಿದ್ದಕ್ಕೆ, ಅಲ್ಲಿ—

ಪುಟ್ಟ— ಇವನು ಅವಳನ್ನ ಬಿಸಿ ಬಾಣಲೆಯಲ್ಲಿ ಹಾಕಿ....

ರಾಮು—ಹಾಕಲಿ-ಆಗಲೇ ಕೊಬ್ಬು ಕರಗುವುದು-ಅಗೋ ಶಾಂತೂ-

ಪುಟ್ಟ—ಬನ್ನಿ, ಬನ್ನಿ, ಇವಳು ಇನ್ನೆಲ್ಲಾದರೂ ಹೊರಟುಬಿಟ್ಟಾಳು-ಚಂದ್ರು ಒಬ್ಬನೇ ಮನೆಯಲ್ಲಿ—

ರಾಮು—ಹೌದು, ಹೌದು....ಜೋಯಿಸರೇ, ಇವತ್ತೇನೋ ದೆಸೆ—ಸಾಯಂಕಾಲ ಆ ಮೈಸೂರಿನವನೂ ಬಂದು-ಶಾಂತೂನೂ—

ಪುಟ್ಟ—ಅಯ್ಯೋ, ನರಿ ಮುಖ ನೋಡಿರಬೇಕು, ನಡೆಯಿರಿ—ಸಧ್ಯಕ್ಕೆ ಆ ಪ್ರಿಂಟು ಮಾಡಿದವನಿಗೆ, ಈ ಒಂದರ ಲಗ್ನಪತ್ರಿಕೆ-ಅಗೋ ಹೊರಟಳು—ನಡೆಯಿರಿ—

ರಾಮು—ಆ—ಶಾಂತೂ-(ಎಂದು ಕೂಗುತ್ತಾ)

(ಇಬ್ಬರೂ ನಿಷ್ಕ್ರಮಿಸುವರು)

ದೃಶ್ಯ ೭

(ಸ್ವಲ್ಪ ಹೊತ್ತಿನ ತರುವಾಯ. ಶಾಂತೂ ಕೋಣೆ. ಚಂದ್ರು ಕುಳಿತಿದ್ದಾನೆ ಶಾಂತೂ ಅಷ್ಟು ದೂರದಿಂದ—)

ಶಾಂತ—ಆಶ್ಚರ್ಯ. ಆಶ್ಚರ್ಯ. ಆಯಿತು. ಅವಳ ಮದುವೆ ಕತೆ ಆಯಿತು. ತಾವು ಈ ವೇಷದಲ್ಲಿ ಕದ್ದು ಬಂದದ್ದು-?

ಚಂದ್ರು—(ಏಳುತ್ತಾ) ನೋ, ನೋ, ಅದು, ಯೂ ಸೀ—

ಶಾಂತ—ಕೂತುಕೊಂಡೇ ಮಾತಾಡಬಹುದು.

ಚಂದ್ರು—(ಕೂತು) ಇದು ನಿಮ್ಮ ಭಾವನ ಐಡಿಯ.

ಶಾಂತ— ಏನೂ—?

ಚಂದ್ರು— ಜೋಯಿಸರು ಕೃಷ್ಣಭಾಗವತರಿಗೆ ಹೇಳುತ್ತೇನೆ ಅಂತ ಹೊರಟಿದ್ದರು-

ಶಾಂತ - "ಬೇಡ ಬೇಡ" ಅಂದು ನಿಮ್ಮನ್ನ-?

ಚಂದ್ರು - (ಎದ್ದು) ನಿಮಗೆ ಇಷ್ಟವಿಲ್ಲದಿದ್ದರೆ ನಾನು–

ಶಾಂತ - ಛೀ ಛೀ ಛೀ, ಕೂತುಕೊಳ್ಳಿ. ಇಷ್ಟಕ್ಕೇ ಕೋಪಿಸಿಕೊಂಡರೆ ಹೇಗೆ?....ಹೌದು....ನನಗೆ....ಒಂದು....ಇದು... ಅರ್ಥವಾಗುತ್ತಾ ಇಲ್ಲ.

ಚಂದ್ರು—ಯಾವುದು?

ಶಾಂತ - ಹೊನ್ನೆ ನೀವು ಕೊಟ್ಟಿದ್ದಿರಲ್ಲಾ ಪುಸ್ತಕ–

ಚಂದ್ರು—ಹುಂ?

ಶಾಂತ—ಅದರಲ್ಲಿ ಇದ್ದ ಲಗ್ನಪತ್ರಿಕೆ ನೋಡಿದೆ.

ಚಂದ್ರು ಓ?

ಶಾಂತ ನಾಡದ್ದು ಬುಧವಾರ ಲಗ್ನ. ಅಲ್ಲಿ ಸೌ॥ ಗೌರಮ್ಮ ಕಾದು ಕೂತಿರುವಾಗ, ನೀವು ಇಲ್ಲಿ ಶಾಂತಮ್ಮನಿಗೆ ಸಂಗೀತ ಹೇಳಿಕೊಡೊಕ್ಕೆ ಬಂದಿರುವುದು–ಅರ್ಥವಾಗುತ್ತಾ ಇಲ್ಲ!

ಚಂದ್ರು ನೀವು ಹೋಗು ಅಂದರೆ ನಾನು ಹೋಗುತ್ತೇನೆ.

ಶಾಂತ "ಹೋಗಿ", "ಇರಿ". ಅಂತ ಹೇಳುವ ಅಧಿಕಾರ ನನಗೆಲ್ಲಿದೆ?

ಚಂದ್ರು ಇಲ್ಲವೇನು?....ಇದೆ ಅಂತ ಇದ್ದೆ. ಸರಿ. ಆಗಲಿ. ಹೋಗುತ್ತೇನೆ. ನಾಡಿದ್ದು ಬುಧವಾರ ಅಲ್ಲದಿದ್ದರೆ ಇನ್ನೊಂದು ಗುರುವಾರ ಬರುತ್ತೆ, ಆಗತ್ತೆ. ಆದರೆ-

ಶಾಂತ—ಆದರೆ–? ಓಹೋ, ಬುಧವಾರ ಇಲ್ಲಿ ನಿಮ್ಮ ಸ್ನೇಹಿತರ ಮದುವೆ–

ಚಂದ್ರು—ಜತೆಗೆ ನಿಮ್ಮದೂ–

ಶಾಂತ—ನನ್ನದೂ-?

ಚಂದ್ರು—ಹೌದು. ಸಂಜೆ ಮೈಸೂರಿನಿಂದ ಒಬ್ಬ ವರ ಬರುವವ ನಿದಾನಂತೆ-

ಶಾಂತ—ಓಹೋ. ಬಂದು, ಒಪ್ಪಿ-ಮದುವೆ ಆಗುತ್ತೆ-

ಚಂದ್ರು—ಆರತಕ್ಷತೆ ಸಮಯದಲ್ಲಿ ಮನಸ್ಸು ಪೂರ್ತಿ ಹಾಡಿ.... ನಿಮ್ಮನ್ನು ಸಂತೋಷಪಡಿಸಿ ಹೊರಟು ಹೋಗೋಣ ಅಂತ-

ಶಾಂತ—ನನಗೆ ಸಂತೋಷ ಆಗುತ್ತೆ ಅಂತ ನಿಮಗೆ ಖಂಡಿತ ನಂಬಿಕೆ ಏನು?

ಚಂದ್ರು—ಯಾಕೆ-?

ಶಾಂತ—ಅಲ್ಲ, ನನಗೆ ಯಾವುದು ಸಂತೋಷ, ಯಾವುದು ಅಲ್ಲ ಅನ್ನುವುದನ್ನ ನೀವೇ ನಿರ್ಧರಿಸುತ್ತಿದ್ದೀರಿ-

ಚಂದ್ರು— ಊಹೂ. ಹಾಗಲ್ಲ -

ಶಾಂತ—ಯಾಕೆ ಹಾಗಲ್ಲ? ನನ್ನದು ಸ್ತ್ರೀ ಜಾತಿ. ಮೈಸೂರಿನ ಗಂಡು ವರ ಬಂದು ನನ್ನನ್ನು ಒಪ್ಪಿದರಾಯಿತು, ನಾನು ಹುಂ, ಊಹುಂ, ಅನ್ನಬೇಕಾಗಿಲ್ಲ?

ಚಂದ್ರು—ನಮ್ಮ ಅಪ್ಪ ನನಗೇ ಹುಂ ಊಹುಂ ಅನ್ನುವ ಅವಕಾಶ ಕೊಡಲಿಲ್ಲ.

ಶಾಂತ ಏನೂ?....ಅಂದರೆ?.. ಆ ಲಗ್ನ ಪತ್ರಿಕೆ?... ನಿಮ್ಮ ಇಷ್ಟ ಇಲ್ಲದೆ-?

ಚಂದ್ರು—ನನ್ನ ಇಷ್ಟ ಇರೊಲ್ಲ ಅಂತ ನೀವು ತಿಳಿದುಕೊಳ್ಳಬಲ್ಲಿರಿ ಅಂತ ಇದ್ದೆ-

ಶಾಂತ— ಓ... ಮಿಸ್ಟರ್ ಚಂದ್ರಶೇಖರ್, ದಯವಿಟ್ಟು ಒಂದು ತಿಳಿದುಕೊಳ್ಳಿ, ನಮ್ಮ ಅಕ್ಕನ ಕೊಬ್ಬು ನನಗಿಲ್ಲದಿದ್ದರೂ ನಾನು ಬೆಣ್ಣೆಯೂ ಅಲ್ಲ, ನನ್ನ ಹೆಸರು ಶಾಂತ ಆದರೂ ನನ್ನ ಅಕ್ಕನ ತಂಗಿ ಪೂರ್ತಿ ಅಲ್ಲ ಅನ್ನು ವುದು ತಪ್ಪು. ಹೋಗಲಿ, ಈಗ ಯಾಕೆ-ಸಮಯ ಬಂದಾಗ ನೋಡಿ

ಕೊಳ್ಳೋಣ. ಸಧ್ಯಕ್ಕೆ ನೀವು ಗುರುಗಳು, ನಾನು ಶಿಷ್ಯೆ. ಏನು ಕಲಿಸುತ್ತೀರೋ ಕಲಿಸಿ.

ಚಂದ್ರು-- ಹೌದು ಹೌದು. ಅಷ್ಟು ಹೊತ್ತಿನಿಂದ ಬರೀ ಮಾತು. ನಿಮ್ಮ ತಾಯಿ ಏನು ತಿಳಿದುಕೊಳ್ಳಬಹುದು!

ಶಾಂತ—ತಮ್ಮ ತಂದೆಗೇ ಹೆದರದವರು ಇನ್ನೊಬ್ಬರ ತಾಯಿಗೆ ಬೆದರುವುದು- ನಾಟಕ !

ಚಂದ್ರು—ಇಲ್ಲಿ ಕೊಡಿ, ತಂಬೂರಿ.

ಶಾಂತ—ಯಾಕೆ? ನನ್ನ ಕೈ ಭಾರ ಅಂತಲೇ?

ಚಂದ್ರು—ಬೇಡಿ. ನೀವೇ ಇಟ್ಟುಕೊಳ್ಳಿ.

ಶಾಂತ - ಒನ್ಸ್ ಫಾರ್ ಆಲ್ ಡಿಸೈಡ್ ಮಾಡಿ. ಇದು ಸರೋಜನ ತಂಬೂರಿ. ಆವತ್ತು ಲೈಬ್ರರಿಯಲ್ಲಿ ಪುಸ್ತಕಕ್ಕಾದ ಗತಿ ಇದಕ್ಕೂ ಆದರೆ–

ಚಂದ್ರು– ಅಬ್ಬ, ನೀವಿಷ್ಟು ಮಾತಾಡಬಲ್ಲಿರಿ ಅಂತ-

ಶಾಂತ—ಆಗಲೇ ಹೇಳಿದೆನಲ್ಲಾ ಅಕ್ಕನ ತಂಗಿ ಅಂತ. ಅಪ್ಪಿಯರೆನ್ಸಸ್ ಆರ್ ಡಿಸೆಪ್ಟಿವ್-ಬಿಟ್ವೀನ್ ಅವರ್‌ಸೆಲ್ವ್ಸ್, ತಿಳಿದುಕೊಳ್ಳಿ-ನಿಜವಾಗಲೂ ಅವಳೇ ವಾಸಿ-

ಚಂದ್ರು—ಥ್ಯಾಂಕ್ಸ್.........ನಿಮ್ಮ ಶ್ರುತಿ?

ಶಾಂತ—ನಿಮ್ಮದೇ.

ಚಂದ್ರು—ಆಂ?

ಶಾಂತ– ಬೇರೆ ಬೇರೆ ಶ್ರುತಿಯಲ್ಲಿ ಹಾಡೋಕ್ಕಾಗುತ್ತೇನ್ರಿ?

ಚಂದ್ರು—ತುಂಬ ಮಾತು–

ಶಾಂತ—ನಾನು ಮಾತಾಡುವವಳು, ನೀವು ಕೆಲಸಗಾರರು.

ಚಂದ್ರು—ಆಂ? ಓ, ಈ ಮೇಷ್ಟರ ಪಾರ್ಟಿನಲ್ಲಿ ಬಂದಿದ್ದು–?

ಶಾಂತ— ಅಲ್ಲ, ಮದುವೆಗೆ ಹೋಗದೆ ನಿಂತದ್ದು -

ಚಂದ್ರು—ಓ !

ಶಾಂತ—ಆ ವಿಶ್ವೇಶ್ವರಭಟ್ಟರ ಮಗಳು – ಪಾಪ !

ಚಂದ್ರು—ಪಾಪ !

ಶಾಂತ—ಅಂ ?

ಚಂದ್ರು—ಆ ಮೈಸೂರಿನ ವರ !

ಶಾಂತ—**ಚಂದ್ರು**—ಪಾ–ಪ !!

ಚಂದ್ರು—ಗುಡ್. ಕೃತಿ –

ಶಾಂತ—ಕೂಡಿತಲ್ಲಾ ? ಈಗ ಸದ್ದು ಮಾಡದೆ ಏನಾದರೂ ಹೇಳಿ ಕೊಡುವ ಶಾಸ್ತ್ರ ಮಾಡಿ.

ಚಂದ್ರು—ಏನು ಹೇಳಿಕೊಡಲಿ ?

ಶಾಂತ—ಪ್ರಾರಂಭಕ್ಕೆ ವಿಘ್ನೇಶ್ವರನ ಮೇಲಿಂದೇ ಸಂದರ್ಭಕ್ಕೆ - ಸರಿ ಅಲ್ಲ ?

ಚಂದ್ರು—ಕರೆಕ್ಟ್.

(ಪಾಠ ಮುಗಿದ ನಂತರ)

ಸೀತ—(ಒಳಗಿಂದ) ಶಾಂತೂ -

ಶಾಂತ—ಬಂದೆ. ಬಂದೇಽಮ್ಮಾ. (ಒಳಗೋಡುವಳು)

ಚಂದ್ರು—(ಸಮಾಧಾನದಿಂದ ಹುಟ್ಟಿದ ಆನಂದದಲ್ಲಿ ಉತ್ಸಾಹದಿಂದ ಹಾಡಿ ಕೊಳ್ಳುತ್ತಿರಲು, ಶಾಂತು ಕಾಫಿಬಟ್ಟಲು ತಟ್ಟೆಯಲ್ಲಿಟ್ಟು ತರುವಳು) ಏನದು ?

ಶಾಂತ—ಗಂಟಲು ಒಣಗಿರಬಹುದು ಅಂತ –

ಚಂದ್ರು ಏನು – ?

ಶಾಂತ—ನೀರು ಮರಳಿಸಿ, ಪುಡಿ ಸೇರಿಸಿ, ಅರಕು ಶೋಧಿಸಿ, ಹಾಲು ಬೆರಸಿ, ಸಕ್ಕರೆ ಕರಗಿಸಿ – ಕ್ಷಮಿಸಿ, ಇದು ಕಾಫಿ.

ಚಂದ್ರು—ತ್ಸು ತ್ಸು ತ್ಸು ತ್ಸು... ಬಟ್ಟಲಿಗೆ ಬಗ್ಗಿಸಿ, ತಟ್ಟೆಯಲ್ಲಿಟ್ಟು –

ಶಾಂತ—ಹೌದು. (ನಗುವಳು) ತೊಗೊಳ್ಳಿ.

ಚಂದ್ರು—(ಇಸಗೊಂಡು) ಒಂದೇ ಬಟ್ಟಲು ತಂದಿರಲ್ಲಾ ?

ಶಾಂತ—ಅದು ಕುಡಿಯಿರಿ. ತಿರುಗಿ ಬೇಕಾದರೆ ತಂದುಕೊಡುತ್ತೇನೆ.

ಚಂದ್ರು—ಅಪ್ಪಿಯರೆನ್ಸಸ್ ಆರ್ ಡಿಸೆಪ್ಟಿವ್....

ಶಾಂತ—(ನಗುತ್ತಾ) ನನಗೆಲ್ಲಿ ಅಂತ ತಾನೇ ನಿಮ್ಮ ಅರ್ಥ ?

ಚಂದ್ರು—ಹೌದು.

ಶಾಂತ—ನಾನು ಕಾಫಿ ಕುಡಿಯೊಲ್ಲ.

ಚಂದ್ರು—ಯಾಕೆ ?

ಶಾಂತ—ಅದರ ಅಭ್ಯಾಸವೇ ಇಲ್ಲ.

ಚಂದ್ರು—ಓ. ಹಾಗಾದರೆ ನನಗೂ ಇದು ಬೇಡ.

ಶಾಂತ—ಯಾಕೆ ? ನಿಮಗೆ ಅಭ್ಯಾಸ ಇದೆ. ತೊಗೊಳ್ಳಿ.

ಚಂದ್ರು—ಬೇಡಿ. ನಾಳೆಯಿಂದ ನಾನೂ ಇದನ್ನ ಬಿಟ್ಬಿಬಿಡುತ್ತೇನೆ.

ಶಾಂತ—ನಾಳೆಯಿಂದ ಬಿಡುವಿರಂತೆ. ಇವತ್ತು ತಂದಾಗಿದೆ. ತೊಗೊಂಡುಬಿಡಿ,

ಚಂದ್ರು—ಊ ಹು.

ಶಾಂತ—ಅಮ್ಮಾ -

ಚಂದ್ರು—ಈ ಸರ್ತಿ ನಾನು ಹೆದರೊಲ್ಲ. ನೀವೂ ತಂದು ಕುಡಿದರೇ -

ಶಾಂತ—.......ಆಲ್ ರೈಟ್...ಬಂದೆ. (ಒಳಗೆ ಓಡುವಳು. ಚಂದ್ರು ರಾಗ ಗೊಣಗಿಕೊಳ್ಳುತ್ತಿರುವನು. ಸರೋಜ ನುಗ್ಗಿ, ನೋಡಿ— ಹಾಗೇ ಮರೆಯಲ್ಲಿ ನಿಲ್ಲುವಳು. ಶಾಂತ ಬಟ್ಟಲು ಹಿಡಿದು ಬಂದು) ಹುಂ. ಇಗೋ, ತಂದಿದ್ದೇನೆ. ತೊಗೊಳ್ಳಿ. ಆರಿ ಹೋಗುತ್ತೆ.

ಚಂದ್ರು—ಉಂ...ನಿಮ್ಮ ಬಟ್ಟಲು ಬರಿದಲ್ಲವಲ್ಲ ?

ಶಾಂತ—ಅಬ್ಬ, ಎಷ್ಟು ಅಪನಂಬಿಕೆ ! ನೋಡೀ -

ಚಂದ್ರು—ಇದೇನಿದು ? ಎರಡೇ ಚಮಚ ? ನೋ. ನೋ. (ತನ್ನ ಲೋಟದಿಂದ ಬಗ್ಗಿಸಿ) ಉಂ -

ಶಾಂತ—ಉ ಹು ಹು, ಪ್ಲೀಸ್ -

ಚಂದ್ರು—ನನ್ನದೂ ನಿಮ್ಮದು ಎತ್ತರ ಬೇರೆ ಬೇರೆ ಇರಬಹುದು. ನಮ್ಮ ಈ ಕಾಫಿ ಎತ್ತರದಲ್ಲಿ ಯಾಕೆ ವ್ಯತ್ಯಾಸ ?...

ಶಾಂತ—ಈಗ ಸರಿಯಾಯಿತಾ ?

ಚಂದ್ರು—ಮಚ್ ಬೆಟರ್... ಉಂ... ನನ್ನಿಂದ ನಿಮಗೆ ತೊಂದರೆ -

ಶಾಂತ—ಯಾವ ?

ಚಂದ್ರು ಇಲ್ಲದ ಅಭ್ಯಾಸ ಮಾಡಿಕೊಳ್ಳಬೇಕಾಯಿತು.

ಶಾಂತ—ಏನು ಮಾಡುವುದು ? ನನ್ನಿಂದ ನಿಮಗೂ ತೊಂದರೆ ಯಲ್ಲಾ ?

ಚಂದ್ರು ...ಯಾವ ?

ಶಾಂತ—ಇರುವ ಅಭ್ಯಾಸ ನಾಳೆಯಿಂದ ಬಿಟ್ಟುಬಿಡಬೇಕಲ್ಲಾ -

ಚಂದ್ರು -- ಓ... ಅದಾ ?

ಇಬ್ಬರೂ—ಒಂದಕ್ಕೊಂದು ಸರಿಹೋಯಿತು.

ಸರು -- (ನುಗ್ಗುತ್ತಾ) ಸರಿ ಹೋಯಿತು.

(ಸೀತಮ್ಮ ಬಾಗಿಲಲ್ಲಿ ಕಾಣಿಸಿಕೊಳ್ಳುವರು)

ಶಾಂತ-ಚಂದ್ರು—ಓ !

ಸರು— ಒಂದಕ್ಕೊಂದು... ಸರಿ ಹೋಯಿತು !... ಯಾರನ್ನು ಕೇಳಿ ತಂದಿರಿ ಈ ನನ್ನ ತಂಬೂರಿಯನ್ನ ? (ಎತ್ತಿಕೊಂಡು, ದುರುದುರು ನೋಡಿ ಹಿಂತಿರುಗುತ್ತಿರಲು)

ಸೀತಾ—(ಒಳಗೆ ಬಂದು) ಸರೋಜ, ಏನಮ್ಮ ಇದು ?

ಸರು—ಇದು - ತಂಬೂರಿ - ನನ್ನದು - ತೊಗೊಂಡು ಹೋಗುತ್ತಾ ಇದ್ದೀನಿ... ನಾಳೆಯಿಂದ ನಾನು ರೂಂ ಬಾಗಿಲು ಆಗಳಿ ಹಾಕಿಕೊಂಡು ಮಲಗಿ

ಕೊಳ್ಳಬೇಕೇನೋ ! ಇವತ್ತು ತಂಬೂರಿ, ನಾಳೆ ಗಂಟಲನ್ನೇ ಕತ್ತರಿಸಿ ತಂದಾಳು, ಸರ್ಜನ್ನು ! (ಮರೆಯಾಗುವಳು)

ಸೀತ— ನೀವೇನೂ ತಿಳಿದುಕೊಳ್ಳಬೇಡಿ – ಅವಳು –

ಚಂದ್ರು—ಚಿಂತಿಲ್ಲ. ಪಾತ ಆಗಿಹೋಗಿತ್ತು.

ಸೀತ—ನಿಮಗೇನನ್ನಿಸುತ್ತೆ ? ಅಭ್ಯಾಸ ಮಾಡಿದರೆ –

ಚಂದ್ರು—ಚೆನ್ನಾಗಿ ಹಾಡಬಹುದು.

ಸೀತ—ಸರೋಜಂಗಿಂತ ಒಳ್ಳೆ ಗಂಟಲೇ....ಅರ್ಧ ಅರ್ಧ ಗಂಟೆ ಹೇಳಿ ಕೊಳ್ಳೇ ಅಂದರೆ - ಕೇಳೊಲ್ಲ....ನಿಮ್ಮ ಮನೆ ಎಲ್ಲಿ ? ದೂರ ಆದರೆ ಕಾರು ಕಳುಹಿಸುತ್ತೇನೆ.

ಚಂದ್ರು— ನನಗೆ ಮನೆ ಇಲ್ಲ. ಇಲ್ಲೇ ಸೆಂಟ್ರಲ್ ಹೋಟಲಲ್ಲಿದ್ದೇನೆ,

ಸೀತ—ಹೋಟಲ್ಲು ಯಾಕೆ – ?

ಚಂದ್ರು—ನಾನು ಈ ಊರಿನವನಲ್ಲ. ನಮ್ಮದು ಕೀರನಹಳ್ಳಿ ಅಂತ–

ಸೀತ—ಯಾವ ? (ಶಾಂತೂಗೆ) ನಮ್ಮ ಶ್ರೀಕಂಠಯ್ಯನವರು ಹೇಳು ತ್ತಿರುತ್ತಾರಲ್ಲೇ –

ಚಂದ್ರು—ಅವರು ನಮಗೆ ದೂರದ ಸಂಬಂಧ.

ಸೀತ—ಹೌದಾ ? ನಮಗೂ ಅವರು ಸಂಬಂಧವೇ. ನಿಮ್ಮ ತಂದೆ ಹೆಸರು ?

ಚಂದ್ರು—ಕೃಷ್ಣಪ್ಪನವರು ಅಂತ. ನಮ್ಮ ಕಡೆ ಅವರನ್ನ ಸುಮ್ಮನೆ ಕೀರನಹಳ್ಳಿ ಸಾಹುಕಾರರು ಅಂತ ಅಷ್ಟೇ ಅನ್ನುತ್ತಾರೆ.

ಸೀತ—ಆ ಕೀರನಹಳ್ಳಿ ? ಆ ಕೃಷ್ಣಪ್ಪನವರ ಮಕ್ಕಳೇ ನೀವು ? ಓಹೋ, ನಾವು ಅವರನ್ನ ಕಂಡಿಲ್ಲ ಅನ್ನುವುದಷ್ಟೇ ವಿನಾ, ಅವರ ವಿಚಾರ ಚೆನ್ನಾಗಿ ಕೇಳಿ ಬಲ್ಲೆವು. ನೀವು....ಹಾಗಾದರೆ....ಈ ಊರಿನಲ್ಲೇ ಓದುತ್ತಾ ಇರಬೇಕಲ್ಲಾ ?

ಚಂದ್ರು—[ಏನು ಹೇಳಬೇಕೋ ತೋರದು. ಶಾಂತೂ, ತಾಯಿಯ ಬೆನ್ನ ಹಿಂದಿನಿಂದ 'ಹುಂ' ಎನ್ನಿ, ಎಂದು ಸಂಜ್ಞೆ ಮಾಡಲು] ಹುಂ. ಹುಂ. ನಾನು ಓದುತ್ತಾ ಇದ್ದೇನೆ.

ಸೀತ–ಅದೇ ಮತ್ತೆ.

ಶಾಂತ–ನಮ್ಮ ಕಾಲೇಜೇ, ಅಮ್ಮ.

ಸೀತ–ಅಂ ? ನೀವೂ....ಮೆಡಿಕಲ್ಲೇ–?

ಚಂದ್ರು—[ಶಾಂತೂ ಸಂಜ್ಞೆಯನುಸಾರ] ಹುಂ – ಹುಂ.

ಸೀತ–ಓ. ಹಾಗಾದರೆ ನೀನು ನೋಡಿದ್ದೀಯೇನೇ ಇವರನ್ನ ?

ಶಾಂತ–ನೋಡದೆ ಏನಮ್ಮಾ ? ದಿನಾ ನೋಡುತ್ತೀನಿ. ಅಲ್ಲದೆ "ಆ ಪುಸ್ತಕ ಕೊಡಿ, ಈ ನೋಟ್ಸು ಕೊಡಿ"– ಅಂತ ಬೇಕಾದಷ್ಟು ಗೋಳಿಟ್ಟು ಕೊಂಡಿದ್ದೀನಿ.

ಸೀತ — ಏನು ?

ಶಾಂತ— ಅವರು ತುಂಬ ಇಂಟೆಲಿಜೆಂಟು, ಅಮ್ಮ. ನಾವಿಬ್ಬರೂ ಒಂದೇ ಕ್ಲಾಸು, ಅಮ್ಮಾ.

ಸೀತ—ನೀನು ಕತ್ತೆ ಕಾಣೇ. ಅಲ್ಲವೇ, ಈಗ ಗಿಣಿಯ ಹಾಗೆ ಬಾಯಿ ಬಿಡುತ್ತಿದ್ದೀಯಲ್ಲೇ ! ಕೊಟ್ಟಿಗೆಯಲ್ಲಿ ಕಾಮಧೇನು ಕಟ್ಟಿಕೊಂಡು, ಯಾರೋ ಡೈರಿ ಹಾಲಿಗೆ ಓಡಾಡಿದರಂತೆ, ಹಾಗೆ....ರಾಮಭಾಗವತರು, ಕೃಷ್ಣ ಭಾಗವತರು ಅಂತ – ನೀನಾದರೂ ಹೇಳಬಾರದಾಗಿತ್ತೇನೇ? ನಿನ್ನ ಕ್ಲಾಸು ಪಾಠಕ್ಕೂ ಅನುಕೂಲವಾಗುತ್ತಿತ್ತು. ಹಾಗಾದರೆ, ನಾಳೆಯಿಂದ ಕಾರು ಕಳುಹಿಸುತ್ತೇನೆ, ಬಂದುಬಿಡಿ.

ಸೀನಿ—[ಪ್ರವೇಶಿಸಿ] ಅಮ್ಮಾ, ಪಾರ್ವತಮ್ಮನವರು ಬಂದಿದ್ದಾರೆ.

ಸೀತ—ಬಂದೆ ಅನ್ನೋ. ನಾನು ಬರುತ್ತೇನೆ.

ಚಂದ್ರು—ಅಂ...ನಾಳೆ...ಪಾಠಕ್ಕೆ...ಎಷ್ಟು ಹೊತ್ತಿಗೆ ಬರಬೇಕು ?

ಸೀತ—ಏನೇ ?

ಶಾಂತ—ಚೆನ್ನಾಗಿದೆ. ಮೇಷ್ಟರಿಗೆ ಇಷ್ಟು ಹೊತ್ತಿಗೆ ಬನ್ನಿ ಅಂತ ಸ್ಟೂಡೆಂಟು ಹೇಳೊಕ್ಕಾಗತ್ತೇನಮ್ಮಾ ?

ಸೀತ—ನಿನ್ನ ತಲೆ...ಒಳ್ಳೆ ಮೇಷ್ಟರು, ಒಳ್ಳೆ ಸ್ಟೂಡೆಂಟು....ಇರಲಿ, ನಿಮಗೆ ಎಷ್ಟು ಹೊತ್ತಿಗೆ – ?

ಚಂದ್ರು—ನಾಳೆಯಿಂದ ಮದುವೆ ಗಲಾಟೆ –

ಸೀತ—ಹೌದು, ಹೌದು....ಆದರೂ ದ್ವಿತೀಯ ವಿಘ್ನ ಆಗಬಾರದು – ಒಂದು ಹತ್ತು ನಿಮಿಷ ಯಾವಾಗಲಾದರೂ –

ಚಂದ್ರು—ಆಗಬಹುದು. ಇವತ್ತು ಅವರು ಯಾವ ಫ್ರೆಂಡ್ ಮನೆಗೋ ಹೋಗಿದ್ದರು. ನನ್ನಿಂದ ಡಿಸ್ಟರ್ಬ್ ಆಯಿತು. ಆದ್ದರಿಂದ ನಾಳೆ ಅವರ ಎಂಗೇಜ್ಮೆಂಟು ನೋಡಿಕೊಂಡು –

ಸೀತ—ಏನೇ ?

ಶಾಂತ—ಊಹೂ...ಭಾವ ಅವರ ಫ್ರೆಂಡು...ಅವರ ಎಂಗೇಜ್ಮೆಂಟ್ಸೇ ನಿರುತ್ತವೋ –

ಚಂದ್ರು—ಅಟ್ ದಿಸ್ ರೇಟ್ –

ಸೀತ—ಹೋಗ್ರೇ, ಹುಡುಗಾಟ ನಿಮ್ಮದು....ನನಗೆ ಹೊತ್ತಾಯಿತು, ಅವರು ಕಾದಿದ್ದಾರೆ. ನಿಮ್ಮ ನಿಮ್ಮ ಎಂಗೇಜ್ಮೆಂಟ್ ನೀವು ನೀವೇ ಮಾಡಿ ಕೊಳ್ಳಿ. ನಾನು ಬರುತ್ತೇನೆ.

ಚಂದ್ರು—ನಮಸ್ಕಾರ.

[ಸೀತಮ್ಮ ನಿಷ್ಕ್ರಮಿಸುವರು. ಶಾಂತೂ ಇದನ್ನೇ ನೋಡುತ್ತಿದ್ದು, ಬಾಗಿಲ ವರೆಗೆ ಹೋಗಿ, ಹಿಂತಿರುಗಿ ಚಂದ್ರೂ ಮುಖಕ್ಕೆ]

ಶಾಂತ—"ನಿಮ್ಮ ನಿಮ್ಮ ಎಂಗೇಜ್ಮೆಂಟ್ ನೀವು ನೀವೇ ಮಾಡಿಕೊಳ್ಳಿ!" ಕೇಳಿದವರು ಏನು ಅಂದುಕೊಂಡಾರು ?

ಚಂದ್ರು—ಏನು ಅಂದುಕೊಂಡಾರು ? ತಾಯಿಯ ಆಶೀರ್ವಾದ ಅಂದುಕೊಂಡರೆ –

ಶಾಂತ—ತಪ್ಪಾಗಲಾರದು (ನಾಟಕೀಯವಾಗಿ ಕೈ ತಟ್ಟಿ ಜೋಡಿಸಿ) ನಮಸ್ಕಾರ!

—ತೆರೆ—

ದೃಶ್ಯ ೮

[ರಾವ್ ಸಾಹೇಬರೂ, ಜೋಯಿಸರೂ, ಭೀಮೂನೂ—ಒಂದು ರಸ್ತೆಯಲ್ಲಿ]

ಭೀಮು—ಆಕಾಶ ಕಳಚಿ ತಲೆ ಮೇಲೆ ಬಿದ್ದ ಹಾಗೆ ಆಡುತ್ತೀರಲ್ಲಾ, ಜೋಯೀಸರೇ? ಆ ಮೈಸೂರಿನ ವರ "ಈಗಲೂ ಬರಲಿಲ್ಲ" ಅಂದರೆ, ನನ್ನ ಸಿಸ್ಟರ್ ಇನ್ ಲಾ ಗೆ ಮದುವೆಯೇ ಆಗೊಲ್ಲ ಅಂತ –

ಪುಟ್ಟ—ಹಾಗಲ್ಲವೋ - ಅವನೂ ಬಂದು –

ರಾಮು -- ಈ ಫಾರ್ಮ್ಯಾಲಿಟಿಯೂ ಮುಗಿದು ಹೋಗಿದ್ದರೆ –

ಪುಟ್ಟ—ನಾಡಿದ್ದು ಎರಡು ಮದುವೆಯೂ ಒಟ್ಟಿಗೇ ಹೊಡೆಸಿ ಬಿಡ ಬಹುದಿತ್ತು ಅಂತ –

ಭೀಮು—ಸರಿ. ಈಗಲೂ ಹೊಡೆಸಿದರಾಯಿತು. ಅದೇನು ಮಹಾ ದೊಡ್ಡ –

ಪುಟ್ಟ—ಏನು ? ಆ ಹುಡುಗ ಬರುವುದೇ ಬೇಡ, ನೋಡುವುದೇ ಬೇಡ, ಹಾಗೇ ಲಗ್ನಪತ್ರಿಕೆ ಪ್ರಿಂಟು ಮಾಡಿಸಿ –

ಭೀಮು—ರಾವ್ ಸಾಹೇಬರೇ, ನೀವು ಆ ಹುಡುಗನ ತಂದೆಗೆ ಅಡ್ವಾನ್ಸು ಏನಾದರೂ ಕೊಟ್ಟಿದ್ದೀರೇನು ?

ರಾಮು—ಅಡ್ವಾನ್ಸು – ?

ಪುಟ್ಟ—ಏನು ? ಯಾವ ಅಡ್ವಾನ್ಸೋ ?

ಭೀಮು—ವರದಕ್ಷಿಣೆ ಗಿರದಕ್ಷಿಣೆ ಅಂತ-!

ರಾಮು—ನೋ, ನೋ, ನೋ – ಅದೆಲ್ಲಾ ಏನಿಲ್ಲ -

ಪುಟ್ಟ—ಎರಡು ಖರ್ಜೂರ ಕೊಟ್ಟು ಕಣ್ಣು ಮುಚ್ಚಿಕೊಂಡು ಶಾಂತೂನ ಸೊಸೆ ಅಂತ ಒಪ್ಪಿಸಿಕೊಳ್ಳುವವರು ಸಾವಿರ ಜನ ಇದಾರೋ – ಇದೇ ಊರಿನಲ್ಲಿ! – ಅಡ್ವಾನ್ಸಂತೆ – !

ಭೀಮು—ಮತ್ತೆ · ಯಾಕೆ – ?

ರಾಮು—ಆ ಇವರು .... ವೆಂಕಟರಾಯರು, ಭಗವಂತರಾಯರು – ಅವರೇ ಹೇಳಿದ್ದರು ಅಂದಿರಲ್ಲಾ – ವಿಚಾರಿಸಿದರೆ ?

ಪುಟ್ಟ—ಅಂದಿದ್ದರು. ಆದರೆ ನನಗೆ ಯಾಕೋ ಸರಿ ಅನ್ನಿಸೊಲ್ಲ – ಸರೋಜನ್ನ ಬೇಡ ಅಂದವರ ಕೂಡ ಸಂಬಂಧ – ಊಹೂ –

ಭೀಮು—ತಪ್ಪು. ತಪ್ಪು....ಈಗ ಅದೆಲ್ಲಾ ಯಾಕೆ? ನಿಮಗೆ ಬೇಕಾದ್ದು ಒಬ್ಬ ಯೋಗ್ಯ ವರ. ನಿಮಗೆ ಎಂಥ ವರ ಆದರೆ ಆಗಬಹುದು ಹೇಳಿ, ಸಾರ್?

ರಾಮು—ಎಂಥ ಅಂದರೆ –

ಭೀಮು—ಡಾಕ್ಟರೋ, ಇಂಜನಿಯರ್ರೋ, ಸರ್ಕಾರಿ ಸಾಹೇಬರೋ– ಒಬ್ಬೊಬ್ಬರ ಇಷ್ಟ ಒಂದೊಂದಿರತ್ತೆ –

ರಾಮು—ಹಾಗೆ...ಅಂಥ ಸ್ಪೆಸಿಫಿಕೇಷನ್ನೇನಿಲ್ಲ. ಶಾಂತು ಮೆಡಿಕಲ್ಲು ಓದುತ್ತಾ ಇರುವುದರಿಂದ –

ಪುಟ್ಟ—ಗಂಡನೂ ಡಾಕ್ಟರ್ರೇ ಆದರೆ – ಇಬ್ಬರೂ ಬೋರ್ಡು ಹಾಕಿಕೊಂಡು –

ಭೀಮು—ಹೌದು. ಹೌದು. ಪೇಷಂಟ್ಸಿನ ಡಬ್ಬಲ್ ಡಕಾಯಿತಿ... ಒಳ್ಳೆ ಐಡಿಯಾ...ಇರಲಿ. ನನಗೆ ಬಿಡಿ. ನಾಳೆ ಬೆಳಗ್ಗೆಯ ಒಳಗೆ – ನಾನು ಹುಡುಕಿಕೊಂಡು ಬರುತ್ತೇನೆ. ನಿಮಗೆ ... ಹುಡುಗ ... ಸುಮಾರು ನಮ್ಮ ಚಂದ್ರಶೇಖರನ ತರಹ ಇದ್ದರೆ – ?

ರಾಮು—ಯಾರು ?

ಪುಟ್ಟ—ನಿನ್ನ ಸ್ನೇಹಿತ ? ಸಂಗೀತದ ಮೇಷ್ಟರು ?

ಭೀಮು—ಹುಂ,

ರಾಮು—ಓ ಎಸ್...ಅವರಪ್ಪಿದ್ದರೆ...

ಪುಟ್ಟ—ಓಹೋ. ಆಗಬಹುದು, ಆಗಬಹುದು....

ಭೀಮು—ತಡೆಯಿರಿ....ತಡೆಯಿರಿ....

ರಾಮು—ಯಾಕೆ [

ಪುಟ್ಟ—ಏನು ?

ಭೀಮು—ಜೋಯಿಸರೇ, ನಾನು ಯಾಕೆ ಹೀಗಾಗಿ ಹೋದೆ ? ಚಂದ್ರಶೇಖರನ ತರಹಾ ಅನ್ನುತ್ತಾ ಇದ್ದೇನೆ, ದಡ್ಡ. ಅವನಿಗೇ ಯಾಕೆ ಕೊಡಬಾರದು ? ಅವನೂ ಮೆಡಿಕಲ್ಲೇ ಓದುತ್ತಾ ಇದ್ದಾನೆ, ಸಾರ್.... ಪ್ರಾಯಃಶಃ ನನ್ನ ನಾದಿನಿ ಕ್ಲಾಸ್‌ಮೇಟೇ ಇರಬಹುದೋ ಏನೋ !

ರಾಮು—ಹೌದಾ ?

ಪುಟ್ಟ—ಹೌದೇನೋ ?

ಭೀಮು—ಇರಬಹುದು. ನೀವು ಹೇಳಿದ ಹಾಗೇ ಇಬ್ಬರೂ ಒಂದೇ ಬೋರ್ಡು ಹಾಕಿಕೊಳ್ಳಬಹುದು. ನನ್ನ ಸ್ನೇಹಿತ. ನಮ್ಮ ಜನ. ಒಳ್ಳೆ ಮನೆತನ. ನಾನು ಚೆನ್ನಾಗಿ ಬಲ್ಲೆ –

ರಾಮು—ಜೋಯಿಸರೇ, ಏನು ನಮ್ಮ ದೆಸೆ –

ಪುಟ್ಟ—ಹೌದೋ – ಭೀಮು...ಈಗ....ಅವನ ತಂದೆ-ತಾಯಿ–

ಭೀಮು—ತಾಯಿ ಇಲ್ಲ.

ರಾಮು—ಜೋಯಿಸರೇ, ಶಾಂತೂದು ಆಶ್ಲೇಷ ನಕ್ಷತ್ರ !

ಪುಟ್ಟ—ನನಗೆ ಗೊತ್ತಿಲ್ಲವೇ ?

ಭೀಮು—ತಂದೆ ಕೃಷ್ಣಪ್ಪನವರು ಅಂತ. ನಮ್ಮ ಕಡೆ ಹೆಸರು ಕೂಗುವುದೇ ಇಲ್ಲ. ಕೀರನಹಳ್ಳಿ ಸಾಹುಕಾರರು ಅಂತ.

ಪುಟ್ಟ—ತಡಿ....ತಡಿ....ಯಾವ ಕೀರನಹಳ್ಳಿ-?

ರಾಮು—ನಮ್ಮ ಶ್ರೀಕಂಠಯ್ಯನವರು ಹೇಳುತ್ತಿದ್ದರಲ್ಲಾ –

ಪುಟ್ಟ—ಶಿರಾಳಕೊಪ್ಪದ ಶ್ರೀಕಂಠಯ್ಯನವರು—?

ರಾಮು—ಹೂಂ –

ಪುಟ್ಟ—ತಡಿ...ನಾನು ಆ ಹುಡುಗನ ಜಾತಕ....ಯಾವುದೋ ಸಂದರ್ಭದಲ್ಲಿ ನೋಡಿದ್ದೆ - ದಿವ್ಯವಾದ ಜಾತಕ,

ರಾಮು—ಭಲೆ....ಭಲೆ....ಎಲ್ಲಾ ಸರಿ...ಆದರೆ...ಈಗ ಎರಡು ದಿನಗಳೂ ಇಲ್ಲ – ನಾವು ಅವರಿಗೆ ಬರೆದು –

ಭೀಮು—ಹಾಂ...ಹಾಂ...ಆ ಕೆಲಸ...ಆ ಜವಾಬ್ದಾರಿ ನನಗೆ ಬಿಡೀ ...ನೀವು ಅವರಿಗೆ ಬರಿಗಿರಿಯೋಕೆ ಹೋಗಬೇಡಿ....ಒಂದು ವಿಷಯ ನಿಮಗೆ ಹೇಳಿಯೂ ಬಿಡುತ್ತೇನೆ, ಅವರು ಹಳ್ಳಿಯವರು, ಹಯ ವರಟರು. ಅಸಾಧ್ಯ ಮುಂಗೋಪಿ. ನಯ, ನಾಜೂಕು, ನಾಗರಿಕತೆ – ನೀವು ಕಾಗದ ಬರೆದಿರಿ, ತೂಗೊಂಡು ಹೋಗಿ ಕೊಡುವ ಆ ಪೋಸ್ಟ್‌ಮನ್ನನ್ನೇ ಒಡಿದು ಭೂಗತ ಮಾಡಿದರೂ –

ಪುಟ್ಟ—ಅಯ್ಯಯ್ಯೋ –

ರಾಮು—ಮತ್ತೆ – ಹೇಗೆ - ?

ಭೀಮು—ನನಗೆ ಬಿಡಿ...ಹಳ್ಳಿಗರಡಿ ಹಳ್ಳಿಯವರಿಗೇ ಸರಿ. ನಾನೇನೋ ಉಪಾಯವಾಗಿ ಅವರಿಗೆ ತಂತಿ ಕೊಟ್ಟು, ನಾಳೆಯೇ ಬರುವ ಹಾಗೆ ಏರ್ಪಾಟು ಮಾಡುತ್ತೇನೆ. ನೀವು ಮನೆಗೆ ಹೋಗಿ ಅತ್ತೆಯವರನ್ನ, ಶಾಂತಾದೇವಿ ಅವರನ್ನ ಒಪ್ಪಿಸಿ –

ಪುಟ್ಟ—ಮತ್ತೆ ಲಗ್ನಪತ್ರಿಕೆ – ?

ಭೀಮು—ಧೈರ್ಯವಾಗಿ ಅಚ್ಚು ಮಾಡಿಸಿ. ಕೀರನಹಳ್ಳಿ ಸಾಹುಕಾರ್ ಶ್ರೀಯುತ ಕೃಷ್ಣಪ್ಪನವರ ಪುತ್ರ ಚಿ॥ ಚಂದ್ರಶೇಖರ ಎಂಬ ವರರತ್ನನಿಗೆ – ಅಂತ ಹಾಕಿಸಿಬಿಡಿ –

ರಾಮು—ಜೋಯಿಸರೇ – ?

ಭೀಮು—ನೀವು ಏನು ಯೋಚನೆಯೂ ಮಾಡಬೇಡಿ –

ಪುಟ್ಟ—ತಾವು ದಯಮಾಡಿ. ಇವನು ಸಾಮಾನ್ಯದವನಲ್ಲ, ಹೇಳಿದ್ದನ್ನ ಸಾಧಿಸಿಯೇ ಬಿಡುತ್ತಾನೆ. ನಡೆಯಿರಿ, ಮನೆಗೆ ಹೋಗಿ-

ರಾಮು—ಸರಿ....ನೀವು ಹೇಳಿದ ಹಾಗೇ...

ಭೀಮು—ನಾನಿನ್ನೂ ಚಂದ್ರೂನ ಒಪ್ಪಿಸಬೇಕು-

ರಾಮು—ಹೌದು. ಅವರನ್ನಾದರೂ ನಾವು ರಿಕ್ವೆಸ್ಟ್ ಮಾಡಿಕೊಳ್ಳದೆ-

ಭೀಮು—ನ್ಯಾಯವಾಗಿ ಮಾಡಬೇಕು. ಬಟ್ ನಾನಿರುವಾಗ ನಿಮಗೆ ಆ ತೊಂದರೆ ಅನಗತ್ಯ. ಕೈಲಾಸಂ ಹೇಳುತ್ತಿದ್ದ ಹಾಗೆ ನಾನು ಅವನ ಕಾಲಿಗೆ ಬಿದ್ದೋ. ಕಾಲಿನಿಂದ ಒದ್ದೋ ಒಪ್ಪಿಸುತ್ತೇನೆ. ತಾವು ಹೊರಡಿ. ಟೈಂ ಈಸ್ ಪ್ರೆಷಸ್ -

ರಾಮು—ಎಸ್. ಎಸ್.... ಹಾಗಾದರೆ.... ನಾವು.... ಕೃಷ್ಣಪ್ಪನವರಿಗೆ ಕಾಗದ ಬರೆಯೊಲ್ಲ,

ಭೀಮು—ಬರೆಯಕೂಡದು. ಅದು ಪಾಯಿಂಟು.

ರಾಮು—ಸರಿ...ದಿ ಫೀಲ್ಡ್ ಈಸ್ ಯುವರ್ಸ್- ನಡೆಯಿರಿ, ಜೋಯಿಸರೇ—ಯಾಕೋ, ಇದು ನಮ್ಮ ಭಾಸನ ನಾಟಕವ ತರಹಾ -

ಪುಟ್ಟ—ಜಟ್ ಪಟ್ ಅಂತ ಓಡುತ್ತಾ ಇದೆ....

(ಇಬ್ಬರೂ ನಿಷ್ಕ್ರಮಿಸುವರು. ಹಿಂದಿನಿಂದ ಚಂದ್ರು ನುಗ್ಗಿ ಬಂದು)

ಚಂದ್ರು—ಭೀಮು, ಏನು ಫೂಲೋ ನೀನು !

ಭೀಮು—ಅಂ ? ಯಾಕೆ ?

ಚಂದ್ರು—ಅಲ್ಲವೋ, ನೀನು ಅವರಿಗೆ ಏನು ಹೇಳಿದಿ ಅಂತ-

ಭೀಮು—ಯಾಕೆ ? ನಿನಗಿಷ್ಟವಿಲ್ಲವೇನೋ ? ಹಾಗಂತ ಹೇಳಿಬಿಡು. ಈಗಲೂ ಕ್ಯಾನ್ಸಲ್ ಮಾಡಿಸಿದರಾಯಿತು.

ಚಂದ್ರು—ಅದಲ್ಲವೊ,

ಭೀಮು—(ನಗುತ್ತಾ) ಅದಲ್ಲ ಅಲ್ಲ ? ಇನ್ನು ಯಾವುದಪ್ಪಾ ?

ಚಂದ್ರು—ಅಲ್ಲವೋ, ನಮ್ಮಪ್ಪನಿಗೆ ತಂತಿಕೊಟ್ಟು ಕರೆಸುತ್ತೇನೆ ಅಂತ-

ಭೀಮು—ಹಾಗಂತ ಹೇಳಿದೆನಾ ?

ಚಂದ್ರು—ಈಗ ನೀನು ನಿನ್ನ ಹೆಂಡತಿ ಹತ್ತಿರ ನಾಟಕ ಆಡುತ್ತಾ ಇಲ್ಲ, ನನ್ನ ಹತ್ತಿರ ಮಾತಾಡುತ್ತಾ ಇದ್ದಿ,

ಭೀಮು—ಹೌದಾ ? ಥ್ಯಾಂಕ್ ಯೂ ಫಾರ್ ಎನ್‌ಲೈಟನಿಂಗ್ ಮೀ.

ಚಂದ್ರು—ಭೀಮು. ಅವರು ಬಂದರೆ–

ಭೀಮು—ಅವರು ಇವರಿಗೆ ಬರುತ್ತಾರೆ, ನಮಗೆ ಬರೊಲ್ಲ–

ಚಂದ್ರು—ನಿನ್ನ ಸಾಹಿತ್ಯ–

ಭೀಮು—ಇದು ನಾಟಕ, ನಾಟಕದಲ್ಲಿ ಎಲ್ಲಾ ಬಿಚ್ಚಿ ಹೇಳಿಬಿಟ್ಟರೆ ಸ್ವಾರಸ್ಯ ಉಳಿಯುತ್ತೇನೋ? "ನಾರಾಯಣ. ಕಾಪಾಡು" ಅನ್ನು. ಕಾಪಾಡುತ್ತಾನೆ.

ಚಂದ್ರು—ನಾರಾಯಣ ?

ಭೀಮು—ನಮ್ಮ ನಾಣೀನೋ. ನಾಟಕದ ನಾಣಿ.

ಚಂದ್ರು—ಅವನು ?

ಭೀಮು—ಅವನೇ. ಅನಾಥ ರಕ್ಷಕ. ಆಪದ್ಬಾಂಧವ–ನಾಡಿದ್ದು ಒಂತು - ಕೇಳಿಸುತ್ತಿಲ್ಲವೇನೋ ನಾಗಸ್ವರ ?

(ಕತ್ತಲು)

ದೃಶ್ಯ ៩

[ಬೆಳಿಗ್ಗೆ ಸುಮಾರು ಎಂಟು ಗಂಟೆ. ಒಂದು ಬೀದಿ. ಕೀರನಹಳ್ಳಿ ಕೃಷ್ಣಪ್ಪನವರೂ ತಿಪ್ಪಾಭಟ್ಟರೂ ಸಂಧಿಸುವರು.]

ತಿಪ್ಪಾ—ನಮಸ್ಕಾರ.

ಕೃ—ನಮಸ್ಕಾರ, ನಮಸ್ಕಾರ, ನಮಸ್ಕಾರ, ಮೂರೇ ಸಾಕೋ, ಇನ್ನೂ ಬೇಕೋ ? ದಾರಿ ಬಿಡ್ರೀ. (ಹಾದು ಹೋಗುತ್ತಾ) ನಮಸ್ಕಾರವಂತೆ ನಮಸ್ಕಾರ–

ತಿಪ್ಪಾ—ಕೃಷ್ಣಪ್ಪನವರೇ-

ಕೃ— [ನಿಂತು]ಆಂ? ಇದೇನು ನನ್ನ ಹೆಸರು ಹಿಡಿದು ಕೂಗುವವರು ಯಾರು, ಈ ಸುಟ್ಟ ಊರಿನಲ್ಲಿ? (ತಿರುಗಿ ನೋಡಿ) ಯಾರ್‍ರೀ ನೀವು?

ತಿಪ್ಪಾ—ಯಾರು ನಾನು? ಚೆನ್ನಾಯಿತು. ನಾನು ತಿಪ್ಪಾಭಟ್ಟನಲ್ಲವೇ?

ಕೃ—ಯಾವ ತಿಪ್ಪೆಯೋ, ಯಾವ ಭಟ್ಟನೋ, ನನಗೇನು ಗೊತ್ತು? ಯಾರು ಕಂಡರು ನಿಮ್ಮ ಮುಸುಡಿಯನ್ನ?

ತಿಪ್ಪಾ—ಕೃ – ಕೃಷ್ಣಪ್ಪನವರೇ–?

ಕೃ—ಹೌದು, ನನ್ನ ಹೆಸರು ನಿಮಗೆ ಹೇಗೆ ಗೊತ್ತಾಯಿತು? ಹುಟ್ಟಿದಾಗಿನಿಂದ ಗುರುತು ಇರುವವರ ಹಾಗೆ –

ತಿಪ್ಪಾ—ನನಗೆ ಗುರುತಿಲ್ಲವೇ?....ಅಲ್ಲ....ತಮಗೆ... ಮೈಯಲ್ಲಿ ಹುಷಾರಿದೆ ತಾನೇ?

ಕೃ—ಏನು? ನನಗೇನ್ರೀ ಆಗಿದೆ? ನನ್ನ ಮೈ ಹುಷಾರಿಲ್ಲವೇ? ಹುಷಾರ್, ನಿಮ್ಮ ಈ ಹಾಳು ಊರಿನಲ್ಲಿ ಎಲ್ಲರ ಮೈಯೂ ಹುಷಾರಿಲ್ಲದ ಹಾಗೆ ಮಾಡಿಯೇನು !

ತಿಪ್ಪಾ—ಓಹೋ....ಹೋಗಲಿ ಬಿಡಿ...ಈಗ ಇದೇನು ಊರಿಗೆ ಹೊರಟ ಹಾಗಿದೆಯಲ್ಲಾ ನೀವು –

ಕೃ—ಹೊರಟ ಹಾಗೆ ? ಹುಚ್ಚೇನ್ರೀ ನಿಮಗೆ? ನಾನಿನ್ನೂ ಈಗ ಹಳ್ಳಿಯಿಂದ ಬರುತ್ತಾ ಇದ್ದೀನೀ –

ತಿಪ್ಪಾ—ಯಾವ ಹಳ್ಳಿಯಿಂದ

ಕೃ—ಯಾವುದೋ ಹಳ್ಳಿಯಿಂದ ನಾನು ಬರುತ್ತೀನೇನ್ರಿ? ನಮ್ಮ ಹಳ್ಳಿಯಿಂದ – ಕೀಠನಹಳ್ಳಿಯಿಂದ –

ತಿಪ್ಪಾ—ಈಗ ಬರುತ್ತಾ ಇದ್ದೀರಿ – ?

ಕೃ—ಹೌದು

ತಿಪ್ಪಾ—ಓ...ನನಗೆ...ಹೋಗಲಿ, ನಿಮಗೆ ನಿಜವಾಗಲೂ ನನ್ನ ಗುರುತು – ?

ಕೃ—ಅಶ್ಯೇ! ನೀವು ಯಾರೋ, ನಿಮ್ಮ ಅಪ್ಪ ಯಾರೋ, ನಿಮ್ಮ ತಾತ ಯಾರೋ -

ತಿಪ್ಪಾ—ದೇವರೇ ಗತಿ. ತಡೆಯಿರಿ. ನಿಮ್ಮ ಮಗ ಚಂದ್ರಶೇಖರ ಹೌದೋ ಅಲ್ಲವೋ?

ಕೃ—ಓ, ಆ ಅಯೋಗ್ಯನೂ ಗೊತ್ತೋ ನಿಮಗೆ? ಹೌದು, ಅವನು ನನ್ನ ಮಗನೇ. ನಾನು ಅವನ ಅಪ್ಪನೇ. ಆ ಮುಠ್ಠಾಳ ಮಗನ್ನ ಹುಡುಕಿ ಕೊಂಡೇ ಅಪ್ಪ ಬಂದಿರುವುದು. ಇಲ್ಲೆಲ್ಲೋ ಸೆಂಟ್ರಲ್ಲು ಹೋಟಲ್ಲು ಅಂತ ಇದೆಯಂತಲ್ಲಾ –

ತಿಪ್ಪಾ—ಇದೆ. ಆದರೆ ಈಗ ಯಾಕೆ ನಿಮಗೆ ಆ ಹೋಟಲ್ಲು?

ಕೃ—ಯಾಕೆ ಅಂದರೆ? ನನ್ನ ಮಗ ಆ ಹೋಟಲಲ್ಲಿದ್ದಾನೆ. ಅದಕ್ಕೆ. ಅವನ ಒದ್ದು ಕಿವಿ ಹಿಡಿದು ಎಳದುಕೊಂಡು ಹೋಗೋಕ್ಕೆ. ನೋಡಿ, ನೀವು ಯಾರಾದರೂ ಇರಿ. ಹಾಳಾಗಿ. ಇದು ಸರಿಯೋ ಹೇಳಿ. ಈ ಕತ್ತೆ ಭಡವನಿಗೆ ಮದುವೆ ಗೊತ್ತು ಮಾಡಿ, ಮೊನ್ನೆ ಲಗ್ನ ಇಡಿಸಿ, ಕಾಗದ-ಬರೆದೆ, ತಂತಿ ಕೊಟ್ಟೆ. ಈ ಹಾಳು ಮಗ ಬರದೆ, ಏನೂ ಬರೆಯದೆ, ಇಲ್ಲೆ ಕೂತು ಅಲ್ಲಿ ಮದುವೆಯನ್ನ ಮುಂಡ ಮೋಚಿಸಿಡನಲ್ಲಾ, ಏನು ಹೂತಿಟ್ಟಿದ್ದೀತಿಲ್ಲಿ? (ದೊಣ್ಣೆಯಿಂದ ನೆಲ ಕುಟ್ಟುವರು)

ತಿಪ್ಪಾ—ಇಲ್ಲಿ –

ಕೃ—ಅಲ್ಲೇನು ನೋಡುತ್ತೀರ್‍ರೀ, ನೆಲದಲ್ಲಿ? ತಲೆ ಎತ್ತಿ ನನ್ನ ಮುಖ ನೋಡಿ, ನೆಂಟರಿಷ್ಟರು ಸೇರಿ, ಎಲ್ಲರೆದುರಿಗೆ ಅವಮಾನ! ಮೂರು ಸಾವಿರ ವರದಕ್ಷಿಣೆ, ಮೂರು ವಾರಗಳ ಮುಂಚೆ!

ತಿಪ್ಪಾ—ಸರಿ. ಹಾಗಾದರೆ ಎರಡರಲ್ಲಿ ಒಂದು ಖಾತ್ರಿ.

ಕೃ—ಆಂ?

ತಿಪ್ಪಾ—ನನಗೆ ಹುಚ್ಚು, ಇಲ್ಲಾ -

ಕೃ— ನನಗೆ – ?

ತಿಪ್ಪಾ—(ಬಿಡಿ ಬಿಡಿಸಿ ಸ್ಪಷ್ಟವಾಗಿ ತುರುಕುತ್ತಾ) ಇಲ್ಲ ಅಂತ ಹೇಗೆ ಹೇಳಲಿ? ಈಗ ನೀವು ಹೇಳಿದ ಅದೇ ಮೊನ್ನೆ, ನಿಮ್ಮ ಮಗ ಚಂದ್ರಶೇಖರ ನಿಗೆ, ನಮ್ಮ ಈ ಊರಿನ ರಾವ್‌ಸಾಹೇಬ್ ರಾಮರಾಯರ ಮಗಳನ್ನ ಕೊಟ್ಟು ಮದುವೆ ಆಗಲಿಲ್ಲವೇ?

ಕೃ—ಏನು ಏನೂ?

ತಿಪ್ಪಾ—ಹೂಂ. ಮದುವೆ ಆಗಲಿಲ್ಲವೇ? ನಿಮ್ಮ ಪರ ನಾನೇ ಪುರೋಹಿತಿಕೆ ವಹಿಸಲಿಲ್ಲವೇ?

ಕೃ—ರೀ –

ತಿಪ್ಪಾ—ಮೂರು ಸಾವಿರ ಅಂದಿರಿ ವರದಕ್ಷಿಣೆ. ಹತ್ತು ಒಪ್ಪಿಸಿ ಕೊಂಡಿರಲ್ರೀ ನೀವೇ, ಇಲ್ಲಿ

ಕೃ—ಏನು? ನಾನು? ಹತ್ತು ಸಾವಿರ?

ತಿಪ್ಪಾ—ಹೂಂ. ಆಮೇಲೆ, ನನಗೆ ನೀವು ಇಗೋ ಇದೇ ಈ ಶಾಲು- ಇದನ್ನ ನೀವೇ ನನ್ನ ಬೆನ್ನಿಗೆ ಹೊದ್ದಿಸಲಿಲ್ಲವೇ? ಮೈ ತುಂಬ ಧೋತ್ರ, ಕೈ ತುಂಬ ದಕ್ಷಿಣೆ – ನೀವೇ ಕೊಟ್ಟು –

ಕೃ—ಏನು ಏನು ಏನು - ಏನು ಮಾತಾಡುತ್ತಿದ್ದೀರೀ? ಏನು ಕತೆ ಹೇಳುತ್ತಿದ್ದೀರ್ರೀ? ನಾನು...ನಿಮಗೆ...ಶಾಲು - ಧೋತ್ರ - ದಕ್ಷಿಣೆ – ?

ತಿಪ್ಪಾ—ನೀವೇ. ಖುದ್ದು. ನನ್ನ ಒಂದು ಕ್ಷಣ ಬಿಡದೆ, ಒಡಹುಟ್ಟಿ ದವರಿಗಿಂತ ಹೆಚ್ಚಾಗಿ, ಪ್ರತಿಯೊಂದಕ್ಕೂ "ತಿಪ್ಪೂ, ತಿಪ್ಪೂ, ತಿಪ್ಪೂ, ತಿಪ್ಪೂ" ಅಂತ –

ಕೃ—ರೀ ರೀ ರೀ –

ತಿಪ್ಪಾ—ಆಮೇಲೆ ನಿಮ್ಮ ಮುದ್ದು ಸೊಸೆಗೆ ವಂಕಿ, ನಾಗಮುರಿ. ಬಳೆ, ಚಳುತುಂಬು, ಡಾಬು – ಈ ಹಳೆ ಆಭರಣಗಳನ್ನ –

ಕೃ—ಸಲ್ಲು, ಸಲ್ಲು, ಸಲ್ಲು! ಏನ್ರೀ ನೀವು ಬಾಯಿಗೆ ಬಂದದ್ದೆಲ್ಲಾ

ಬಡಬಡಿಸುತ್ತಿದ್ದೀರಿ? (ನಗುತ್ತಾ) ನನ್ನ ಕೋಪದಲ್ಲೂ ನಗು ಬರುತ್ತೆ. ಹೋಗ್ರೀ, ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದು –

ತಿಪ್ಪಾ—ನಾನೇ? ನನಗೆ ಹುಚ್ಚು ಅನ್ನುತ್ತೀರಾ?

ಕೃ—ಅಷ್ಟೇ ಅಲ್ಲ. ಜತೆಗೆ ಬೆಪ್ಪು ಮೇಲೆ ತಲೆಹರಟೆ. (ಲಗ್ನಪತ್ರಿಕೆ ತೋರಿಸುತ್ತ) ನೋಡ್ರೀ ಓದ್ರೀ, ಇಲ್ಲಿ ನೋಡಿ, ನಾನು ಮಾಡಿಸಿ ಕೆಟ್ಟ ಲಗ್ನಪತ್ರಿಕೆ. ಇಲ್ಲೇನು ಬರೆದಿದೆ ನೋಡಿ."ರಾವ್‌ಸಾಹೇಬ, ರಾಮರಾಯ" ಅಂತ ಬರೆದಿದೆಯೋ, "ಹಾರನಹಳ್ಳಿ ವಿಶ್ವೇಶ್ವರ ಭಟ್ಟರು" ಅಂತ ಬರೆದಿದೆಯೋ - ನೋಡ್ರೀ.

ತಿಪ್ಪಾ—ಸರಿ. ನೀವು ಹೇಳಿದ್ದೇನೋ ಸರಿಯೇ...ಆದರೆ ನಮ್ಮ ಮನೆ ಇಲ್ಲಿಗೆ ಅಷ್ಟೇನೂ ದೂರ ಇಲ್ಲ. ಹತ್ತಿರವೇ. ಹಳ್ಳಿಯಿಂದ ಬರುತ್ತಿದ್ದೀರಿ ಅಂದಿರಿ. ಚಿಂತಿಲ್ಲ. ನಿಮಗೆ ಆ ಹೋಟಲು ಬೇಡ. ನಮ್ಮ ಮನೆಗೆ ದಯ ಮಾಡಿ. ಮುಖ ತೊಳೆದು ಕೊಳ್ಳಿ. ಒಂದು ಬಟ್ಟಲು ಬಿಸಿ ಕಾಫಿ ಕುಡಿಯಿರಿ. ನಮ್ಮ ಮನೆಯಲ್ಲೂ ಇದೆ. ಇದರ ಎರಡರಷ್ಟು ಅಗಲದ ದಪ್ಪದ ಲಗ್ನಪ್ರತಿಕೆ. ತೋರಿಸುತ್ತೇನೆ. ಅಲ್ಲಿ ಕೀರನಹಳ್ಳಿ ಸಾಹುಕಾರ ಶ್ರೀಯುತ ಕೃಷ್ಣಪ್ಪನವರ ಕುಮಾರ ಚಿ॥ ಚಂದ್ರಶೇಖರ ಅಂತ ಇದೆಯೋ ಇಲ್ಲವೋ ನೀವೇ ಓದುವಿರಂತೆ.

ಕೃ—ಆಂ?

ತಿಪ್ಪಾ—ಹುಚ್ಚಾಸ್ಪತ್ರೆ ಕಲ್ಲು ಕಟ್ಟಡ ಎಲ್ಲೂ ಹೋಗೊಲ್ಲ. ಅದರ ಒಳಗೆ ಸೇರಬೇಕಾದವನು ನಾನೋ–

ಕೃ—ನಾನೋ -

ತಿಪ್ಪಾ—ನೀವೇ ಹೇಳುವಿರಂತೆ. (ಕೃಷ್ಣಪ್ಪ ಮಾತಾಡಲು ಬಾಯಿ ಬಿಡಲು) ಮಾತಾಡಬೇಡಿ ಈಗ. (ಮತ್ತೆ ಯತ್ನಿಸಲು) ಗಲಾಟೆ ಮಾಡಬೇಡಿ (ಮತ್ತೆ ಯತ್ನಿಸಲು) ಕೂಗಾಡಬೇಡಿ, (ಇನ್ನೂ ಪ್ರಯತ್ನಿಸಲು) ಉಸಿರು ಉಸಿರು ಎತ್ತದೆ ಬನ್ನಿ. ಬನ್ನಿ. [ಎಳೆದೊಯ್ಯುತ್ತಾ]

[ನಿಷ್ಕ್ರಮಿಸುವರು]

ದೃಶ್ಯ ೧೦

[ರಾವ್‌ಸಾಹೇಬರ ಬಂಗಲಿ – ನಡುಮನೆ - ರಾಯರೂ ಜೋಯಿಸರೂ ಕಾಫಿ ಸಮಾರಾಧನೆಯಲ್ಲಿರುವರು. ಜೋಯಿಸರೂ ಬಟ್ಟಲು ಬರಿದು ಮಾಡಲು, ಸೀತಮ್ಮ ಕೆಟಲ್ಲಿನಿಂದ ಇದನ್ನು ತುಂಬುತ್ತಿರಲು]

ಪುಟ್ಟ—ಏನು. ಏನು, ಸೀತಮ್ಮನವರೇ - ಇದೂ–

ರಾಮು—ಏನಿಲ್ಲ, ಒಂದು ಮದುವೆಗೇ ಕಣ್ಣು ಕಣ್ಣು ಬಿಡುತ್ತಿದ್ದ ಈ ಮನೆಯಲ್ಲಿ, ಡಬ್ಬಲ್ ಮದುವೆ ಹೊಡೆಸಿಬಿಟ್ಟರಿ,ಅವಳು ಎರಡೆರಡು ಬಟ್ಟಲು ಕಾಫಿ ಸೇವೆ ಮಾಡುತ್ತಿದ್ದಾಳೆ...ಬಗ್ಗಿಸೂ— ಬಗ್ಗಿಸೂ–

ಸೀತ—ಹೌದೋ ಅಲ್ಲವೋ, ನೀವೇ ಹೇಳಿ. ನನಗಿನ್ನೂ ನಂಬೋಕ್ಕೇ ಸಾಧ್ಯವಾಗುತ್ತಾ ಇಲ್ಲ.

ರಾಮು—ಹೂಂ. ನಿನ್ನ ರಾತ್ರಿ ಸ್ವಪ್ನದಲ್ಲಿ, "ಆ ಮೈಸೂರಿನ ವರನಿಗೆ ಇನ್ನೊಂದು ತಂತಿ ಕೊಡೊಕ್ಕೆ ಹೇಳಿ"–ಲೇ ನೀನು ಕಣ್ಣು ಅರಳಿಸಬೇಡ. ನಿಜವಾ, ಸುಳ್ಳಾ?

ಪುಟ್ಟ—ಇನ್ನೆಲ್ಲಿಯ ಮೈಸೂರಿನವನಮ್ಮಾ? ಭೀಮು, ಚಂದ್ರಶೇಖರ ಸರೋಜ, ಶಾಂತೂ ರೂಂ ಭರ್ತಿ ಆಗಿಹೋಗಿದ್ದಾರೆ –

ರಾಮು—ಹೂ, ನಮಗೆ ಮೂರನೇ ಮಗಳಿಲ್ಲ, ಮೈಸೂರಿನ ವರನಿಗೆ ಎಲ್ಲಿಯ ಛಾನ್ಸು? ಟೂ ಲೇಟ್...ಸೀತಾ, ಶಾಂತೂ ಮಾವನಿಗೆ ಕಾಫಿ ಆಯಿತಾ ನೋಡು-ನಾವು ನಾವು ಇಲ್ಲಿ ಸಮಾರಾಧನೆ ಮಾಡಿಕೊಳ್ಳುತ್ತಾ-

ಸೀತ—ದೇವರ ಪೂಜೆ ಮಾಡುತ್ತಿದ್ದರು. ಮುಗಿಯತ್ತಲೇ ಕೊಡು ಅಂತ ಶಾಂತೂಗೆ ಹೇಳಿದ್ದೆ.

ರಾಮು—ನೀನು ಹೇಳಿದ್ದಿ. ಆದರೆ ಅವಳು ನಿನ್ನ ಮಗಳು. ತನ್ನ ಗಂಡನಿಗೆ ಸರಬರಾಯಿ ಮಾಡುವ ಸಂಭ್ರಮದಲ್ಲಿ ಮಾವನ್ನ ಮರೆತು-ಹೋಗಿ ನೋಡು.

ಸೀತ—[ಎರಡು ಹೆಜ್ಜೆ ಹೋಗಿ, ನಿಂತು] ಅಂ...ಏನೋಂದ್ರೇ–

ರಾಮು—ಹೇಳೀಂದ್ರೇ-

ಸೀತ –ನೀವು–

ರಾಮು—ಸುಮ್ಮನೆ ತಮಾಷೀಗೆ-ಎಸ್-ಏನು?

ಸೀತ—ಈಗ ನೀವೆಲ್ಲೂ ಹೋಗೊಲ್ಲವಲ್ಲಾ?

ರಾಮು—ಯಾಕೆ?

ಸೀತ—ಶಾಂತೂ ಮಾವನವರು ಪೇಟೆ ಕಡೆ ಹೋಗಬೇಕಂತೆ. ಕಾರ್ ತೊಗೊಂಡು ಹೋಗಲಿ. ಸಾಬ್ಬಾನಿಗೆ ಹೇಳುತ್ತೀನಿ.

ರಾಮು—ಹೇಳು. ನಾವು ಎಲ್ಲೂ ಹೋಗೊಲ್ಲ.

(ಸೀತಮ್ಮ ನಿಷ್ಕ್ರಮಿಸುವರು)

ಜೋಯಿಸರೇ, ಈ ಶಾಂತೂ ಮಾವ–

ಪುಟ್ಟ—ಹುಂ?

ರಾಮು—ಭೀಮರಾಯರು ಅವತ್ತು ರಸ್ತೆಯಲ್ಲಿ ಅಷ್ಟೊಂದು ಹೆದರಿಸಿದರು-ಹಳ್ಳಿಯವರು, ಹಯವರಟರು. ಮಂಗೋಪಿ ಹಿಂಗೋಪಿ ಅಂತ ಏನೇನೋ ಅಂದರು. ಆದರೆ ಹಾಗೇನೂ ಕಾಣಲಿಲ್ಲವೇ! ಒಂದು ಹುಬ್ಬು ಗಂಟು ಹಾಕಲಿಲ್ಲ–ಧ್ವನಿ ಸ್ವಲ್ಪ ಎತ್ತರಿಸಲಿಲ್ಲ-ಸಮಾಧಾನವಾಗಿ ನಗುನಗುತ್ತಾ–

[ಹೊರಗೆ—ಕೃ-ರಾವ್‌ಸಾಹೇಬಾ!]

ಆಂ?

ಪುಟ್ಟ—ಏನಿದು? ಕೃಷ್ಣಪ್ಪನವರ ಧ್ವನಿ! ಅದರೆ-

ರಾಮು—ನಾವಿಲ್ಲೇ ಇದ್ದೇವೆ. ದೇವರ ಪೂಜೆ ಮಾಡುತ್ತಿದ್ದರು ಅಂದಳು-

ಪುಟ್ಟ—ಹೊರಗೆ ಯಾವಾಗ ಹೋದರು?

ರಾಮು—ಆಲ್ಲದೆ ಹೀಗೆ ಒರಟಾಗಿ-ಆಗೋ ಬಂದರು.

ಕೃ—(ಪ್ರವೇಶಿಸಿ) ಎಲ್ಲಿದ್ದೀಯೋ?.... ಯಾರು ಹೇಳಕೇಳುವವರಿಲ್ಲವೋ ಈ ಛತ್ರದಲ್ಲಿ ?

ರಾಮು — ಜೋಯಿಸರೇ?

ಪುಟ್ಟ—ಏನು ಭಾಷೆ! ಇದು ಛತ್ರವೇ? ನಾನು ಮಾತಾಡಿಸುತ್ತೇನೆ. ತಡೆಯಿರಿ....ಅಹೆಮ್, ಕೃಷ್ಣಪ್ಪನವರೇ–

ಕೃ—ಅಲೆಲೆ, ಇಲ್ಲೂ ನನ್ನ ಹೆಸರುಹಿಡಿದು-[ನೋಡಿ] ಯಾರು ನೀವು? ಪುರೋಹಿತರು ಕಂಡ ಹಾಗೆ ಕಾಣಿಸುತ್ತೀರಿ. ನಿಮ್ಮಿಂದ ನಿಮ್ಮಿಂದ [ಮೂತಿ ತಿವಿಯುವಂತೆ] ನಿಮ್ಮಿಂದಾನೇರೀ [ಲಗ್ನಪತ್ರಿಕೆಯನ್ನು ಗಾಳಿಯಲ್ಲಿ ಆಡಿಸುತ್ತಾ] ಇಂಥ ಅವಾಂತರಗಳೆಲ್ಲಾ ಆಗುವುದು. ನೀವೋ, ನಿಮ್ಮ ಮೂತೀನೋ, ನಿಮ್ಮ ವಿಭೂತೀನೋ, ಆಷಾಡಭೂತಿಗಳು ನೀವು. ನೋಡೀ. ಓದಿ. ಏನ್ರೀ ಇದರ ಅರ್ಥ?

ಪುಟ್ಟ—ಅರ್ಥ...?...ಅರ್ಥ?

ಕೃ—ಅರ್ಥ, ತಾತ್ಪರ್ಯ, ಇಲ್ಲಿದ್ದಾನಲ್ಲ ಇವನು, ಈ ಚಂದ್ರಶೇಖರ, ಇವನು ನನ್ನ ಮಗ. ನಾನು ಇವನ ಅಪ್ಪ.

ಪುಟ್ಟ—ಅಲ್ಲ ಅಂದವರು ಯಾರು?

ರಾಮು—ನಾನು ಹೇಳುತ್ತೇನೆ, ಜೋಯಿಸರೆ....ತಾವು–

ಕೃ—ನೀವು ಯಾರು? ಯಾರಾದರೂ ಪರವಾಗಿಲ್ಲ. ನಿಮ್ಮನ್ನ ನೋಡಿದರೆ ತಕ್ಕಮಟ್ಟಿಗೆ ಸಾಚಾ ಕಾಣಿಸುತ್ತೀರಿ. ಇಲ್ಲಿ ನೋಡಿ, ಈ ಲಗ್ನ ಪತ್ರಿಕೆಯಲ್ಲಿ....ಇಲ್ಲಿದಾನಲ್ಲ, ಈ ರಾವ್‌ಸಾಹೇಬ, ರಾಮರಾಯನೋ. ರಾವಣ ಆಚಾರೀನೋ, ಇವನು ಈ ನನ್ನ ಮಗನಿಗೆ ತನ್ನ ಮಗಳನ್ನ ಕೊಟ್ಟು ನನ್ನ ಮೂತಿಗೆ ಮೂರು ನಾಮ ಹಚ್ಚಿದಾನಲ್ಲಾ, ಇದು ಸರಿಯೇ? ಇದು ನ್ಯಾಯವೇ? ಇದು ಧರ್ಮವೇ? ನಾನು ಹಳ್ಳಿಯವನು ನಿಜ, ಇವನು ಪಟ್ಟಣವಾಸದವನು ನಿಜ, ಆದರೆ ನಮ್ಮ ಮಕ್ಕಳನ್ನ ಕದಿಯೋ–

ರಾಮು—ಅಲ್ಲ ಕೃಷ್ಣಪ್ಪನವರೇ, ಯಾರು ಯಾರನ್ನ ಕದಿಯುವುದು? ರಾಜಾರೋಷವಾಗಿ ತಾವೇ ನಿಂತು – ನನ್ನ ಗುರುತು ನಿಮಗೆ–ಯಾಕೆ? ನಾನೇ ಅಲ್ಲವೇ, ರಾಮರಾಯ?

ಪುಟ್ಟ—ನಾನೇ ಅಲ್ಲವೇ ಪುಟ್ಟಾಜೋಯಿಸ?

ಕೃ—ಪುಟ್ಟ, ಪುಟ್ಟ–? ಹೌದು....ಹೌದು....ಅದೇ ತಿಪ್ಪಾಭಟ್ಟರು ಹೇಳಿದ ಹೆಸರು. ರೀ, ಒಳ್ಳೇ ಮಾತಿನಲ್ಲಿ ನೀವು ಅತ್ತಲಾಗಿ ದೂರ ನಿಂತು ಕೊಳ್ಳಿ. ಜುಟ್ಟು ಕಿತ್ತು ಕೈಗೆ ಕೊಟ್ಟೇನು ! ತಾವೇನೋ ರಾಮರಾಯರು ? ದಶರಥನ ಸುಕುಮಾರ ರಾಯರು? ರಾಣಿ ಕೌಸಲ್ಯಾ ಸುತರು? ಮೂಳೆ ಮೂಳೆ–

[ಶಾಂತೂ ಕಾಫಿ ತಂದು]

ಶಾಂತ—ಮಾವನವರೇ, ಕಾಫಿ-

ಕೃ—ಏಯ್, ನೀನು ಯಾರೇ ? ನೀನು ಯಾವ ನನ್ನ ಸೊಸೆಯೋ! ಹೋಗು ದೂರ-

ಶಾಂತ—ಅಪ್ಪಾ-?

[ವೇಷಧಾರಿ ಕೃಷ್ಣಪ್ಪ ಬಾಗಿಲಲ್ಲಿ ಕಾಣಿಸಿಕೊಂಡು, ಸಂದರ್ಭ ಅರ್ಥ ಮಾಡಿಕೊಂಡು ಮಾಡುವುದೇನು?—ಭೀಮು ನಿಲ್ಲಿಸೆನ್ನುವವರೆಗೂ ನಾಟಕ ಮುಂದುವರಿಸಲೇಬೇಕೆಂದು ತೀರ್ಮಾನಿಸಿ—ಹಿಂದೆ ಸರಿದು ಮರೆಯಿಂದ "ಶಾಂತೂ, ನನ್ನ ಕಾಫಿ ಎಲ್ಲಮ್ಮಾ?"...ಈ ಧ್ವನಿ ಕೇಳಿ, ಎಲ್ಲರೂ ಆ ಬಾಗಿಲತ್ತ ತಿರುಗುವರು]

ವೇ.ಕೃ — [ಪ್ರವೇಶಿಸಿ] ಇಲ್ಲಿ ಬಂದಳೇನು - ? ಓಹೋ, ಇಲ್ಲೇ ಇದ್ದೀಯಮ್ಮಾ – ತಾ – [ಶಾಂತ ಕಕ್ಕಾವಿಕ್ಕಿಯಾಗಿ ಬಟ್ಟಲು ಹಿಡಿಯುವಳು— ವೇ. ಕೃ. ಇಸಗೊಂಡು ಆರಾಮವಾಗಿ ಕುರ್ಚಿಯಲ್ಲಿ ಕುಳಿತು ಕಾಫಿ ಚಪ್ಪರಿಸುತ್ತಾ] ಭಲೆ...ಭಲೆ...ನನಗೆ ಸಿಹಿ ಇಷ್ಟ ಅಂತ ಎರಡು ಚಮಚ ಸಕ್ಕರೆ ಜಾಸ್ತಿ ಹಾಕಿದ್ದಿ...ಭಲೆ. ಭಲೆ...

ರಾಮ—ಜೋಯಿಸರೇ?

ಪುಟ್ಟ—ಶಂಭೋ ಶಂಕರ !

ರಾಮ—ಅವರು ಯಾರು?

ಪುಟ್ಟ—ಇವರು ಯಾರು?

ಕೃ—[ವೇ.ಕೃ. ಮುಂದೆ ನಡೆದು ನಿಂತು] ಏಯ್ !

ವೇ.ಕೃ—[ಕಾಫಿ ಕುಡಿದು ಬಟ್ಟಲನ್ನು ಇಟ್ಟು, ನೋಡಿ, ನಿಂತು] ಎಲ ಎಲ.... ಇದೇನಿದು?......ಎಲ್ಲಿ–ಓ........ರಾವ್ ಸಾಹೇಬರೇ, ಇದು ಯಾಕೆ ಈ

ನಿಲುಗನ್ನಡಿ ಹಾಲಿನ ಮಧ್ಯ—ಆದರೆ ಧ್ವನಿ ? - ನಾನೇ ಮಾತಾಡಿದೆನೋ ಎತ್ತಿಟ್ಟು ಬಿಡುತ್ತೇನೆ ಗೋಡೆ ಓರೆ, ಬಿಡಿ. (ಕೃಷ್ಣಪ್ಪನವರನ್ನೆತ್ತಲುಪಕ್ರಮಿಸಿ, ಬಿಟ್ಟು) ಅಯ್ಯೋ, ಇದು ಕನ್ನಡಿ ಅಲ್ಲ! ಮನುಷ್ಯ! ರಾವ್‌ಸಾಹೇಬರೇ ?

ಕೃ—ಏಯ್ !

ವೇ.ಕೃ– ಜೋಯಿಸರೇ, ಬದುಕಿರುವ ಮನುಷ್ಯ !

ಕೃ—ಬದುಕಿದ್ದೇನೋ. ತಿರುಗು ಈ ಕಡೆ....ಯಾರು ನೀನು ?

ವೇ.ಕೃ—ಯಾರು ನಾನು? ನಾನು ಯಾರು?

ಕೃ—ಯಾರು ನೀನು, ಬೊಗಳೂ.

ವೇ.ಕೃ—ಏನಂದ್ರೀ?

ಕೃ—ಕಿವಿ ಕಿವುಡೇನ್ರೀ ನಿಮಗೆ?

ಶಾಂತ—ಅಮ್ಮಾ (ಒಳಗೆ ಓಡಿಹೋಗುವಳು)

ವೇ.ಕೃ—ನನ್ನ ಕಿವಿ? ಸದ್ಯಕ್ಕೆ ಕೇಳಿಸುತ್ತಾ ಇದೆ. ಆದರೆ ತಾವು ಇದೇ ರೀತಿ ಇನ್ನು ಸ್ವಲ್ಪ ಹೊತ್ತು ಬೊಗಳಿದರೆ, ಕಿವುಡಾಗುವ ಸಂಭವ ಉಂಟು. ಎಲ್ಲಿಯ ಗ್ರಹಚಾರ?—ಅಲ್ಲವೇ, ರಾವ್‌ಸಾಹೇಬರೇ ?

ಕೃ—ಏಯ್, ನನ್ನನ್ನು ತಮಾಷೆ—?

ವೇ.ಕೃ—((ಒಂದು ಚಿಟಿಕಿ ನಶ್ಯ ಒಡಿದು) ತೊಗೊಳ್ಳಿ.

ಕೃ—ಏಯ್–(ಕೈ ಕೊಡುವಲು)

ವೇ.ಕೃ—ಬೇಡವೇನು? ಬಿಡಿ. ನಿಮ್ಮ ಮೂಗಿಗೆ ನಷ್ಟ. ನನ್ನನ್ನು ಯಾರು ಅಂತ ಕೇಳಿದಿರಿ. ಯಾರು ನೀನು ಬೊಗಳು ಅಂದಿರಿ. ನಾನಾ ಯಾಕೆ ನಿಮಗೆ ತಕ್ಷಣ ಉತ್ತರ ಹೇಳಲಿಲ್ಲ ಅಂದರೆ-ನನಗೆ ಹೀಗೆ ನಿಮ್ಮ ಹಾಗೆ ಏಕಾ ಏಕಿ ಬೊಗಳೊಕ್ಕೆ ಬರೊಲ್ಲ – (ರಾವ್‌ಸಾಹೇಬರೂ ಜೋಯಿಸರೂ ನಗು ತಡೆದು ಕೊಳ್ಳುವರು)

ಕೃ—ಲೋ!

ವೆ. ಕೃ—ನಾನು ಹೇಳಿದ್ದು ನಿಜ. ನಿಮಗೆ ಹೆಚ್ಚು ತೊಂದರೆ ಕೊಡೋಲ್ಲ ನಾನು ಕೀರನಹಳ್ಳಿ ಸಾಹುಕಾರ.

ಕೃ—ಏನೂ? ನೀನು—?

ವೇ. ಕೃ—ಕೃಷ್ಣಪ್ಪ ಅಂತ ನಾಮಧೇಯ.

ಕೃ—ನಾಮಧೇಯ ?

ವೇ. ಕೃ—ಹೆಸರು, ನಮ್ಮ ಅಪ್ಪ ನನ್ನ ನಾಮಕರಣ ಕಾಲದಲ್ಲಿ ಆ ಹೆಸರಿಟ್ಟದ್ದು ಉಂಟು—

ಕೃ—ನಿನಗೆ...ನಿಮ್ಮ ಅಪ್ಪ....ನಾಮಕರಣ ಕಾಲದಲ್ಲಿ....ಕೃಷ್ಣಪ್ಪ ಅಂತ ಹೆಸರಿಟ್ಟನೋ? ಏ ಕಳ್ಳ ಭಡವಾ-

ಪುಟ್ಟ—ಅಯ್ಯಯ್ಯೋ-

ರಾಮು—ಜೋಯಿಸರೇ—

ಸೀತ—(ಪ್ರವೇಶಿಸಿ) ಏನು ಗಲಾಟೆ ?-

ಶಾಂತ—(ಪ್ರವೇಶಿಸಿ) ಅಗೋ, ಅಮ್ಮಾ-

ಕೃ—ಘಟಿಂಗ. ನಿಮ್ಮಪ್ಪ ನಿನಗೆ ನಾಮಕರಣ ಮಾಡಿದ. ನಾನು ನಿನಗೆ ಮುಟ್ಟಿದ ಹಬ್ಬ ಮಾಡುತ್ತೇನೆ, ಸಿದ್ಧನಾಗು....ಯಾರ ಹತ್ತಿರ ಮಾತಾಡುತ್ತಿದ್ದಿ ಅಂತ ತಿಳಿದುಕೊಂಡಿದ್ದೀಯೋ—ನಾನು (ಎದೆ ತಟ್ಟಿಕೊಂಡು) ಅಯೋಗ್ಯ !

ವೇ. ಕೃ—ಆಗಬಹುದು. ನನ್ನ ಅಭ್ಯಂತರವೇನೂ ಇಲ್ಲ.

ಕೃ—ಏನು?

ವೇ. ಕೃ—ನೀವು ಅಯೋಗ್ಯರು ಅಂತ ಹೇಳಿಕೊಂಡಿರಿ. ನಾನೇನು ಮಾಡಲಿ? ನನ್ನದು ಅಭ್ಯಂತರ ಇಲ್ಲ ಅಂತ ಹೇಳಿದೆ.

ಕೃ—ಮುಚ್ಚು ಬಾಯಿ. ನಾನು ಹಾಗಲ್ಲ ಹೇಳಿದ್ದು.

ವೇ. ಕೃ—ನನಗೆ ಕೇಳಿದ್ದು ಹಾಗೆ. ನಿನಗೆ ಬೇರೆ ತರಹಾ ಕೇಳಿಸಿತೇ, ಶಾಂತಮ್ಮಾ? ತಮಗೆ ತಾಯಿ? ರಾವ್ ಸಾಹೇಬರೇ! ಜೋಯಿಸರೇ?

ಕೃ—ಅವರನ್ನೇನು ಕೇಳುತ್ತಿ, ನನ್ನ ಕೇಳೊ. ನಾನಂದದ್ದು, ನಾನು ಕೀರನಹಳ್ಳಿ ಕೃಷ್ಣಪ್ಪ, ಅಯೋಗ್ಯ ಅಂತ–

ವೇ. ಕೃ—ಹಾಗೇ ಆಗಲಿ. ನನಗಂತೂ ಏನು ವ್ಯತ್ಯಾಸವೂ ಕಾಣಿಸಲಿಲ್ಲ. ಅಲ್ಲ, ಸ್ವಾಮಿ, ತಾವು ಕೀರನಹಳ್ಳಿ ಕೃಷ್ಣಪ್ಪನವರಾದರೆ, ಅವರು ಅಯೋಗ್ಯ ರಾದರೆ, ತಾವು ಅದೇ ಅಂದ ಹಾಗೆ-ಬಳಸಿ ಹೇಳಿದಿರಿ ಅಷ್ಟೇ.

ಕೃ—ಹಲ್ಲು ಉದುರಿಸಿ ಬಿಟ್ಟೇನು, ನಿಲ್ಲಿಸು.

ಸೀತ—ಅಯ್ಯೋ, ಇದೇನೂಽಂದ್ರೇ-?

ಕೃ—ನಾನು ಹೇಳಿದ್ದು, ನಾನು ಕೃಷ್ಣಪ್ಪ, ನೀನು ನೀನು ಅಯೋಗ್ಯ ಅಂತ ಆದಿರಲೀ-

ವೇ. ಕೃ—ಆದಿರಲೀ, ನೀವು ನೋಡೋಕ್ಕೇನೋ ತಕ್ಕ ಪುಟ್ಟಿಗೆ ನನ್ನ ಹಾಗೇ ಇದ್ದೀರಿ....ನನ್ನ ಹೆಸರನ್ನೂ ಕದ್ದುಬಿಟ್ಟಿದ್ದೀರಲ್ಲಾ–

ಕೃ—ಏನು, ನಾನು ನಿನ್ನ ಹೆಸರನ್ನು ಕದ್ದಿದ್ದೇನೆಯೋ? ನಾನು ಕೀರನ ಹಳ್ಳಿ ಕೃಷ್ಣಪ್ಪ ಅಲ್ಲವೇ?

ವೇ. ಕೃ—ಹೌದೇ? ಹಾಗಂತ ಯಾರು ಹೇಳಿದರು ನಿಮಗೆ?

ಕೃ—ಯಾರು ಹೇಳಬೇಕು ನನಗೆ? ನಾನು ಯಾರು ಅಂತ ನನಗೇ ಗೊತ್ತಿಲ್ಲವೇ? ನಾನು ಯಾರು ಅನ್ನುವುದು ಪ್ರಪಂಚಕ್ಕೆ ಗೊತ್ತು.

ವೇ. ಕೃ—ತ್ಸು ತ್ಸು ತ್ಸು ತ್ಸು–ಯಾವ ಹೋಬಳಿಯ ಹಳ್ಳಿಯೋ ನಿಮ್ಮ ಪ್ರಪಂಚ !....ರೀ ರಾವ್ ಸಾಹೇಬರೇ, ಎಲ್ಲಿಂದ ಹಿಡಿದುಕೊಂಡು ಬಂದಿರ್ರೀ ಈ ಪ್ರಾಣಿಯನ್ನ - ?

(ಇತರರು ನಗು ತಡೆಯುವರು)

ಕೃ—ಪ್ರಾಣಿ ? ಪ್ರಾಣಿ ? (ಇತರರಿಗೆ) ನಗುತ್ತೀರಾ ? ನಿಲ್ಲಿಸೀ.... ನಿಮ್ಮ ಒಬ್ಬೊಬ್ಬರನ್ನೂ – (ದೊಣ್ಣೆ ಎತ್ತಲು)

ಶಾಂತ—ಅಮ್ಮಾ —
ಸೀತ—ಅಯ್ಯೋ —
ರಾಮು—ಜೋಯಿಸರೇ —
ಪುಟ್ಟ—ಶಿವಶಿವಾ - -

ವೇ. ಕೃ—ಗಾಬರಿಯಾಗಬೇಡಿ....ರೀ, ಒಂದು ನಿಮಿಷ ನಿಲ್ಲಿ. (ಓಡಿ ರ್‍ಯಾಕಿನಲ್ಲಿದ್ದ ದೊಣ್ಣೆ ತಂದು, ತೋಳು ಮಡಚುತ್ತಾ) ಹಾಂ, ಈಗ ನಾನೂ ಸಿದ್ಧ. ಬನ್ನಿ....ಏನು ನೋಡುತ್ತಿದ್ದೀರಿ ?

ಕೃ—ಅದೂ ? ಅದೂ ? ಆ ದೊಣ್ಣೆಯೂ– ?

ವೇ. ಕೃ—ಇದೂ ನಿಮ್ಮದೇ ಆಸ್ತಿ‌ರೋ ಏನೋ ! ರಾವ್ ಸಾಹೇಬರೇ, ನೀವು ಹೆಂಗಸರನ್ನ ದೂರ ನಿಲ್ಲಿಸಿಕೊಳ್ಳಿ. ಜೋಯಿಸರೇ ಹಲ್ಲುಗಳು ಉದುರಬಹುದು. ಆರಿಸಿಕೊಳ್ಳಿ. ದಯಮಾಡಿ, ಕೃಷ್ಣಪ್ಪನವರೇ (ದೊಣ್ಣೆಯಿಂದ ದೊಣ್ಣೆಗೆ ಬಡಿದು) ಕೋಲು ಕೋಲೆನ್ನ ಕೋಲೇ ! (ದಿಗ್ಭ್ರಮೆಯಿಂದ ಪೆಚ್ಚಾದ ಕೃಷ್ಣಪ್ಪನವರ ಕೋಲನ್ನು ಹಾರಿಸಲು)

ಕೃ—ಓ... ಎಲ ಎಲ (ಎತ್ತಿಕೊಳ್ಳಲು ಹೊರಡಲು)

ವೇ. ಕೃ— (ಹಾರಿ, ಕೋಲನ್ನು ಕಾಲಲ್ಲಿ ತುಳಿದು) ರಾವ್ ಸಾಹೇಬರೇ, ಹಿಡಿಯಿರಿ. ಯಾವುದೋ ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದಿರಬೇಕು —

ಕೃ—ಹುಚ್ಚಾಸ್ಪತ್ರೆ ? ನಾನು ಹುಚ್ಚನೇ ?

ಪುಟ್ಟ—ಇರಲೇ ಬೇಕು.

ವೇ. ಕೃ—ಸಂದೇಹವೇ ಇಲ್ಲ. ಹಿಡಿಯಿರಿ. ಜೋಯಿಸರೇ, ನೀವೂ ಒಂದು ಕೈ —

(ಇಬ್ಬರೂ ಬಂದು ಕೃಷ್ಣಪ್ಪನವರ ಒಂದೊಂದು ರಟ್ಟೆ ಹಿಡಿಯುವರು)

ಕೃ—ಬಿಡಿ, ಬಿಡಿ, ನಾನು ಹುಚ್ಚನಲ್ಲ –

ವೇ. ಕೃ—ಶಾಂತಮ್ಮ, ಓಡಿ, ನಿನ್ನ ಗಂಡನ್ನ ಕರಿಯಮ್ಮಾ. ಸೀತಮ್ಮ

ನವರೇ, ನಿಮ್ಮ ದೊಡ್ಡ ಅಳಿಯಂದಿರನ್ನ ಕರೆಯಿರಿ....(ಹೊರಡುತ್ತಾ) ನಾನು ಒಂದು ಹಗ್ಗ ತರುತ್ತೇನೆ. ಕಟ್ಟಿ ಕರೆದುಕೊಂಡು ಹೋಗೋಣ ಆಸ್ಪತ್ರೆಗೆ -

(ಸೀತಮ್ಮ, ಶಾಂತು ಓಡುವರು)

ಕೃ—ಅಯ್ಯಯ್ಯೋ, ಬಿಡಿ. ನಾನು ಹುಚ್ಚ ಅಲ್ಲ. ನಾನೇ ಕೀರನಹಳ್ಳಿ ಕೃಷ್ಣಪ್ಪ. ನಾನು ನಿಜವಾಗಲೂ ನಾನೇ. ಚಂದ್ರೂನ ಕರೆಯಿರಿ ಗೊತ್ತಾಗತ್ತೆ. ಚಂದ್ರೂ....ಚಂದ್ರೂ -

(ಭೀಮು, ಚಂದ್ರು, ಸೀತಮ್ಮ, ಶಾಂತು ಓಡಿಬರುವರು)

ಭೀಮು—ಓ !

ಚಂದ್ರು—ಭೀಮು !

ಕೃ—ಆಗೋ. ಚಂದ್ರೂ, ಹೇಳೋ, ಹೇಳೋ ಇವರಿಗೆ; ನಾನು ಹುಚ್ಚನಂತೆ, ನನ್ನನ್ನ ಆಸ್ಪತ್ರೆಗೆ ಸೇರಿಸುತ್ತಾರಂತೆ - ಲೋ, ಭೀಮೂ, ನೀನು!

ಭೀಮು—ಉಂ....ದಿ ಗೇಮ್ ಈಸ್ ಅಪ್ .... ಬಿಡಿ, ರಾವ್ ಸಾಹೇಬರೇ....ಬಿಡಿ, ಜೋಯಿಸರೇ (ವೇ.ಕೃ.ಗೆ) ಹೋಗೋ, ಬೇಕೂಫಾ, ನಿನ್ನ ಬಣ್ಣ ಅಳಿಸಿ ಬಾ....

ವೇ. ಕೃ—(ಸಹಜವಾಗಿ ಮಾತಾಡುತ್ತಾ) ನಾನು ಬೇಕೂಫನಂತೆ ! ಇಲ್ಲಿ ಅವರು ಗುಂಡು ಮದ್ದು ಹಾಕಿ ಫಿರಂಗಿ ಹಾರಿಸಿ ಕೋಟೆ ಪುಡಿ ಪುಡಿ ಮಾಡುತ್ತಿದ್ದಾರೆ, ನೀವು ಅಂತಃಪುರದಲ್ಲಿ ಆಟ ಆಡುತ್ತಾ ಇದ್ದರೆ, ನಾನು ಎಷ್ಟು ಹೊತ್ತು ಹೋಲ್ಡಿಂಗ್ ದಿ ಫೋರ್ಟ್ರ್ (ನಕ್ಕು) ಈಗ ಬಂದೆ....(ಕೃಷ್ಣಪ್ಪನವರ ಮುಖಕ್ಕೆ) ಸಾರಿ....(ನಗುತ್ತಾ ಓಡುವನು)

ರಾವು—ಏನಿದು ?

ಪುಟ್ಟ—ಬ್ರಹ್ಮನೇ ಬಲ್ಲ.

ಭೀಮು—ಬನ್ನಿ, ಕೃಷ್ಣಪ್ಪನವರೇ, ಕೂತುಕೊಳ್ಳಿ. ನಾನು ಹೇಳುತ್ತೇನೆ.

(ಚಂದ್ರು, ಶಾಂತು ನುಣುಚಿಕೊಂಡು ಮರೆಯಾಗುವರು)

ಕೃ—ಲೋ, ನೀನಿಲ್ಲಿ ? ನೀನೂ ಸೇರಿದ್ದೀಯಾ ಇವರಲ್ಲಿ ? ಸರಿ. ಸರಿ. ಸರಿ. ಈಗ -

ಭೀಮು—ಸೇರೊಕ್ಕೆ ನಾನು ಯಾರು ? ಬಿಡಿಸೊಕ್ಕೆ ನೀವು ಯಾರು ? ನಮ್ಮನ್ನೆಲ್ಲಾ ಆ....ಆ (ಥೂಲ ತೋರಿಸಿ) ಭಗವಂತ - ನೀವು ಕೂತು ಕೊಳ್ಳಿ, ನಾನು ಎಲ್ಲಾ ಹೇಳುತ್ತೀನಿ. ರಾವ್‌ಸಾಹೇಬರೇ, ಇವರೇ ನಿಮ್ಮ ನಿಜವಾದ ಬೀಗರು,

ರಾಮು—ಕ್ಷಮಿಸಿ....ನನಗೆ ಗೊತ್ತಿರಲಿಲ್ಲ. ಮತ್ತೆ (ನಾಣಿ ಹೋದ ಬಾಗಿಲತ್ತ ನೋಡುತ್ತಾ) ಅವರು ?

ಭೀಮು—ಅವನು ನನ್ನ ಸ್ನೇಹಿತ. ನಾಟಕದ ನಾಣಿ ಅಂತ.

ಕೃ- ನಾಟಕ ?

ಪುಟ್ಟಿ—ನಾಟಕ ?

ಭೀಮು- ಹೌದು. (ಕೃಷ್ಣಪ್ಪನವರಿಗೆ) ಹೆಣ್ಣು ಒಪ್ಪಿಸಿಕೊಳ್ಳೊಕ್ಕೆ ಗಂಡಿನ ಅಪ್ಪ ಇರಲೇಬೇಕಲ್ಲಾ ಅಂತ, "ಮೂಹೂರ್ತ ದಾಟಿಸಯ್ಯಾ" ಅಂತ ನನ್ನ ಸ್ನೇಹಿತನ್ನ ಕೇಳಿಕೊಂಡೆ.

ಕೃ—ಅವನು ನನ್ನ ವೇಷ ಹಾಕಿಕೊಂಡು ಬಂದು ದಾಟಿಸಿದ ?... ಆಲೆ, ಇವನೆಲ್ಲಿ, ಈ ಅಯೋಗ್ಯ ?

ಭೀಮು—ಚಂದ್ರೂನೇ ? ಏನು, ಕೃಷ್ಣಪ್ಪನವರೇ, ಹೀಗೆ ಕೇಳುತ್ತೀರಿ ? ಮಾಡಬಾರದ ಮಹಾಪರಾಧ ಮಾಡಿದ ಯಾವ ಮಗ ತಂದೆಯ ಮುಂದೆ ತಲೆಯೆತ್ತಿ ನಿಂತಿರುತ್ತಾನೆ ? ಹೆದರಿ, ರೂಮಿಗೆ ಹೋಗಿ, ತರತರತರ ನಡುಗುತ್ತಿರಬೇಕು.

ಕೃ—ಅವನು ? ತರ ತರ ? ಹಾಗಾದರೆ ನಿನಗೆ ಎಲ್ಲಾ ಗೊತ್ತಿರಬೇಕು ?

ಭೀಮು—ಗೊತ್ತಿದೆ. ನನಗೆ ಎಲ್ಲಾ ಗೊತ್ತಾಗಿದೆ, ಗೊತ್ತಾದದ್ದು ಆಗದೆ ಹೋದದ್ದು. ಹೀಗೆ ಯಾಕೆ ಆಯಿತು ಅಂತ ನಾನು ನನ್ನ ಭಾಷೆಯಲ್ಲಿ ನಿಮ್ಮ ಮುಂದೆ ಹೇಳಿಬಿಡುತ್ತೇನೆ. ಸಮಾಧಾನವಾಗಿ ಕೇಳಿ. ಆಮೇಲೆ ನಾವು ಚಿರಂಜೀವಿಗಳು, ನೀವೇನು ಶಿಕ್ಷೆ ವಿಧಿಸಿದರೂ ಸಂತೋಷದಿಂದ ಸ್ವೀಕರಿಸುತ್ತೇವೆ.

ರಾಮು—ಮಿಸ್ಟರ್ ಭೀಮರಾವ್, ನೀವು ನಿಮ್ಮ ಕೇಸನ್ನು ಆರ್‌ಗ್ಯೂ ಮಾಡೊಕ್ಕೆ ಮೊದಲು ನಾನು ಒಂದು ಪ್ರಶ್ನೆಯನ್ನ ಕೇಳಬಹುದಾ ?

ಭೀಮು—ಒಂದು ಯಾಕೆ ? ನೂರು ಕೇಳಬಹುದು. ಕೇಳಿ.

ರಾಮು—ಇವರು....ಇವರಾದರೂ, ಫೈನಲೀ, ನಮ್ಮ ನಿಜವಾದ ಬೀಗರು ಹೌದೋ ಅಥವಾ – (ಬೀದಿ ಬಾಗಿಲತ್ತ ನೋಡಲು)

ಭೀಮು—ಇನ್ನೂ ಬರುವವರಿದಾರಾ ಅಂತ - ? (ನಕ್ಕು) ಇಲ್ಲ, ಇಲ್ಲ. ಆವನು ಫಸ್ಟು, ಇವರು ಲಾಸ್ಟು. ನಾವು ಹುಡುಗರು. ತೋರಿದ ಹಾಗೆ ಹುಡು ಗಾಟ ಆಡಿದೆವು. ಯಾಕೆ ಆಡಿದೆವು ? ಕೃಷ್ಣಪ್ಪನವರೇ, ರಾವ್‌ಸಾಹೇಬರೇ, ನೀವು ಚಂದ್ರೂಗೆ, ನೀವು ನಿಮ್ಮ ಮಗಳಿಗೆ, ನಿಮ್ಮ ಇಷ್ಟದ ಹಾಗೆ ಮದುವೆ ಏರ್ಪಾಡು ಮಾಡಿದ್ದೀರಿ. ಆದರೆ, ಆ ಇಂಗ್ಲೀಷಿನವರು ಹೇಳುವ ಹಾಗೆ, ಮ್ಯಾರೇಜಸ್ ಆರ್ ಮೇಡ್ ಇನ್ ಹೆವನ್. ಜೋಯಿಸರೇ, ನೀವು ಎಷ್ಟೇ ಜಾತಕಗಳನ್ನ ಕೂಡಿಸಿದರೂ, ಎಷ್ಟೇ ಅಂತರಪಟ ಹಿಡಿದು ಮಹಾ ಸಂಕಲ್ಪ ಗಂಟಲು ಹರಿದುಕೊಂಡರೂ, ತೆರೆಮರೆಯಾಗುವ ಹೊತ್ತಿಗೆ ಆ ಕಡೆ ಈ ಕಡೆ ನಿಲ್ಲುವ ಲಕ್ಷ್ಮಿ ಯಾರು ನಾರಾಯಣ ಯಾರು ಅಂತ ತೀರ್ಮಾನಿಸುವವನು, ನಾವು ಯಾರೂ ಅಲ್ಲ, ಬ್ರಹ್ಮ ! ಅವನ ಸಂಕಲ್ಪಕ್ಕೆ ವಿರುದ್ಧ ನೀವು ಹೋದಿರಿ-

ಕೃ – ನಾನು – ?

ರಾಮು—ನಾವು – ?

ಭೀಮು—ಇಬ್ಬರೂ. ಹೇಳುತ್ತೀನಿ ಕೇಳಿ. ಕೃಷ್ಣಪ್ಪನವರೇ, ನಿಮಗೆ ಚಂದ್ರು ಒಬ್ಬನೇ ಮಗ. ಹುಟ್ಟಿದ ಒಂದೇ ತಿಂಗಳಲ್ಲಿ ತಾಯಿಯನ್ನ ಕಳೆದು ಕೊಂಡ.

ಕೃ – ಓ –

ಭೀಮು—ಅವತ್ತಿನಿಂದ ಆ ಮಗುವಿಗೆ ನೀವೇ ತಂದೆಯ ಜತೆಗೆ ತಾಯಿಯೂ ಆಗಿ, ಬಾಟಲಲ್ಲಿ ಹಾಲು ಕುಡಿಸಿದಿರಿ, ಚಂದ್ರನ್ನ ತೋರಿಸುತ್ತಾ ಅನ್ನ ತಿನ್ನಿಸಿದಿರಿ, ತೊಟ್ಟಿಲಲ್ಲಿ ಹಾಕಿ ಜೋಗುಳ ಹಾಡಿದಿರಿ -

ರಾಮು—ಮಿಸ್ಟರ್ ಭೀಮರಾವ್ –

ಸೀತ—ತ್ಸ್ಸ ತ್ಸ್ಸ ತ್ಸ್ಸ –

ಕೃ—ಲೋ, ಲೋ, – ಆ -

ಭೀಮು –ಇನ್ನೂ ಕೇಳಿ. ಅ ಆ ಇ ಈ ತಿದ್ದಿ ಹಾಕಿದಿರಿ. ಒಂದು ಒಂದಲ ಒಂದು ಬಾಯಿಪಾಠ ಮಾಡಿಸಿದಿರಿ. ಪಾಠದ ಜೊತೆಗೆ ಚೆಂಡು, ದಾಂಡು, ಬುಗುರಿ, ಕುಂಟೆಬಿಲ್ಲೆ ಆಟ ಆಡಿದಿರಿ, ಹುಡುಗನ ಕೂಡ....ಅವನು ಬೆಳೆದ. ಕಾಲೇಜು ಓದಿಗೆ ಇಲ್ಲಿಗೆ ಬಂದ....ರಾವ್‌ಸಾಹೇಬರೇ, ನೀವೂ (ಸೀತಮ್ಮನವರನ್ನು ತೋರುತ್ತಾ) ಅವರೂ ನಿಮ್ಮ ಮಗಳನ್ನ ಅಷ್ಟೇ ಅಕ್ಕರೆ ಯಿಂದ ಸಾಕಿ, ಬೆಳೆಸಿ, ಕಾಲೇಜು ಹತ್ತಿಸಿದಿರಿ. ಈ ಘಟ್ಟದಲ್ಲಿ ಎಡವಿದಿರಿ.... ಹೌದು. ಎಡವಿದಿರಿ. ಮೂರು ಸಾವಿರ ವರದಕ್ಷಿಣೆ ಇಸಗೊಂಡು ಹಾರನಹಳ್ಳಿ ವಿಶ್ವೇಶರಭಟ್ಟರ ಮಗಳು ಗೌರಿಯನ್ನ ತಂದುಕೊಳ್ಳುವುದು ಅಂತ ನಿಷ್ಕರ್ಷಿಸಿ – ನೀವು –

ಕೃ—ಹೂಂ. ಇಲ್ಲಿ ನೋಡೋ....ಲಗ್ನಪತ್ರಿಕೆ !

ಭೀಮು— ಲಗ್ನ ಇಡಿಸಿ, ಪತ್ರಿಕೆ ಪ್ರಿಂಟು ಮಾಡಿಸಿದರೆ ಮದುವೆ ಆಗಿಯೇ ಹೋಗತ್ತೆ ಅಂತ ಅಂದುಕೊಂಡಿರಿ, ನೀವು ! (ರಾವ್ ಸಾಹೇಬರಿಗೆ, ಜೋಯಿಸರಿಗೆ) ನೀವು. ಮೈಸೂರಿನ ವರ, ಮೈಸೂರಿನ ವರ ಅಂತ ಅವನ ಕಾಗದ ಹಿಡಿದುಕೊಂಡು, ತಂತಿ ಕಟ್ಟಿಕೊಂಡು, ರೈಲ್ವೆ ಸ್ಟೇಷನ್ನಿಗೆ ಓಡಿ, ಅವನು ಬಂವರೆ ಸಾಕು, ಕರಿಮಣಿ ಸರ ತಂದರೆ ಸಾಕು, ಹೆಣ್ಣಿನ ಕುತ್ತಿಗೆಗೆ ಕಟ್ಟಿಸಿಬಿಡೋಣ ಅಂತ ನೀವು ಯೋಚನೆ ಮಾಡಿದಿರಿ. ಇಂಥ ಯೋಚನೆ ನಿಮ್ಮ ಕಾಲಕ್ಕೆ ಸರಿಹೋಗುತ್ತಿತ್ತು. ನಿಮ್ಮ ಇಷ್ಟ ಇದೆಯೋ ಅಂತ ನಿಮ್ಮ ತಂದೆ ತಾಯಿ ಕೇಳುತ್ತಿರಲಿಲ್ಲ, ಕೇಳಿದ್ದರೂ ನಿಮಗೆ ಹೇಳೊಕ್ಕೆ ತಿಳಿಯು ತ್ತಿರಲಿಲ್ಲ. ಹೆಣ್ಣಿಗೆ ಎಂಟು ವರ್ಷ – ಅಷ್ಟ ವರ್ಷಾತ್ಭವೇ ಕನ್ಯಾ ಅಲ್ಲವೇ, ಜೋಯಿಸರೇ ? – ಅವಳಿಗೆ ಎಂಟು, ಅವನಿಗೆ ಹದಿನಾರೋ ಹದಿನೇಳೋ ! ಅವರಿಗೆ ಆಗ ಅದೊಂದು ಆಟ; ಈಗ, ಈ ಇಬ್ಬರೂ ತಾವು ತಾವು ಮದುವೆ ಯಾಗಬೇಕು ಅಂತ ಇಷ್ಟಪಟ್ಟಿದ್ದರು ಅಂದರೆ –

ರಾಮು—ಏನೇನು ? ಯೂ ಮೀನ್ – ? ಏನೇ ?

ಸೀತ—ನನಗೇನು ಗೊತ್ತು ?

ಕೃ—ಅಲ್ಲವ್ಪೋ ಅವರವರೇ – ತಾವು ತಾವೇ – ?

ಭೀಮು—ಹೌದು. ಬದಲಾಯಿಸಿರುವ ಈ ಕಾಲದಲ್ಲಿ ಬೆಳೆದ ಈ ಗಂಡು ಹೆಣ್ಣು ಹೀಗೆ ಇಷ್ಟಪಡಬಹುದು ಅನ್ನುವುದು ನಿಮ್ಮ ಕಲ್ಪನೆಗೇ ಬರಲಿಲ್ಲ. ನಿಮ್ಮ ಏರ್ಪಾಡು ನೀವು ಮಾಡಿದ್ದು ಉದ್ದೇಶ ಒಳ್ಳೆಯದೇ. ಆದರೆ ಆಗುತ್ತಿದ್ದದ್ದು ಏನು ? ನಿಮ್ಮ ಮಗನಿಗೆ ಅಸಂತೋಷ. ನಿಮ್ಮ ಮಗಳಿಗೆ ವ್ಯಸನ. ಈ ಇಬ್ಬರನ್ನ ಮದುವೆಯಾಗುತ್ತಿದ್ದ ಆ ಗೌರಿ, ಮೈಸೂರಿನವನು. ಏನು ಸುಖ ಪಡುತ್ತಿದ್ದರು ? ನಾಲ್ಕು ಜನರ ಸಂಸಾರ ಕಣ್ಣೀರಿಡುತ್ತಾ ಕೂತಿರುತ್ತಿತ್ತು. ಈಗ, ಕೃಷ್ಣಪ್ಪನವರೇ, ಈ ಸಂಬಂಧದಿಂದ ನಿಮ್ಮ ನಷ್ಟ ಏನು? ವಿಶ್ವೇಶ್ವರಭಟ್ಟರಿಗೆ ನಮ್ಮ ರಾವ್‌ಸಾಹೇಬರು ಏನು ಕಡಿಮೆ ? ಅವರು ಕೊಟ್ಟ ವರದಕ್ಷಿಣೆ ಮೂರು ಸಾವಿರ. ಇವರು - ಹತ್ತು ! ಏಳು ಜಾಸ್ತಿ.

ಕೃ—ಹತ್ತು ? ಹತ್ತು ? ಹೌದು, ಹೌದು, ತಿಪ್ಪಾಭಟ್ಟರು ಹೇಳಿದ್ದು ಹತ್ತು ಅಂತಲೇ.

ನಾಣಿ—(ಪ್ರವೇಶಿಸುತ್ತಾ) ಇಗೋ, ಇಲ್ಲೇ ಇದೆ. ಒಪ್ಪಿಸಿಕೊಳ್ಳಬೇಕು. (ಕೃಷ್ಣಪ್ಪನವರ ಮುಂದಿಡುವನು) ಇದು ನಿಮ್ಮ ಚೆಕ್ಕು.

ಕೃ—ಇವನು ?

ಭೀಮು—ಇವನೇ-ಏನು, ಕೃಷ್ಣಪ್ಪನವರೇ, ನಿಮ್ಮ ಗುರುತು ನೀವೇ ಮರೆತು ಬಿಟ್ಟಿರಾ ?

ನಾಣಿ—ಕ್ಷಮಿಸಬೇಕು. ನಿಮ್ಮ ವೇಷ ಹಾಕಿಕೊಳ್ಳಬೇಕು, ಒಳ್ಳೆ ಕೆಲಸಕ್ಕೆ ಸಹಾಯ ಅಂತ –

ರಾಮು—ಆಂ'? ನೀವು – ?

ಕೃ—ನೀನು... ನೀನೇನಾ ? ದೂರ, ದೂರ, ದೂರ ಇರು....ನಿನ್ನ ಸಹವಾಸಕ್ಕೆ ಇಲ್ಲಿಂದ ನನ್ನದೇ ಸಾವಿರ ನಮಸ್ಕಾರಗಳು. ಭೀಮು. ಇವನು ನನ್ನನ್ನ ಹುಚ್ಚಾಸ್ಪತ್ರೆಗೆ ಸೇರಿಸಿಬಿಡುತ್ತಿದ್ದನೋ.

ರಾಮು—ನನ್ನನ್ನು ತಾವು ಕ್ಷಮಿಸಬೇಕು....ನಿಜವಾಗಲೂ ನಮಗೆ ಗೊತ್ತಿಲ್ಲದೆ –

ಕೃ—ನನಗೆ ತಾನೇ ಏನು ? ನಾನೂ ರಾಕ್ಷಸನ ಹಾಗೆ - ನಾವು ಹಳ್ಳಿ ಕಡೆಯವರು —

ಭೀಮು—(ಚಂದ್ರೂ ಕೋಣೆ ಬಳಿ ಹೋಗಿ) ಬಾರೋ, ಹೊರಗೆ — ಶಾಂತಾದೇವಿ, ತಾವು ದಯಮಾಡಿ, ನಿಮ್ಮ ಮಾವನವರಿಗೆ ನಮಸ್ಕಾರ ...(ಚಂದ್ರು ಶಾಂತು ಪ್ರವೇಶಿಸುವರು. ಶಾಂತೂ ಕೃಷ್ಣಪ್ಪನವರ ಕಡೆ ಹೋಗುತ್ತಿರಲು) ನೋಡಿ, ಕೃಷ್ಣಪ್ಪನವರೇ, ಗೌರಿಗಿಂತ ಯಾವ ಭಾಗದಲ್ಲಿ ಕಡಿಮೆ ಹೇಳಿ –

ಕೃ—ಉ ಹು ಹು....ಕಡಿಮೆ ಎಲ್ಲಿ....? ಒಳ್ಳೆಯದು, ಒಳ್ಳೆಯದು.... ಏಳು ...ಏಳು....(ಶಾಂತೂ ನಮಸ್ಕರಿಸಿ ತಾಯಿಯ ಪಕ್ಕ ಸೇರುತ್ತಿರುವಂತೆ) ಲೋ, ಭೀಮು, ಅವಳು....ನಾನು ಅವಳಿಗೆ ಬಳೆ ವಂಕಿ, ನಾಗಮುರಿಗೆ, ಸರ ಎಲ್ಲಾ ಓದಿಸಿದೆನಂತಲ್ಲಾ–ಅವೂ–ಈ ನಾಟಕದವನ–ಥರಾ....ಗಾಜು ಪಾಜು-?

ಪುಟ್ಟ—ಒಳ್ಳೆಯ ಪಾಯಿಂಟು ! ಹೌದು....ಏನೋ, ಅವು ನಾಟಕ ದ್ದೇನೋ –

ಭೀಮು—(ನಗುತ್ತಾ) ನಾಟಕ ಎಷ್ಟು ಮಾಡಬೇಕೋ ಅಷ್ಟು ಮಾಡಿ ದರೆ ಚೆನ್ನವೇ ಹೊರತು ಅತೀ ಮಾಡಿದರೆ ಕೆಟ್ಟು ಹೋಗುತ್ತೆ. ಅವು ನಾಟಕದ್ದಲ್ಲ -

ಕೃ - (ಚಂದ್ರೂಗೆ) ಅಯೋಗ್ಯ, ಇವೆಲ್ಲಾ ಕೊಂಡುಕೊಳ್ಳುವಷ್ಟು ದುಡ್ಡೆಲ್ಲಿತ್ತೋ ನಿನ್ನ ಹತ್ತಿರ ? ತೀರಿಸೋಕ್ಕೆ ಮುದುಕ ಇದ್ದಾನೆ ಅಂತ ಸಾಲ – ?

ಚಂದ್ರು—ಇಲ್ಲಪ್ಪಾ, ಅವೆಲ್ಲಾ ಭೀಮೂನೇ ತನ್ನ ಸ್ವಂತ ದುಡ್ಡಿನಿಂದ - ನನಗೋಸ್ಕರ –

ಭೀಮು—ಲೋ -

ಪುಟ್ಟ—ಭೀಮೂ - ?

ಕೃ—ಏನೇನು ನಿನಗೋಸ್ಕರ– ಇವನು–ಇವನ ಸ್ವಂತ ದುಡ್ಡಿನಿಂದ - ?

ಭೀಮು—ಕೃಷ್ಣಪ್ಪನವರೇ, ನನ್ನ ಸ್ವಂತ ದುಡ್ಡು ಅಂದರೆ ಏನು

ಅರ್ಥ ? ನಮ್ಮ ಅಪ್ಪ ಸಂಪಾದಿಸಿ ನಾನು ಸ್ವತಂತ್ರವಾಗಿ ಯಾತಕ್ಕೆ ಬೇಕಾದರೂ ಖರ್ಚು ಮಾಡಲಿ ಅಂತ ಬಿಟ್ಟು ಹೋದ ದುಡ್ಡು. ನನ್ನ ಸ್ನೇಹಿತನಿಗೋಸ್ಕರ–ಒಂದಷ್ಟು–ಅಥವಾ, ಹೋಗಲಿ ಹಾಗೆ ಬೇಡ, ನನ್ನ ನಾದಿನಿಗೆ ಮದುವೆಯ ಉಡುಗೊರೆ ಅಂತ ಇಟ್ಟುಕೊಳ್ಳಿ.

ಕೃ—ನಾದಿನಿ ? ಯಾವ ನಾದಿನಿಯೋ ? ನಿನಗೆ ಯಾವ – ?

ಪುಟ್ಟ—ಇವನಿಗೇ....ಇವನ ನಾದಿನಿಯೇ ಅಲ್ಲವೇ ನಿಮ್ಮ ಸೊಸೆ ? ·

ಕೃ— ಏನೂ - ?

ಪುಟ್ಟ --ಹೂಂದ್ರೇ....ನಿಮ್ಮ ಮಗ ಇವನ ಹೆಂಡತಿಯ ತಂಗಿಯ ಗಂಡ. ನೀವು ತೋರಿಸಿದ ಆ ದೊಡ್ಡ ಲಗ್ನಪತ್ರಿಕೆಯಲ್ಲಿ - ನೋಡಿ....

ಕೃ—(ನೋಡಿ) ಆಂ ? ಹೌದೇ ! ಹೂಂ, ಇಲ್ಲಿದೆಯಲ್ಲಾ ! ನಾನು ನನ್ನ ಕೋಪದಲ್ಲಿ ಪೂರ್ತಿ ನೋಡಲೇ ಇಲ್ಲ. ಓಹೋ, ಓಹೋ, ಹೀಗೆ.... ಹೀಗೆ....ಈಗ....ಈಗ....ಈ ನಾಟಕ....ಆಟ....ಪೂರ್ತಿ ಅರ್ಥವಾಯಿತು.... ಆದರೂ, ರಾವ್‌ಸಾಹೇಬರೇ, ಈಗ ಪೂ-ರ್ತಿ ಅರ್ಥವಾಯಿತು....ಭೀಮು, ನೀನು ಅಷ್ಟು ಉದ್ದದ ಉಪನ್ಯಾಸ ಕೊಟ್ಟೆಯಲ್ಲಾ....ಅದಕ್ಕಿಂತ ಈ ಸ್ನೇಹಕ್ಕೆ ನೀನು ಮಾಡಿದ ಕೆಲಸ ಮೆಚ್ಚಿದೆ. ಯಾರು ಹೀಗೆ ಹತ್ತು ಇಪ್ಪತ್ತು ಸಾವಿರ ಸ್ನೇಹಿತನಿಗೆ ಜೇಬು ಬಿಚ್ಚುತ್ತಾರೋ?....ಹೌದೂ....(ಅತ್ತಿತ್ತ ನೋಡಿ)ಏನೋ, ಅವಳನ್ನ ನಿನ್ನ ನಾದಿನಿ ಅಂದಿ. ಇಲ್ಲಿ ಅಷ್ಟು ಹೊತ್ತಿನಿಂದ ಒಂದು ಭಾರಿ ಕುರುಕ್ಷೇತ್ರವೇ ನಡೆಸುತ್ತಿದ್ದೇವೆ....ಆದರೂ ನಿನ್ನ ಮಹಾರಾಣಿ ಸುಳುವೇ ಇಲ್ಲ ? ಎಲ್ಲೋ ? (ಸರೋಜ ಪ್ರವೇಶಿಸಿ ಯಾರನ್ನೂ ನೋಡದೆ ಬೀದಿಯತ್ತ ಹೋಗುತ್ತಿರಲು)

ಭೀಮು—ಇದು ನಾಟಕ. ನೀವು ಕ್ಯೂ ವರ್ಡ್ ಕೊಟ್ಟಿರಿ–ನಾಯಕಿ ಪ್ರವೇಶಿಸಿದಳು. ಸರೋಜ ! (ಸರೋಜ ಹಿಂತಿರುಗಿ, ನಿಂತು, ಅಲಕ್ಷ್ಯಯಿಂದ ನೋಡಲು) ಅಲ್ಲ, ನಾವಿಲ್ಲಿ ಇಷ್ಟು ಜನ ಇರುವಾಗ....ಓ, ಸಾರಿ, ಎಕ್ಸ್‌ಕ್ಯೂಸ್ ಮೀ, ನೀನು ಮಾಡಿದ್ದು ಸರಿ, ಹೋಗು - (ಇತರರಿಗೆ) ಅದು ಹೀಗೆ. ಅವಳು

ಗಾಂಧಾರಿ ತರಹ. ನೋಡಿದರೆ ಗಂಡನ್ನ ನೋಡಬೇಕು. ಇಲ್ಲದಿದ್ದರೆ, ಹೀಗೇ ನೇರ –

ಕೃ—ಸುಮ್ಮನಿರೋ, ಅವಳು ಗಾಂಧಾರಿ, ನೀನು ಧೃತರಾಷ್ಟ್ರ ! -ಲೋ, ನಮಗೆ ಕಣ್ಣು ಕಣ್ಣು ಬಿಡಿಸಿದ ಧೃತರಾಷ್ಟ್ರ – ಸುಮ್ಮನಿರೋ – (ಎದ್ದು ಹೋಗಿ ತಲೆಯಿಂದ ಕಾಲವರೆಗೂ ನೋಡಿ ಹಿಂತಿರುಗುತ್ತಾ) ಶಹಬ್ಬಾಸ್, ಶಹಬ್ಬಾಸ್ (ಕೂತು) ಬಂಗಾರ, ಬಂಗಾರದ ಹಾಗಿದಾಳೆ ಹುಡುಗಿ.

ಸರು ನೀವು ಓತಿಕೇತದ ಹಾಗೆ ತಲೆ ಆಡಿಸುತ್ತಾ ನನ್ನ ರೂಪವನ್ನ ಮೆಚ್ಚಬೇಕಾಗಿಲ್ಲ. ಸುಮ್ಮನೆ ಕೂತುಕೊಳ್ಳಿ.

ಕೃ—ಅಂ - ?

ಭೀಮು—ಹಾಂ, ಹಾಂ, ಹಾಂ – ಅವರು ಈಗ ಯಾಕೆ ಹೀಗೆ ಹೇಳಿದರು ಅನ್ನುತ್ತೀ, ಸರೋಜ ? ಇವರು ನಿನ್ನ ತಂಗಿಯ ನಿಜವಾದ ಮಾವನವರು - ಈಗತಾನೇ –

ಸರು – ಗೊತ್ತು.

ಕೃ—ಅಂ ? ಗೊತ್ತು ? ಎಲ್ಲಿ, ಇವರಿಗೇ ಯಾರಿಗೂ -

ಭೀಮು – ನನ್ನ ಹೆಂಡತಿ ದಿವ್ಯ ಜ್ಞಾನಿ....ದಿವ್ಯ ದೃಷ್ಟಿ ಇರುವವಳು. ಆ ಬಾಗಿಲು ಕಿಂಡಿ – ಸರೋಜ, ನೀನು ಎಲ್ಲಿ ಹೊರಟಿದ್ದೆಯೋ ಏನೋ – ನಿನ್ನ ಪಾಡಿಗೆ ನೀನು ಹೋಗು – ನಮಗೆ ಬೇರೆ ಕೆಲಸವಿಲ್ಲ, ಮಾತಾಡಿಕೊಳ್ಳುತ್ತೀವಿ. ಏನ್, ಕೃಷ್ಣಪ್ಪನವರೇ, ನನ್ನ ಹೆಂಡತಿ ಬಿ. ಎ. ಪ್ಯಾಸು ಮಾಡಿರುವ ಪದವೀಧರೆ ...ನೀವು ಹಿರಿಯರು, ನಿಮಗೆ ಗೌರವದಿಂದ ನಮಸ್ಕಾರ ಮಾಡಬೇಕು ಅನ್ನುವ ಮರ್ಯಾದೆ ಅವಳಿಗೆ ಗೊತ್ತಿಲ್ಲ ಅಂದುಕೊಳ್ಳಬೇಡಿ. ಈ ಜೋಯಿಸರ ಹಿಂಸೆಯಲ್ಲಿ –

ಪುಟ್ಟ—ಅಯ್ಯೋ, ನಾನೇನು – ದೇವರೇ ಅಂತ ತೆಪ್ಪನೆ ಕೂತಿದ್ದೀನಿ-

ಭೀಮು—ಈಗ ಕೂತಿದ್ದೀರಿ. ಆಗ ? (ಕೃಷ್ಣಪ್ಪನವರಿಗೆ) ಆ ಮದುವೆ ಸಮಾರಂಭದಲ್ಲಿ, "ಏಳು", "ಕೂತುಕೋ", "ಆ ಕಡೆ ನಿಂತುಕೋ", "ಈ ಕಡೆ ಬಾ", "ಪ್ರದಕ್ಷಿಣೆ ಸುತ್ತು", "ನಮಸ್ಕಾರ ಹಾಕು" ಅಂತ ಅವಳನ್ನು

ಗೋಳಿಟ್ಟು, ಅವಳಿಗೆ ಮೈ ಕೈ ಎಲ್ಲಾ ಒಂದು ಥರಾ ಇಂಫ್ಲ್ಯುಯೆಂಜಾ –

ಸರು – ನಾನ್ಸೆನ್ಸ್ –

ಭೀಮು—ಆಂ ? ನೀನಿನ್ನೂ ಹೋಗಿಲ್ಲವಾ ?....ಏನೋ ನಾನ್ಸೆನ್ಸ್ ಅಂದಿ - ?

ಸರು—ನೀವು ಹೇಳಿದಿರಲ್ಲಾ, ಒಂದು ಥರಾ ಇಂಫ್ಲ್ಯುಯೆಂಜಾ ಅಂತ - ಅದು, ನನಗೆ ಇಂಫ್ಲ್ಯುಯೆಂಜಾನೂ ಇಲ್ಲ, ರ್‍ಯುಮಾಟಿಸಮ್ಮೂ ಇಲ್ಲ. ನಿಮ್ಮ ಸುಳ್ಳು ಡಿಫೆನ್ಸುಗಳು ಇಲ್ಲೇನೂ ಬೇಕಿಲ್ಲ.

ಸೀತ- ಎಲ್ಲಿ ಹೊರಟೆಯೋ ಇಷ್ಟು ಹೊತ್ತಿನಲ್ಲಿ ? ಒಬ್ಬಳೇನೇ ?

ಸರು – ಪಿಕ್ಚರ್‍ರಿಗೆ, ರೈನ್‌ಬೋ ಥಿಯೇಟರ್ರು. "ಹನಿಮೂನ್" ಪಿಕ್ಚರ್ರು. ಹೋಗುವುದು ನಾನೊಬ್ಬಳೇ ಅಲ್ಲ, ನನ್ನ ಸ್ನೇಹಿತರ ಜೊತೆಗೆ. ವಿವರ ಸಾಕೋ, ಇನ್ನೂ ಬೇಕೋ ?

ಭೀಮು - ಬೇಕಾದಷ್ಟು. ಆದರೆ ನೀನು ಹೇಳಿದ್ದು ಅವರಿಗೆ ಸರಿಯಾಗಿ ಅರ್ಥವಾಗಿರಲಾರದು. (ಇತರರಿಗೆ) ಇವಳು "ಸ್ನೇಹಿತರ" ಜೊತೆಗೆ ಅಂದಳಲ್ಲ, ಸ್ನೇಹಿತರು ಅಂದರೆ ಯಾರು ? ನಾನೇ ! ಗಂಡನ ಜೊತೆಯಲ್ಲಿ ಅಂತ ಹೇಳೊಕ್ಕೆ ನಾಚಿಕೆ ಪಟ್ಟು -

ಸರು—ಸುಳ್ಳು –

ಭೀಮು ನಿನ್ನ ಸ್ವೀಟ್ ಮೌತು ಸುಳ್ಳು ಹೇಳುತ್ತೆಯಾ, ಸರೋಜ ? (ಇತರರಿಗೆ) ಅವಳು ಹೇಳಿದ್ದು ಸುಳ್ಳು. ನಾವು ಬೆಳಗ್ಗೆ ಕಾಫಿ ತೊಗೊಳ್ಳುತ್ತಿದ್ದಾಗಲೇ ಪ್ರೋಗ್ರಾಂ ಹಾಕಿದ್ದೆವು.

ಸರು—ನೆವರ್, ನೆವರ್. ನೆವರ್, ನೆವರ್, ನೆವರ್ -

ಭೀಮು—ಅಭಿನಯ ಅಂದರೆ ಇದು ! (ಇತರರಿಗೆ) ಮದುವೆಯಾಗಿನ್ನೂ ಮೂರು ದಿನ ಆಗಿಲ್ಲ. ಆಗಲೇ ಗಂಡನ ಜೊತೆಗೆ ಸಿನೀಮಾಕ್ಕೆ ಹಗಲು ಹೊತ್ತೇ ಹೀಗೆ ಹೊರಟರೆ, ನೀವು ಏನಂದುಕೊಳ್ಳುತ್ತೀರೋ ಅಂತ ಹೆದರುತ್ತಾಳೆ, ಸಾಧ್ವಿ....

ಸರು—ಸಾಧ್ವಿ ಯೂ ಇಲ್ಲ, ವಿಶ್ವಪರ್ನಾಟಕವೂ ಇಲ್ಲ. ತಾಯಿನಾಡು.

ಪ್ರಜಾವಾಣಿ, ಪರ್ವತವಾಣಿ ಯಾವುದೂ ಇಲ್ಲ. ನಿಮ್ಮ ಈ ಜಾಣತನಕ್ಕೆಲ್ಲಾ ನಾನು ಬಗ್ಗೊಲ್ಲ....ನಾನು ಬರೊಲ್ಲ, ನಾನು ಬರೊಲ್ಲ, ನಾನು ಬರೊಲ್ಲ. (ಕೂಡುವಳು)

ಕೃ— ಲೋ, ಭೀಮೂ –

ಸೀತ—ಯಾಕೇ, ಹೋಗಬಾರದೇನೇ, ಸರೋಜ ?

ಸರು—ನಾನು ಹೋಗೊಲ್ಲ. ಇಲ್ಲಿ ಮನೆಯಲ್ಲೇ ಈ ಲಕ್ಷಣ. ಹೊರಗೆ ಬೀದಿಯಲ್ಲಿ ಈ ಕಾಡುಮನುಷ್ಯರ ಜೊತೆಯಲ್ಲಿ – ?

ಇತರರು—ಲೇ, ಸರೋಜ, ಅಯ್ಯಯ್ಯೋ, ಭೀಮೂ -

ಭೀಮೂ—ಯಾಕೆ ? ಯಾಕೆ ? ಏನಾಯಿತು ? ನಿಮಗೆ ಇದು ವಿಚಿತ್ರ ವಾಗಿ ಕಾಣಬಹುದು. ನಮ್ಮ ಪ್ರೀತಿ, ವಿಚಿತ್ರ ರೀತಿ. ಇವಳು ನನ್ನನ್ನು "ಕಾಡುಮನುಷ್ಯ" ಅನ್ನುತ್ತಾಳೆ; ನಾನು ಇವಳನ್ನ "ಕಾಡುಬೆಕ್ಕು" ಅನ್ನುತ್ತೇನೆ!

ಸರು—ಏನೂ?

ಶಾಂತ—ಅಮ್ಮಾ!

ಸೀತ—ಸರೋಜ!

ಭೀಮು—ನೀನು ನನ್ನ ಹೀಗೆ ನುಂಗಬೇಡ, ಅವರೂ ತಿಳಿದುಕೊಳ್ಳಲಿ ಪಾಪ ಗಂಡ ಹೆಂಡತಿ ಹೇಗಿರಬೇಕು ಅನ್ನುವುದನ್ನ. ನಮ್ಮ ಅಂಡರ್‌–ಸ್ಟ್ಯಾಂಡಿಂಗು, ಲವ್ವಿನ್ನ ನೋಡಿ ಕಾಪಿ ಮಾಡಲಿ. (ಇತರರಿಗೆ) ನೋಡಿ ನಾವಿಬ್ಬರೂ ಒಂದು ತರಹಾ ಒರಟು ಸ್ವಭಾವದವರು, ನಮಗೆ ನಯ, ನೈಸಿಟಿ—ತುಂಬ ದೂರ. ನಾವು ಈಗಿನ ಕಾಲದವರ ಹಾಗೆ ಡಿಯರು, ಡಿಯರೆಸ್ಟು, ಡಕ್ಕು, ಡವ್ವು, ಜೇನುತುಪ್ಪ, ಕೊಬ್ಬರಿಮಿಠಾಯಿ, ಸಕ್ಕರೆ ಅಚ್ಚು ಅಂತಲೂ ಕೂಗೊಲ್ಲ, ನಿಮ್ಮ ಕಾಲದವರ ಹಾಗೆ ಎನ್ನರಿಸಿ, ಚಿನ್ನರಸಿ, ಮುತ್ತಿನ ಚೆಂಡೇ, ಮಲ್ಲಿಗೆ ಆರಳೇ ಅಂತಲೂ ಕೂಗೊಲ್ಲ. (ಸರೋಜಳಿಗೆ) ನಮ್ಮದೆಲ್ಲಾ ವಯಾ ಮೀಡಿಯಾ, ಅಲ್ಲಾ, ಸರೋಜ ? ಕಂ ಆನ್, ಏಳು, ಹೋಗೋಣ.

ಸರು—ನಾನು ಬರೊಲ್ಲ.

ಭೀಮು—ಸರಿ. ಹಾಗೆ ನಿನ್ನ ಮನಸ್ಸು ಬದಲಾಯಿಸಿ, ಹೋಗುವುದು ಬೇಡ, ಮನೆಯಲ್ಲೇ ಇರೋಣ ಅನ್ನಿಸಿದ್ದರೆ, ನಾನು ಯಾಕೆ ಬಲವಂತ ಮಾಡಿ ಎಳೆದುಕೊಂಡು ಹೋಗಲಿ ? ಆದರೂ ಯಾಕೆ ಒಂದಕ್ಕೆ ಎರಡು ಸರ್ತಿ ಅಂದೆ ಅಂದರೆ —

ಸರು—ಹುಂ ?

ಭೀಮು ನಾವು ಬೆಂಗಳೂರಿನಲ್ಲಿ ಇರುವುದು ಇದೇ ಕೊನೆ ದಿನವಲ್ಲಾ ರಾತ್ರಿ ನಮ್ಮ ಹಳ್ಳಿಗೆ ಹೊರಟುಬಿಡುತ್ತೇವಲ್ಲಾ, ಈಗ ಒಂದು ಸಿನಿಮಾ ನೋಡಿಕೊಂಡು -

ಸರು—ಏನು ? ಕೊನೆ ದಿನ ? ರಾತ್ರಿ ಹೊರಡುವುದು ?

ಭೀಮು—ಹುಂ. ಯಾಕೆ, ನಿನ್ನ ಟ್ರಂಕು, ಹಾಸಿಗೆ, ವೀಣೆ ಎಲ್ಲಾ ಪ್ಯಾಕು ಮಾಡಿಲ್ಲವಾ ಇನ್ನೂ ?

ಸೀತ—ಅಲ್ಲ, ನೀವು –

ಭೀಮು—ನಾನಲ್ಲ. ಅವಳೇ....ಅವಳೇ ನೆನ್ನೆ ರಾತ್ರಿ ಗೋಳಿಟ್ಟು ಬಿಟ್ಟಳು ! ಅವಳಿಗೆ ಇಲ್ಲಿರೊಕ್ಕೆ ಇಷ್ಟವಿಲ್ಲ, ತಕ್ಷಣ ಹೊರಟು ಬಿಡೋಣ -

ಸರು—ಇಲ್ಲಮ್ಮಾ, ನಾನು ಹಾಗೆ ಹೇಳಲಿಲ್ಲ -

ಪುಟ್ಟ—ಲೋ. ಭೀಮೂ –

ಕೃ— ಏನೋ, ಏನೋ – ?

ಭೀಮು—"ನಾನು ಹೇಳಿದೆ" ಅಂತ ಅವಳು ಇಲ್ಲಿ ನಿಮ್ಮೆಲ್ಲರ ಮುಂದೆ ಒಪ್ಪಿಕೊಳ್ಳುತ್ತಾಳೆಯೇ ? ನಾಚಿಕೆ. "ನಾನು ಬರೊಲ್ಲ ಅನ್ನುತ್ತೀನಿ, ನೀವು ಬಲವಂತಮಾಡಿ ಕರೆದುಕೊಂಡು ಹೋಗಿ" ಅಂತ ಬಲವಂತ ಮಾಡಿದಳು.

ಸರು—ಇಲ್ಲಮ್ಮಾ, ನಾನು ಹೇಳಲಿಲ್ಲ -

ಪುಟ್ಟ—ಅವಳು ಹೇಳಿರಲಿ, ಬಿಟ್ಟಿರಲಿ, ಹೀಗೆ -

ಭೀಮು—ನಾನೇನು ಮಾಡಲಿ, ಜೋಯಿಸರೇ ? ಮನೆ ಬಿಟ್ಟು ವಾರಕ್ಕೆ ಬಂತು. ಬೆಳೆ ಕಾಲ. ಯಾರಿಲ್ಲ ಅಲ್ಲಿ. ಇಲ್ಲಿ ಬಂದ ಕೆಲಸ ಆಯಿತು.

ನಾನು ಹೋಗಲೇಬೇಕು. ನನ್ನ ಯೋಗಕ್ಷೇಮ ಹಾಗಿರಲಿ. ನನ್ನ ಹೆಂಡತಿಯನ್ನ, ನಾನು ಬಂದಾಗಿನಿಂದ ನೋಡುತ್ತಾ ಇದ್ದೇನೆ, ಒಬ್ಬರಲ್ಲ ಒಬ್ಬರು ಚಿತ್ರಹಿಂಸೆ ಮಾಡುತ್ತಲೇ ಇದ್ದೀರಿ. ಇದುವರೆಗೂ. ತೀರದು, ಸಹಿಸಿ ಅನುಭವಿಸುತ್ತಾ ಬಂದಳು. ಈಗ ನನ್ನ ಹೆಂಡತಿಯಾದ ಮೇಲೂ ಅವಳು ಕಷ್ಟಪಡುವುದನ್ನು ನಾನು ಸಹಿಸಲಾರೆ. ನನ್ನ ಜೊತೆಗೆ ತನ್ನ ಸಾಮ್ರಾಜ್ಯಕ್ಕೆ ಬಂದು ಸ್ವೇಚ್ಛೆಯಾಗಿ ಕಾರುಬಾರು ಮಾಡಿಕೊಂಡಿರುತ್ತಾಳೆ.

ಪುಟ್ಟಿ—ಇರಲೋ. ಯಾರು ಬೇಡ ಅಂದರು ? ಹೊರಡೋಕ್ಕೆ ದಿನಗಿನ ನೋಡಿ –

ಭೀಮು—ಮನ, ಮನ ಮುಖ್ಯ, ದಿನ ಏನು ಮಾಡತ್ತೆ ?

ರಾಮು –ಅದು ಸರಿ, ಆದರೂ ಇನ್ನೊಂದು ವಾರವಾದರೂ ಇದ್ದು –

ಭೀಮು—ಇಲ್ಲ, ಸಾಧ್ಯವಿಲ್ಲ.

ಚಂದ್ರು– ಏನೋ, ನಿನಗೆ ಅಂಥ ಕೊಳ್ಳೆ ಹೋಗುವುದು ಅಲ್ಲಿ - ?

ಭೀಮು—ಹೋಗತ್ತೆ –

ಸೀತ—ಅವಳಿಗೂ, ಪಾಪ, ಇನ್ನೂ ಹೊಸದು –

ಭೀಮು –ಇ–ಲ್ಲಾ ! ಸರೋಜ, ನೋಡಿದೆಯಾ ? ಇವರೆಲ್ಲಾ ಒತೂರಿ ಮಾಡಿ, ಒಟ್ಟಿಗೆ ಸೇರಿ ನಮ್ಮನ್ನ ರೌಂಡ್ 'ಆಫ್' ಮಾಡಿ, ಕಾರ್ನರ್ ಮಾಡಬೇಕು ಅಂತ ಇರುವ ಹಾಗಿದೆ. ಅವರು ಯಾರು ತಡೆ ಹಾಕಿದರೂ, ನಾನಿದ್ದೇನೆ ಹೆದರಬೇಡ –

ಸರು—ಇಲ್ಲಮ್ಮಾ, ನಾನು ಖಂಡಿತ ಅವರ ಜೊತೆಯಲ್ಲಿ -

ಭೀಮು— – "ಹೋಗುತ್ತೇನೆ" ಅಂತ ಅವರ ಮುಂದೆ ಹೇಳಿ ಏನು ಪ್ರಯೋಜನ ? ಅವರು ಕೇಳೊಲ್ಲ. ನಾನಿದ್ದೇನಿಲ್ಲಿ, ನಿನ್ನ ಗಂಡ, ನಿನ್ನಿಷ್ಟ ನಡೆಸೋಕ್ಕೆ. .(ಇತರರಿಗೆ) ಈಗ ಇವಳು, ಈ ಸರೋಜ, ನನ್ನ ಹೆಂಡತಿ, ನನ್ನ ಪಂಚಪ್ರಾಣಗಳು, ನನ್ನ ಪಂಚಭೂತಗಳು, ನನ್ನ ಅರಿಷಡ್ವರ್ಗಗಳು, ನನ್ನ ಆಕಾಶ, ನನ್ನ ಸೂರ್ಯ, ನನ್ನ ಚಂದ್ರು, ನಾಲ್ಕು ದಿಕ್ಕುಗಳು, ನವಗ್ರಹಗಳು, ಹದಿನಾಲ್ಕು ಲೋಕಗಳು, ಇಪ್ಪತ್ತೈದು ನಾಲ್ಕರ ಅರವತ್ತು ನಕ್ಷತ್ರಗಳು,

ಒಟ್ಟಿನಲ್ಲಿ ನನ್ನ ವಿಶಿಷ್ಟ ಸಂಪತ್ತೂ ವಿಪತ್ತೂ ಇವಳೇ ! ಇಂದಿನಿಂದ ಮುಂದೆ ಎಂದೆಂದಿಗೂ ಲಕ್ಷ್ಮೀನಾರಾಯಣರ ಹಾಗೆ, ಪಾರ್ವತಿ ಪರಮೇಶ್ವರರ ಹಾಗೆ ನಾವು ಒಟ್ಟಿಗೇ ಇದ್ದೇವೆ. ಧೈರ್ಯವಿದ್ದವರು ನಮ್ಮನ್ನು ಬೇರೆ ಮಾಡೋಕ್ಕೆ ಪ್ರಯತ್ನಿಸಲಿ, ಅದರ ಫಲ ಅನುಭವಿಸಲಿ, ಬಾ, ಸರೋಜ, ನಾನಿದ್ದೇನೆ. ಬಾ –

(ಎಲ್ಲರೂ ಮೂಕರಾಗಿ ನೋಡುತ್ತಿರಲು, ಬಲವಂತದಿಂದ, ತನ್ನ ತೋಳನ್ನು ಅವಳ ಸೊಂಟಕ್ಕೆ ಸುತ್ತಿ, ಎಳೆದು ತನ್ನ ಕೋಣೆಗೆ ಒಯ್ಯುವನು)

— ತೆರೆ —

ದೃಶ್ಯ ೧೧

(ಕತ್ತಲು. ಕಾಡು ದಾರಿ. ಭೀಮೂ ಹಳ್ಳಿಯ ಸಮೀಪ. ಸಿದ್ದ ಮತ್ತು ಹೈದರ್ ಪ್ರವೇಶಿಸುವರು)

ಸಿದ್ದ—ಐದ್ರುಪ್ಪಾ, ನಮ್ಮ ಸಾಯೀಬ್ರು -

ಹೈದ—ಹುಂ ?

ಸಿದ್ದ—"ಟೇಸನ್ಸ್ಕೆ ಬನ್ನಿ, ಅಂಗೇ ಬನ್ನಿ, ಮೋಟರ್ ಬ್ಯಾಡ" ಅಂತ ತಂತಿ ಕೊಟ್ರುಲ್ಲಾ, ಯಾಕಿದ್ದಾತು ?

ಹೈದ—ನನ್ಗೆ ಏನೂ ಗೊತ್ತಿದೆ ? ನಮ್ದೂ ಸಾಮೀದೂ ಮತ್ಲಬ್ ನನ್ಗೆ ಗೊತ್ತಾಗ್ತಾದೇ ?

ಸಿದ್ದ—ಅಂಗಲ್ಲಾ....ಯಾಕ್ನಿಂಗ್ ಜ್ಞಪ್ತಿ ಇಲ್ವಾ – ನಾನು ನನ್ನ ಸಿದ್ದೀನ ಒಸ್ದಾಗಿ ಲಗ್ನ ಆಗಿ ಎಂಗ್ ಕರ್ಕೊಂಡ್ಬಂದೆ ! ಎಲ್ಡೆತ್ತಿನ ಗಾಡಿ, ಮ್ಯಾಕೆರಡು ಕುರ್ಜೀ, ಒಂದ್ರಾಕೆ ನಾನು, ಇನ್ನೊಂದ್ರಾಕೆ ಸಿದ್ದೀ, ಆರ ಆಕ್ಕೊಂಡ್ – ತುರಾಯಿ ಇಡ್ಕೊಂಡ್ - ಓಲ್ಗ, ಬ್ಯಾಂಡು - ಬಾಣ – ಬುರ್ಸು - ಎಂಗೆ.–

ಹೈದ - ಏಯ್, ಏಯ್, ನಿನ್ದು ಪುರಾನ ಗಾಡಿ ಓಡೀಸ್ತಾ ಇರೂ;

ಅಲ್ಲಿ ರೇಲ್ ಗಾಡಿ ಟೇಸನ್ಗೆ ಬಂದೀ – ಸಾಮೀ, ನಮ್ದು ಬುಲ್ಡೆ ಕಾಯ್ನೀ-

ಸಿದ್ದ—ಒದೌದು. ನಡಿ. ಬರಿ ಬರೀನ ಓಗೋನ....ಇಂಗಾಸಿ, ಕಾಲ್ದಾ ರ್ರ್ಯಾಕೆ—ನಾನು....ನಾನು ಎಂಗೆ ಕರ್‍ಕೊಂಡ್ಬಂದೆ – ಇವ್ರು ಎಂಗೆ – ನಮ್ಕೀ ಕಣ್ಣು ಕಾಣಾಕಿಲ್ಲ – ಆಯಮ್ಮ ಒಸ್ದಾಗಿ ಬತ್ತಾ ಔರೆ – ನಡೀಸ್ಕೊಂಡು – ಬತ್ತೌರಾ -

ಹೈದ—ಅದು ನನ್ಗೆ ನಿನ್ಗೆ ಯಾತ್ಕೀsಪ್ಪಾ ? ಅವರ್ದು ಬೀಬೀ, ಅವರ್ದೂ ಖುಷೀ....ನಡೀಸ್ಕೊಂಡಿಯಾರಾ ಬರ್‍ಲಿ, ಓಡಿಸ್ಕೊಂಡೀಯಾರಾ ಬರ್‍ಲಿ ರೋಟಮ್ಯಾಕೆ ಉರ್ಲ್ಲಾಡೀಸ್ಕೊಂಡೀಯಾರಾ ಬರ್‍ಲಿ - ನಮ್ಗ ಯಾತ್ಕೀsಪ್ಪಾ? ....ಶೀದಾ – .

ಸಿದ್ದ—ಆಂ ?

ಹೈದ—ಶೀದಾ, ನೀನು ಗಾಡೀ ಒಲ್ಗೆ ಅಂಗ್ ಬಂದೀ – ನಾನು ? ನಾನೂ, ನಮ್ದೂ ಬೀಬೀ, ಗೋಡಾ ಊಪರ್ – ಕಾಲಾ ಗೋಡಾ –

ಸಿದ್ದ—ಇಕ - ಈಕ ನೀನು ಸುರು ಮಾಡ್ದಾ ? ರೇಲ್, ರೇಲ್ –

ಹೈದ—ಔದೌದು....

ಸಿದ್ದ—ಬಾ ಮತ್ತಿಗಾ –

(ನಿಷ್ಕ್ರಮಿಸುವರು)

ದೃಶ್ಯ ೧೨

(ಸ್ವಲ್ಪ ಹೊತ್ತಿನ ನಂತರ. ಅದೇ ದಾರಿ. ಭೀಮು, ಸರೋಜ ಪ್ರವೇಶಿಸುವರು)

ಸರು—ಏನಿದೀ ಹಾಳು ರಸ್ತೆ, ಕತ್ತಲು, ಕಣ್ಣೇ ಕಾಣೊಲ್ಲ ?

ಭೀಮು– ಹೆಜ್ಜೆಗೊಂದು ದೀಪ ಇರೋಕ್ಕೆ ಇದು ಬೆಂಗಳೂರಲ್ಲ. ಭೀಮನಗೊಂದಿ. ಹಳ್ಳಿ. ನೀನು ನನ್ನ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಬಾ, ಕಷ್ಟವಾಗೊಲ್ಲ.

ಸರು– ಇನ್ನೂ ಎಷ್ಟು ದೂರ ಹೋಗಬೇಕು ನಿಮ್ಮ ಮನೆ ಸೇರೋಕ್ಕೆ?

ಭೀಮು—....(ನಿಮ್ಮ ಮನೆ ಅಂದಳು !) ಅಷ್ಟೇನೂ ದೂರ ಇಲ್ಲ. ಈಗ ಎರಡು ಮೈಲಿ ಬಂದಿದ್ದೇವೆ. ಇನ್ನು ಎರಡು ಮೈಲಿ ನಡೆದರಾಯಿತು,

ಸರು – ಏನು ? ಇನ್ನೂ ಈಗ ನಾವು ಬಂದಷ್ಟು ದೂರ ನಡೆಯ ಬೇಕಾ ?....ಊ ಫ ...ಶ್....ನನ್ನಿಂದ ಸಾಧ್ಯವಿಲ್ಲ –

ಭೀಮು—ಯಾಕೆ ?....ತುಂಬ....ಆಯಾಸ - ?

ಸರು – ಆಗದೆ ಇರುತ್ತೇನು ? ಬೆಳಗ್ಗೆ ಅಷ್ಟು ಹೊತ್ತಿಗೇ ಊರು ಬಿಟ್ಟದ್ದು ; ಆ ಡೈನಿಂಗ್ ಕಾರ್ ಊಟ ದೇವ್ರುಗಳಿಗೇ ಪ್ರೀತಿ ; ಹನ್ನೆರಡು ಗಂಟೆ ಪ್ರಯಾಣ. ಆಯಾಸ ಆಗೇ ಆಗತ್ತೆ ಅಂತ –

ಭೀಮು ಹೌದು. ಅದನ್ನ ಯೋಚನೆ ಮಾಡಬಹುದಾಗಿತ್ತು....ಏನು ಮಾಡುವುದೀವಾಗಾ - ?

ಸರು—ಇನ್ನೂ ಎಳೆಯಿರಿ ರಾಗವನ್ನ "ಏನು ಮಾಡುವುದೀವಾಗಾ" ಅಂತ ! ಮನೆಯಲ್ಲಿ ಎರಡು ಕಾರಿವೆ ಅಂತ ಅವತ್ತು ಕೊಚ್ಚಿಕೊಂಡಿರಿ. ಸ್ಟೇಶನ್ನಿಗೆ ಒಂದನ್ನಾದರೂ ತರಿಸಬೇಕು ಅಂತ ಹೊಳೆಯಲಿಲ್ಲವೇನೋ ತಲೆಗೆ ! ಹೇಗೆ ಹೊಳೆದೀತು, ಗಾದೆಗೆ ಸರಿಯಾಗೆ ಇದೆ.

ಭೀಮು – ಗಾದೆ ?

ಸರು—ಹೂಂ. ಮೈ ಬೆಳೆಯುತ್ತಾ ಹೋದಷ್ಟೂ ಮಿದುಳು ಬಡವಾ ಗುತ್ತಾ ಬರುತ್ತೆ ಅಂತ –

ಭೀಮು—ಓ, ಅದೇ ? ಹಾಗಲ್ಲ, ಬೇಕು ಅಂದಿದ್ದರೆ ಸ್ಟೇಶನ್ನಿಗೆ ಕಾರು ತರಿಸೋಕ್ಕೆ ಆಗುತ್ತಿರಲಿಲ್ಲ ಅಂತ ಇದ್ದೀಯೇನು ?

ಸರು – ಆಗುತ್ತಿತ್ತು. ಆದರೆ ಹಾಗೆ ಮಾಡಿಸುವ ಇಂಟೆಲಿಜೆನ್ಸ್ ಇಂಜೆಕ್ಟ್ ಮಾಡೋಕ್ಕೆ ನಾನು ಮರೆತ ಅಷ್ಟೆ.

ಭೀಮು—ನೋ, ನೋ, ನೋ, ನೋ, ನೋ. ನನಗೆ ಯಾವ ಇಂಜೆ ಕ್ಷನ್ನೂ ಬೇಕಿರಲಿಲ್ಲ. ನಾನು ಏನೋ ಯೋಚನೆ ಮಾಡಿದೆ, ಅದೇನೋ ಆಯಿತು. ನೀನು ಪಟ್ಟಣ ವಾಸದವಳು, ನೇಚರ್ರಿನ ಬ್ಯೂಟಿಯಿಂದ ದೂರ ಇರುವವಳು ; ಸರ್ರಂತ ಕಾರಿನಲ್ಲಿ ಮನೆ ಸೇರಿದರೆ ಏನು ಚೆನ್ನ ? ನಿನಗೆ

ರೊಮ್ಯಾಂಟಿಕ್ ಬೆಂಟ್ ಆಫ್ ಮೈಂಡ್ ಇರತ್ತೆ; ನಿಧಾನವಾಗಿ ತಂಗಾಳಿಯಲ್ಲಿ ನಡೆಯುತ್ತಾ ಬಂದರೆ, ನಮ್ಮ ಹಳ್ಳಿಯ ಒಂದೊಂದು ಬ್ಯೂಟಿ ಸ್ಪಾಟಿನ ಪರಿಚಯವೂ ಮಾಡಿಕೊಡಬಹುದು ಅಂದುಕೊಂಡು–ನಾನೇ ಕಾರು ತರಬೇಡಿ ಅಂತ ತಂತಿ ಕಳುಹಿಸಿದ್ದೆ. ನಿನಗೆ ಇಷ್ಟು ಆಯಾಸವಾಗತ್ತೆ ಅಂತ ಗೊತ್ತಿದ್ದಿದ್ದರೆ, ಕಾರ್ ಯಾಕೆ, ಒಂದು ಹೆಲಿಕಾಪ್ಟರನ್ನೇ ಹೈರ್ ಮಾಡಿ ನನ್ನ ಬಂಗಲಿಯ ಮೇಲೇ ನೇರ ಇಳಿಸಿಕೊಳ್ಳುತ್ತಿದ್ದೆ.

ಸರು –ಸಾಕು ನಿಲ್ಲಿಸಿ, ನಿಮ್ಮ ಮಾತು ಕೇಳಿದರೆ ನನಗೆ ರೊಮ್ಯಾಂಟಿಕ್ ಬೆಂಟ್ ಆಫ್ ಮೈಂಡ್ ಇರುವುದು ಹಾಗಿರಲಿ, ನಿಮಗೆ ಲ್ಯೂನಟಿಕ್ ಬೆಂಟ್ ಆಫ್ ಮೈಂಡಿದೆ ಅಂತ ಯಾರು ಬೇಕಾದರೂ ಸುಲಭವಾಗಿ ಹೇಳಬಹುದು. ಬ್ಯೂಟಿ ಸ್ಪಾಟ್ಸಂತೆ ಬ್ಯೂಟಿ ಸ್ಪಾಟ್ಸು! ದಿಕ್ಕೆಟ್ಟ ಸ್ಟೇಶನ್ನು, ಬೇವಿನ ತೋಪು, ಹುಣಸೆ ಮರ, ಸ್ಮಶಾನ, ಆ ಸುಡುಗಾಡು ಕೆರೆ –

ಭೀಮು—ಸರೋಜ, ಆ ಕೆರೆ ಸುಡುಗಾಡು ಕೆರೆಯಾ? (ನಕ್ಕು) ತಪ್ಪು, ತಪ್ಪು. ನಿನಗೆ ಅದರ ವಿಷಯ ಗೊತ್ತಿಲ್ಲ. ನಮ್ಮ ಎಷ್ಟು ಜನರ ಪ್ರಾಣಗಳನ್ನ ಅದು ಉಳಿಸಿದೆ ಗೊತ್ತೇನು?

ಸರು—ಏನು?

ಭೀಮು—ಅಂದರೆ ಎಷ್ಟು ಜನರ ಪ್ರಾಣಗಳನ್ನ ಈ ಪ್ರಪಂಚದ ಸಂಕಟಗಳಿಂದ ಪಾರು ಮಾಡಿ ಉಳಿಸಿದೆ ಗೊತ್ತೇ ಅಂತ ಕೇಳಿದೆ. ನಮ್ಮ ಕಡೆ ಯಾರ ಮನೆಯಲ್ಲಿ ಏನು ಜಗಳ ಆಗಲಿ, ಏನು ಕದನ ಆಗಲಿ, ಎಲ್ಲಾ ಇಲ್ಲಿ ಬಂದು ಫೈಸಲ್ ಮಾಡಿಕೊಳ್ಳುತ್ತಾರೆ. ಹಾರಿ ಬಿದ್ದರು ಅಂದರೆ ತೀರಿತು. ಅಪೀಲೇ ಇಲ್ಲ ...ಒಂದು ದೃಷ್ಟಿಯಲ್ಲಿ ಇದು ಸುಡುಗಾಡು ಕೆರೆ ಅಲ್ಲ ಅನ್ನುವ ಹಾಗಿಲ್ಲ. ನೇಚರ್ರು ನಿನ್ನ ನಾಲಗೆಯಲ್ಲಿ ತಾನಾಗಿ ಕಾವ್ಯವಾಗಿ ನುಡಿಯಿತು. ಲಿಟರಲಿ, ಇಟ್ ಈಸ್ ಎ ಸುಡುಗಾಡು ಕೆರೆ – ವಾಟರೀ ಗ್ರೇವು!....ಯಾಕೆ, ಸರೋಜ?

ಸರು—(ಕಣ್ಣಲ್ಲಿ ನೀರು) ನಿಮಗೆ, ನಿಮಗೆ ಹುಚ್ಚಿರಬೇಕು ಅಂತ ಇದ್ದೆ, ಈಗ ನಿರ್ಧಾರವಾಯಿತು.

ಭೀಮು- ಯಾಕೆ ? ಸಂದೇಹಕ್ಕೆ ಕಾರಣವೇ ಇರಲಿಲ್ಲವಲ್ಲಾ ! ನನಗೆ ಹುಚ್ಚೇ ! ನಿನ್ನ ಹುಚ್ಚು !

ಸರು ಓ....ದಯವಿಟ್ಟು ಮಾತಾಡಬೇಡಿ.

ಭೀಮು ಯಾಕೆ ? ಯಾಕೆ ಅಳುತ್ತಿ ? "ನಿನ್ನ ಹುಚ್ಚು ನನಗೆ" ಅಂದರೆ ನೀನು ನಗಬೇಕು, ಅಳುತ್ತೀಯಲ್ಲಾ ?....ಹೋಗಲಿ, ನಾನೇನು ಮಾಡಲಿ ಈಗ. ಹೇಳು.

ಸರು—ಏನೂ ಮಾಡಬೇಡಿ, ನಿಮ್ಮ ಧರ್ಮಕ್ಕೆ. ನಿಮ್ಮ ಪಾಡಿಗೆ ನೀವು ಹೋಗಿ.

ಭೀಮು - ನಾನು ಹೋಗಬಹುದು. ಅಲ್ಲಿ ಮನೆಯಲ್ಲಿ ಬಿಸಿ ಬಿಸಿಯಾಗಿ ಅಡಿಗೆ ಮಾಡಿಟ್ಟಿರುತ್ತಾನೆ, ಶಂಕರ. ನಾವು ಬರುತ್ತೇವೆ ಅಂತ ಹಬ್ಬದ ಅಡಿಗೆಯೇ ಮಾಡಿರುತ್ತಾನೆ. ಊಟ ಮಾಡಬಹುದು. ಹೈದರ್, ಸಿದ್ದ, ಹಾಸಿಗೆ ಹಾಸಿ ಕಂಬಳಿ ಇಟ್ಟಿರುತ್ತಾರೆ. ಸುಖವಾಗಿ ಹೊದ್ದು ಮಲಗಿಕೊಳ್ಳಬಹುದು .. ಆದರೆ ನಾನು ಹೋಗೊಲ್ಲ. ಊಟ, ನಿದ್ದೆ ಮಾಡೊಲ್ಲ. ಯಾಕೆ? ನಾನು ಗಂಡ. ನನಗೆ ನನ್ನ ಸುಖ ಸಂತೋಷಕ್ಕಿಂತ ನಿನ್ನ ಸುಖ, ನಿನ್ನ ಸಂತೋಷ ಮುಖ್ಯ. ಹುಚ್ಚು ಮುಖ್ಯ. ಯಾಕೆ ? ಬಿಕಾಸ್ ನೀನು ನನ್ನ ಬೆಟರ್ ಹಾಫ್ ! ಆದರೂ, ನೀನು ಹೋಗು ಅಂದರೆ, ಎದುರಿಗೇ ನಿಂತು ನಿನ್ನ ಕಣ್ಣು ನೋಯಿಸಲಾರೆ. ನಾನು ಹೋಗುತ್ತೇನೆ. ನೀನೇನು ಮಾಡುತ್ತಿ ಹೇಳು.

ಸರು — ....ನಾನು....ನಮ್ಮ ಊರಿಗೇ ವಾಪಸ್ ಹೊರಟು ಹೋಗುತ್ತೇನೆ.

ಭೀಮು—ಹಾಗೇ ಮಾಡು. ನಿನ್ನಿಷ್ಟಕ್ಕೆ ನಾನು ಎಳ್ಳಷ್ಟೂ ಎದುರು ಹೇಳೋಲ್ಲ. ಇಷ್ಟರಿಂದಲೇ ತಿಳಿದುಕೋ, ನಾನು ನಿನ್ನನ್ನು ಎಷ್ಟು ಪ್ರೀತಿಸುತ್ತೇನೆ ಅಂತ.

ಸರು—ಪ್ರೀತಿ, ಪ್ರೀತಿ, ಪ್ರೀತಿ, ಸಾಕು ನಿಮ್ಮ ಪ್ರೀತಿ. ಪ್ರೀತಿಯ ಹೆಸರಿನಲ್ಲಿ ಪ್ರಾಣ ತೆಗೆಯುತ್ತಿದ್ದೀರಿ.

ಭೀಮು—ಹೌದಾ ? ನಿಲ್ಲಿಸಿದೆ. ಪ್ರಾಣ ತೆಗೆಯೊಲ್ಲ. ನನಗೆ ಹೆಂಡತಿ ಬೇಕು. ನೀನು ಹೋಗಿ ಬಾ. ಅತ್ತೆ ಮಾವ ಅವರನ್ನು ಕೇಳಿದೆ ಅಂತ ಹೇಳು. ಗುಡ್ ಬೈ. (ನೇಪಥ್ಯ ಸೇರಿ, ನಿಂತು, ತಿರುಗಿ) ಸರೋಜ, ನಿನಗೆ ವಾಪಸ್ ಹೋಗೊಕ್ಕೆ ನಾಳೆ ಬೆಳಗ್ಗಿನವರೆಗೂ ರೈಲಿಲ್ಲ. ಹಳ್ಳಿಯ ಸ್ಟೇಶನ್ನು. ವೈಟಿಂಗ್ ರೂಮಿಲ್ಲ. ಕಲ್ಲು ಬೆಂಚಿನ ಮೇಲೇ ಮಲಗಬೇಕು. ತಂಡಿ ಜಾಸ್ತಿ. ಸಾಲದ್ದಕ್ಕೆ ಮಂಜು. ತೊಗೋ ಇದ್ದನ್ನ. (ಕೊರಳಿನಿಂದ ಮಫ್ಲರನ್ನು ತೆಗೆದು ನೀಡುವನು) ಕಿವಿಗೆ ಮುಚ್ಚಿ—....ಬೇಡವೇನು ? ಬಿಡು. ನಿನಗೆ ಬೇಡವಾದ್ದನ್ನ ತೊಗೊಳ್ಳಲೇಬೇಕು ಅಂತ ನಾನು ಹಟ ಮಾಡುವುದಿಲ್ಲ. ನಿನಗೆ ಆ ಹಿಮ, ಮಂಜು, ತಂಡಿ, ಕೆಮ್ಮು, ನೆಗಡಿ, ನಿಮೋನಿಯ ಪ್ರೀತಿಯಾದರೆ, ಹಾವ್ ದೆಮ್, ಬೈ ಆಲ್ ಮೀನ್ಸ್ ಹಾವ್ ದೆಮ್. ನಿನ್ನ ಸಂತೋಷ.

ಸರು—ಓ ೀ ೀ ೀ (ನೇಪಥ್ಯಕ್ಕೆ ಓಡುವಳು)

ಭೀಮು—ಆಲ್ ರೈಟ್ ಗುಡ್ ಬೈ....ಅಂದಹಾಗೇ - ಸರೋಜಾ, ಒಂದು ಮಾತು –

ಸರು—(ನೇಪಥ್ಯದಿಂದ) ಏನೂ ಬೇಕಿಲ್ಲ.

ಭೀಮು—ಹಾಗಾದರೆ ಕೇಳಬೇಡ. ಕಿವಿಗೆ ಬೆಟ್ಟು ಇಟ್ಟುಕೋ. ಅದನ್ನು ನಾನು ನೋಯಿಸಬಾರದು....ಆದರೆ ನಾನು ಹೇಳದೆ ಬಿಟ್ಟರೆ, ಚಿತ್ರ ಗುಪ್ತರು ನನ್ನನ್ನು ಸುಮ್ಮನೆ ಬಿಡೊಲ್ಲ... ಅಂಥ ಪ್ರಾಣ ಹೋಗುವ ವಿಷಯವೇನಲ್ಲ....ಅಲ್ಲಿ....ಆ ಸ್ಮಶಾನದ ಹತ್ತಿರ, ಹುಣಿಸೆ ಮರದ ಮೇಲೆ....ರಾತ್ರಿ ಹೊತ್ತು....ಪಿಶಾಚಿಗಳು –

ಸರು -- (ನೇಪಥ್ಯದಲ್ಲಿ) ಅಂ ?

ಭೀಮು—ದೆವ್ವಗಳು –

ಸರು—(ಗಾಬರಿಯಿಂದ ಓಡಿ ಬರುತ್ತಾ) ಅಯ್ಯೋ -

ಭೀಮು—ಕೊಳ್ಳಿದೆವ್ವಗಳು ಮರಕೋತಿ ಆಡುತ್ತವೆಯಂತೆ. ಬಟ್ ಸರೋಜ, ನೀನು ಹೆದರಬೇಕಾಗಿಲ್ಲ, ಇಟ್ ಈಸ್ ಆಲ್ ಸಿಲ್ಲಿ....ದೆವ್ವಗಳಂತೆ, ನಾನ್ಸೆನ್ಸ್–ಗ್ರ್ಯಾಜ್ಯುಯೇಟು ನೀನು, ಘೋಸ್ಟ್ಸ್.... ಇವೆ ಅಂತ–

ಸರು—ಉಹು....ಉಹು....

ಭೀಮು—ನೀನು ಗಾಬರಿಯಾಗಬೇಡ. ಇವೆಲ್ಲಾ ಸ್ಟುಪಿಡ್....ಹಳ್ಳಿ ಗಾಡೂ ಜನ. ಹೀಗೆಲ್ಲಾ ಕತೆ ಕಟ್ಟುತ್ತಾರೆ. ನಾನಾಗಲೇ ಹೇಳಿದೆ ನೋಡು- ನಮ್ಮ ಹಳ್ಳಿಯಲ್ಲಿ ಜಗಳ ಆಡಿದವರೆಲ್ಲಾ ಅಲ್ಲಿ ಬಂದು ಪ್ರಾಣ ಕಳೆದುಕೊಳ್ಳು ತ್ತಾರೆ ಅಂತ– ....ಹಾಗೆ ಕಳೆದುಕೊಂಡವರೆಲ್ಲಾ, ಅಲ್ಲಿ ಕಾದಿರುತ್ತಾರಂತೆ, ಹುಣಸೆಮರದ ಮೇಲೆ,ಹೊಟ್ಟೆ ಉರಿ ತೀರಿಸಿಕೊಳ್ಳೋಕ್ಕೆ–ಉಳಿದವರ ಮೇಲೆ ಅಂತ – ಇವರು ನಂಬಿದ್ದಾರೆ.

ಸರು—ಓ ಹೋ....ಓ....

ಭೀಮು—ಗಂಡಸರ ಕಣ್ಣಿಗೆ ಅಷ್ಟು ಬೀಳೊಲ್ಲವಂತೆ ಅವು. ಎಲ್ಲ ಅನರ್ಥಗಳಿಗೂ ಹೆಂಗಸರೇ ಕಾರಣ ಅಂತ ನಂಬಿಕೆಯಂತೆ ಅವಕ್ಕೆ–ನಾನ್ಸೆನ್ಸ್- ಅಲ್ಲವೇ, ಸರೋಜ ? ಡೆವಿಲ್ಸು ಏಂಜಲ್ಸನ್ನ ಸಹಿಸಲಾರವು. ಹೊಟ್ಟೆಕಿಚ್ಚು.... ಬಟ್....ಜನ ಹೇಳುತ್ತಾರೆ, ಹೋದ ತಿಂಗಳು ಒಂದು ಕೇಸು ಆಯಿತಂತೆ. ನಿನ್ನ ಹಾಗೇ ಯಾರೋ ಹೆಂಗಸು, ಪಾಪ, ತೌರು ಮನೆಗೆ ಒಬ್ಬಳೇ ಹೊರಟಳಂತೆ, ಆ ಸ್ಮಶಾನದ ಹತ್ತಿರ ಹೋಗುವ ಹೊತ್ತಿಗೆ ಎಲ್ಲಿಂದಲೋ ಕಿಲಕಿಲಕಿಲ ನಕ್ಕ ಶಬ್ದ ಕೇಳಿಸಿತಂತೆ.

ಸರು – ಬೇಡಾ–

ಭೀಮು—ಅಕ್ಕ ಪಕ್ಕ ನೋಡಿದಳಂತೆ. ಯಾರೂ ಇಲ್ಲ. ದಿಗಿಲಾಯಿ ತಂತೆ. ಸ್ವಲ್ಪ ಮುಂದಕ್ಕೆ ಹೋದಳಂತೆ. ಆ ಹುಣಸೆ ಮರದಿಂದ ಒಂದು ಬೆಂಕಿಯ ಉಂಡೆ ಧೊಪ್ ಅಂತ ಕೆಳಗೆ ಬಿದ್ದ ಹಾಗೆ ಆಯಿತಂತೆ–

ಸರು – ಅಯ್ಯೋ, ಬೇಡಾ -

ಭೀಮು—ಆಮೇಲೆ ಅದಕ್ಕೊಂದು ಆಕಾರ ಬಂತಂತೆ-

ಸರು – ಬೇಡಾ -

ಭೀಮು – ಇಷ್ಟು ದೊಡ್ಡ ತಲೆ -

ಸರು—ಅಯ್ಯಯ್ಯೋ –

ಭೀಮು—ಇಷ್ಟಿಷ್ಟೇ ಕೈ ಕಾಲು -

ಸರು—ಅಮ್ಮಾ -

ಭೀಮು—ಹಿಂತಿರುಗಿ ಓಡಿ ಹೋಗೋಣ. ಅಂತ, ಹೊರಟಳಂತೆ, ಹಿಂದಿನಿಂದ ಇನ್ನೊಂದು ನಗು ಎದುರೆದುರಿಗೆ ಜೋರು ಜೋರಾಗಿ ಕೇಳುತ್ತಾ, ಬಂದು ಮುಖದ ಮೇಲೆ ಏನೋ ತಣ್ಣಗಾಯಿತಂತೆ ! ಮೂರ್ಛೆ ಬಿದ್ದಳಂತೆ.

ಸರು— ಬೇಡ. ಅಯ್ಯೋ –

ಭೀಮು—ನಿನಗೆ ಯಾಕಿಷ್ಟು ಭಯ ? ನಮ್ಮ ಹಳ್ಳಿಯವರಿಗೆ ಈ ಕತೆಯಲ್ಲಿ ದೃಢ ನಂಬಿಕೆಯಿದ್ದರೂ ಹಳ್ಳಿಯವರವರು. ಅದು ನಿಜವಾಗಲೂ ನಿಜ ಆಗಿದ್ದರೆ ನಾನು ನಿನ್ನ ಒಬ್ಬಳನ್ನೇ ಹಿಂತಿರುಗಿ ಕಳುಹಿಸೋಕ್ಕೆ ಒಪ್ಪುತ್ತಿದ್ದೆನೇ ? ಹೋಗು, ಹೆದರಬೇಡ. ಗುಡ್ ಬೈ ಎಗೈನ್....

ಸರು—ಇಲ್ಲ....ಇಲ್ಲಿ ಬನ್ನಿ.

ಭೀಮು— ....ಯಾಕೆ ?

ಸರು—ನಡೆಯಿರಿ ಹೋಗೋಣ.

ಭೀಮು—ಕ್ಷಮಿಸು, ಸರೋಜ. ನಾನು ತಿರುಗಿ ನಿನ್ನ ಜೊತೆಗೆ ಬಂದು ನಿನ್ನನ್ನು ಸ್ಟೇಷನ್ನಿನಲ್ಲಿ ಬಿಟ್ಟು, ಹಿಂತಿರುಗಿ ಒಬ್ಬನೇ ಮತ್ತೆ ಇಷ್ಟು ದೂರ.... ನನಗೂ ಟೈರಾಗಿದೆ....ನಾನೂ ಬೆಳಗ್ಗಿನಿಂದ ನಿನ್ನ ಹಾಗೇ -

ಸರು— ನಾನು ಸ್ಟೇಷನ್ನಿಗಲ್ಲ ಹೇಳಿದ್ದು.

ಭೀಮು— ಮತ್ತೆ ?

ಸರು—ಓ....ಯೂ ಆರ್ ಎ ಫೂಲ್.

ಭೀಮು—ಸರೋಜ, ನಿನ್ನ ಸಂತೋಷಕ್ಕೆ ನಾನು ಫೂಲಾಗೋಕ್ಕೆ ಹಿಂತೆಗೆಯೊಲ್ಲ. ಆಲ್ ರೈಟ್....ನಾನು ಫೂಲು. ನನಗೆ ಅರ್ಥವಾಗುವ ಹಾಗೆ –

ಸರು—ಮನೆಗೆ ಹೋಗೋಣ....ನಿಮ್ಮ ಮನೆಗೆ.... (ತಪ್ಪನ್ನು ಅರ್ಥ ಮಾಡಿಕೊಂಡು ತಿದ್ದಿಕೊಂಡು) ನಮ್ಮ ಮನೆಗೆ –

ಭೀಮು—ಏನು ? ನಮ್ಮ ಮನೇಗೇ ? ಯೂ ಮೀನ್, ನಿನ್ನ ಮನೇಗೇ ?

ಸರು—....ಹೂಂ. ನಮ್ಮ ಮನೇಗೆ.

ಭೀಮು—ಇದಕ್ಕೆ ಇಷ್ಟು ಯಾಕೆ ಸಂಕೋಚ ? ನಿನ್ನ ಬಂಗಲಿ ಬಾಗಿಲು ತೆಗೆದುಕೊಂಡು ಕಾದಿದೆ – ನಡಿ....

(ನಿಷ್ಕ್ರಮಿಸುವರು)

ದೃಶ್ಯ ೧೨

(ಭೀಮೂ ಬಂಗಲಿಯ ವರಾಂಡ. ಸುಸಜ್ಜಿತವಾಗಿರುವುದನ್ನು ಅಸ್ತವ್ಯಸ್ತ ಮಾಡುತ್ತಿದ್ದಾರೆ. ಹೈದರ್ ಮತ್ತು ಸಿದ್ದ–ಹೂ ಗೊಂಚಲನ್ನು ಕುಂಡದಿಂದ ಎತ್ತಿ ನೆಲಕ್ಕೆ ಹಾಕುವುದು, ಕುರ್ಚಿಗಳನ್ನು ಎತ್ತೆತ್ತಲೋ ತಿರುಗಿಸಿಡುವುದು, ಟೀಪಾಯನ್ನು ತಲೆಕೆಳಗು ಮಾಡುವುದು—ಹೀಗೆ. ಶಂಕರ ತಡೆಯಲಾರದೆ)

ಶಂಕರ ಲ್ರೋ, ಲ್ರೋ, ಲ್ರೋ, ಸಾಕ್ರೋ, ಸಾಕ್ರೋ -

ಸಿದ್ದ –ಐದ್ರಪ್ಪಾ, ರವಷ್ಟು ಕಸ ಎತ್ಕೊಂಡ್ಬಂದು ಇಲ್ಲಿ ಆಕ್ಲಾ ?

ಹೈದರ್—ಒಂದು ಆಸಾನೇ ಕೊಟ್ಗೇಯಿಂದ ತಂದು ಅಲ್ಲಿ ಕಟ್ಟು –

ಶಂಕರ—ಉ ಹು ಹು, ಹಸು ನೋಡೋಕ್ಕೆ ಚೆನ್ನಾಗಿರತ್ತೆ, ಮೈಗೆಲ್ಲಾ ಸೆಗಣಿ ಮೆತ್ತಿಕೊಂಡಿರುವ ಎಮ್ಮೆ ಇನ್ನೂ ಚೆನ್ನ -

ಸಿದ್ದ - ಸಂಕ್ರಪ್ಪ, ಇಲ್ಲಿ ಇಂಗಿರ್ಬೇಕಂತೆ ; ಆದರೆ ಮಾಡೀ ಪ್ಯಾಕೆ ಅವರ ಬೆಡ್ರೂಮು -

ಹೈದರ್ - ಗಮಗಮಾ ಗಮಗಮಾ, ಜಿಲಿಜಿಲಿ ಜಿಲಿಜಿಲೀ - ಇರ್ಬೇಕಂತ -

ಶಂಕರ – ಹೌದು, ಇದೆಲ್ಲಾ ಆಯಿತು, ನಾನು ಮೂರು ಗಂಟೆ ಕಷ್ಟ ಪಟ್ಟು ಅಡಿಗೆ ಮಾಡಿದ್ದೀನಿ - ಎರಡು ಬಗೆ ಪಲ್ಯ –

ಹೈದರ್– ಕ್ಯಾ ? ಪಲಾವ್ ಮಾಡಿದ್ದೀ ? ವಾರೇವ್ಹಾ -

ಸಿದ್ದ —(ತಲೆಯ ಮೇಲೆ ಮೊಟ್ಕುತ್ತಾ) ಪಲಾವ್ ಅಲ್ವೋ, ಲೇಯ್ ಪಲ್ಯ, ಪಲ್ಯ—....ಪರಮಾನ್ನಾಯ ಮಾಡಿದ್ದೀಯೋ ಇಲ್ವೋ - ?

ಶಂಕರ—(ಸಿದ್ದನ ತಲೆ ಮೊಟಕುತ್ತಾ) ಪರಮಾನ್ನ್ಯಾಯು ಅಲ್ಲವ್ರೋ, ಲೇಯ್ ಪಾಯಿಸ...ಪಾಯಿಸ ಪಾಯಿಸ, ಚಿತ್ರಾನ್ನ - ಎಲ್ಲಾ ಮಾಡಿದ್ದೀನ್ರೋ....ಅವಕ್ಕೆ ಹುಳಿ ಹೆಚ್ಚು ಹಾಕಿ, ಉಪ್ಪು ಹಾಕದೇನೇ ಕೆಡಿಸು ಅಂತ ಹೇಳಿಲ್ಲ ತಾನೇ ?

ಸಿದ್ದ—ಇಲ್ಲ, ಇಲ್ಲ, ಅಡಿಗೆ ಫಸ್ಟ್ ಫಸ್ಟ್ ಇರ್ಬೇಕು ಅಂದೌರೆ...

(ನೇಪಥ್ಯದಲ್ಲಿ : ಭೀಮು : ಬಾ, ಸರೋಜ, ನಿನ್ನ ಸ್ವೀಟ್ ಹೋಂಗೆ !)

ಅಕ್ಕ ! ಬಂದ್ರೋ -

ಹೈದರ್—ಆಗಯ್ !

ಶಂಕರ—"ಬಂದಾಗ ಎದುರಿಗಿರಬಾರದು ಯಾರೂ" ಅಂದಿದ್ದರೂ, ಅಂದಿರೀ—

ಸಿದ್ದ—ಓದು ಓಡು ...ಓಡು....ಓಡು....

(ಎಲ್ಲರೂ ಓಡಿ ಹೋಗುವರು, ಭೀಮು ಪ್ರವೇಶಿಸುವನು. ಸರೋಜ ಸುಸ್ತಾಗಿ ಬಾಗಿಲಿಗೆ ಒರಗಿ ನಿಲ್ಲುವಳು)

ಭೀಮು—ಕಂ ಆನ್ ಸರೋಜ....ಲ್ರೋ, ಏನು ಮಾಡುತ್ತಿದ್ದೀರ್ರೋ ಎಲ್ಲರೂ ಒಳಗೆ ? ಬ್ಲಾಕ್ಗಾರ್ಡ್ಸ್ - ಹೈದರ್, ಸಿದ್ದ, ಶಂಕರಾ !

(ಒಬ್ಬೊಬ್ಬರೂ ಒಂದೊಂದು ಬಾಗಿಲಲ್ಲಿ ಕಾಣಿಸಿಕೊಂಡು)

ಹೈದರ್—ಹುಜೂರ್ ?

ಸಿದ್ದ—ಬುದ್ಧೀ ?

ಶಂಕರ—ಸ್ವಾಮೀ ?

ಭೀಮು—ಏನು ಹುಜೂರ್, ಏನು ಸ್ವಾಮಿ, ಏನು ಬುದ್ಧೀನ್ರೋ ? ಬುದ್ಧಿ ಇದೆಯೇನ್ರೋ ನಿಮಗೆ ? ಮನೆಗೆ ಬರುವ ಹೊತ್ತಿಗೆ ಎದುರಿಗೆ ನಿಂತಿರಬೇಕು ಅಂತ ಗೊತ್ತಿಲ್ಲ ನಿಮಗೆ ? ಒಳಗೆ ಸೇರಿಕೊಂಡು ಒಬ್ಬರಿಗೊಬ್ಬರು ಮುದ್ದಾಡುತ್ತಿದ್ದೀರೇನ್ರೋ ?....ಇದೇನ್ರೋ ಇದು ಈ ಕುರ್ಚಿ, ಟೀಪಾಯ್ ಅವಲಕ್ಷಣ ? ಹೀಗೇನೇನ್ರೋ ನೀವು ಮನೆ ಇಟ್ಟುಕೊಂಡಿರುವುದು

ರ್‍ಯಾಸ್ಕಲ್ — (ಒಂದು ಕುರ್ಚಿ ಸರಿಯಾಗಿ ಹಾಕಿಕೊಂಡು ಕೂತು, ಕಾಲು ಚಾಚಿ) ಹೂಂ, ಬಿಚ್ಚು ಬೂಡ್ಸು. (ಸಿದ್ದ ಒಂದು ಕಾಲ ಬಳಿ ಕೂತು ಲೇಸ್ ಬಿಚ್ಚುತ್ತಿರುವನು...ಸರೋಜಳತ್ತ ತಿರುಗಿ ನೋಡಿ) ಆಂ ? ಐ ಆಮ್ ಸಾರಿ. ಸರೋಜ, (ಸಿದ್ದನ ಕಿವಿ ಹಿಂಡಿ ಎತ್ತುತ್ತಾ) ಯೂ ಸ್ಟುಪಿಡ್ ಫೂಲ್, ಅಮ್ಮಾವರು ಅಲ್ಲಿ ಸುಸ್ತಾಗಿ ಬಾಗಿಲಿಗೆ ಒರಗಿ ನಿಂತಿದ್ದಾರೆ, ಕೂತುಕೊಳ್ಳೊಕ್ಕೆ ಸರಿಯಾಗಿ ಜಾಗ ಇಲ್ಲದೆ - ಅವರಿಗೆ ಮೊದಲು ಒಂದು ಕುರ್ಚಿ ಹಾಕುವುದು ಬಿಟ್ಟು, ನನ್ನ ಬೂಡ್ಸು ಬಿಚ್ಚೋಕ್ಕೆ ಬಗ್ಗಿ ಕೂತೆಯಲ್ಲಾ ! ನನಗೆ ದೇವರು ಕೈ ಕೊಟ್ಟಿಲ್ಲವೇನೋ ನನ್ನ ಬೂಡ್ಸು ಬಿಚ್ಚಿಕೊಳ್ಳೋಕ್ಕೆ ? ಹೋಗು, ಹಾಕವರಿಗೊಂದು ಕುರ್ಚಿ ಮೊದಲು.

ಸಿದ್ದ—ಅಪ್ಪಣೆ ಬುದ್ಧೀ – (ಒಂದು ಕುರ್ಚಿ ಎತ್ತಿ ಸರೋಜಳ ಕಡೆ ಹೋಗುತ್ತಿರಲು)

ಭೀಮು—(ಹೈದರನಿಗೆ) ಏನು ನೋಡ್ತಾ ನಿಂತಿದ್ದೀಯೋ,ಬೇಕೂಫಾ?

ಹೈದರ್—ಮಾಫ್ ಕೀ ಜಿಯೇ ಹುಜೂರ್.... (ತಾನೂ ಒಂದು ಕುರ್ಚಿ ಎತ್ತಿ ಸರೋಜಳ ಇನ್ನೊಂದು ಪಕ್ಕಕ್ಕಿಟ್ಟು) ಬೈಟಿಯೇ, ಮಾ -

ಸಿದ್ದ— (ತನ್ನ ಕುರ್ಚಿ ತೋರಿ) ಕುಂತ್ಕೊಳ್ರಮ್ಮಾ !

ಭೀಮು—ಓ, ಓ, ಓ, ಏನ್ರೋ ಇದು ? ಎರಡು ಕುರ್ಚಿಗಳ ಮೇಲೆ ಒಬ್ಬರು ಕೂತುಕೊಳ್ಳೊಕ್ಕಾಗುತ್ತೇನ್ರೋ? ಅಥವಾ ನಮ್ಮಿಬ್ಬರನ್ನೂ ಕೂಡಿಸಿ ನೀವಿಬ್ಬರೂ ಆರತಿ ಗೀರತಿ ಎತ್ತುತ್ತೀರಾ ? ಯೂ ಡ್ಯಾಂ (ಒಂದು ಕುರ್ಚಿಯನ್ನು ಒದ್ದು ಉರುಳಿಸಿ) ಫೂಲ್ಸ್ (ಇನ್ನೊಂದನ್ನೂ ಒದ್ದು ಕೆಡವಿ ದೂರ ಬರುತ್ತಾ) ನೀನು ಕೂತುಕೋ, ಸರೋಜ, ಇವರಿಗೆಲ್ಲಾ ನೀನು ಸರಿಯಾಗಿ ಹೇಳಿಕೊಡಬೇಕು.... ಅತೀ ಬುದ್ಧಿವಂತಿಕೆ ತೋರಿಸುತ್ತಾರೆ, ರ್‍ಯಾಸ್ಕಲ್ಸ್ (ಇಬ್ಬರನ್ನೂ ಬಡಿಯುವನು)

ಸರು—ಅಯ್ಯೋ, ಅವರನ್ನ ಯಾಕೆ ಹಾಗೆ ಹೊಡೆಯುತ್ತೀರಿ ? (ತಾನೇ ಒಂದು ಕುರ್ಚಿ ಎತ್ತಿಟ್ಟು ಕೂಡಬೇಕು—ಅಷ್ಟರಲ್ಲಿ—)

ಭೀಮು—(ನುಗ್ಗಿ, ಅದನ್ನು ಬೀಳಿಸಿ) ಬಿಡು. ನೀನೇ ಅದನ್ನ—? ನಾನ್ಸೆನ್ಸ್—ನಮ್ಮ ಕೆಲಸ ನಾವೇ ಮಾಡಿಕೊಂಡರೆ ಇವರೆಲ್ಲಾ ಯಾಕಿರುವುಧ

ಈ ಮನೆಯಲ್ಲಿ? ಆಟ....ಆಟ ಆಡುತ್ತೀರೇನೋ ಆಟ? ಆಗಲಿ, ನಾಳೆ ಆಗಲಿ (ಬೂಡ್ಸು ಎತ್ತಿ ಒಳಗೆ ಹೋಗುತ್ತಾ) ಅಲ್ಲಿ, ನನ್ನ ಕುರ್ಚಿಯಲ್ಲೇ ಕೂತುಕೋ, ಸರೋಜ. ಬಂದೆ. (ನಿಷ್ಕ್ರಮಿಸುವನು)

ಸರು—ಏಟು ತಗುಲಿತೇನಪ್ಪಾ ತುಂಬ? ಅವರಿಗೆ ಹಸಿವೆ—ತುಂಬ ಕೋಪ....(ಹೈದರ್‌ಗೆ) ನೀನು - ?

ಹೈದರ್—ಹೈದರ್ರಿದಾರೆ ಮಾ.

ಸರು—ಎಲ್ಲಿದಾರ್ರೋ ?

ಹೈದರ್-- (ಎದೆ ಮುಟ್ಟಿಕೊಳ್ಳುತ್ತಾ) ಇಲ್ಲಿ -

ಸಿದ್ದ—ಅವನ ಹೆಸರು ಹೈದರ್ರು, ಅಮ್ಮ.

ಹೈದರ್—ಇವನು ಸೀದಾ ಇದಾನೆ....

ಸಿದ್ದ—ಸಿದ್ದ. ಸಿದ್ದಾ ನ್ರಮ್ಮಾ.

(ಒಳಗಿಂದ ಭೀಮು : ಹೈದರ್, ಸಿದ್ದ, ಬನ್ರೋ ಇಲ್ಲಿ-)

ಹೈದರ್—ಆಯಾ ಸಾಬ್. (ಓಡುವನು)

ಸಿದ್ದ - ಬತ್ತೀನ್ರಮ್ಮಾ....ಬಂದೇ....(ಓಡುವನು)

ಸರು—ನೀನು ಯಾರಪ್ಪ, ಪುಣ್ಯವಂತ ?

ಶಂಕರ —ಶಂಕರ್ರಾವಮ್ಮಾ.

ಸರು—ಹಾಗೆಂದರೆ ?

ಶಂಕರ —ಅಡಿಗೆಯವನು.

ಸರು— ಓ.... ಒಳ್ಳೆಯದು....ನೋಡು, ವಿಪರೀತ ತಲೆನೋವು.... ಒಂದು ಕಪ್ ಕಾಫಿ - ಇದ್ದರೆ –

ಶಂಕರ—ಇಲ್ಲದೆ ಉಂಟೇನಮ್ಮಾ ? ಡಿಕಾಕ್ಷನ್ ಫಿಲ್ಟರಿನಲ್ಲಿ ಈಗ ತಾನೇ ಇಳಿದಿದೆ. ಫ್ರೆಷ್ ಹಾಲು - ಅರ್ಧ ಗಂಟೆ ಆಯಿತು ಕರೆದು - ತಂದೆ, ಅಮ್ಮ. (ಓಡುವನು)

ಸರು—ಹಪ್ಪಾ – (ಸುಸ್ತಿಗೆ ಒರಗುವಳು...) ಶಂಕರ್ರಾ -

ಶಂಕರ—ಇಗೋ (ಪ್ರವೇಶಿಸಿ) ರೆಡಿ ತೊಗೊಳ್ಳಿ, ಅಮ್ಮಾ.

ಸರು—ಜೀವ ಬಂದ ಹಾಗಾಯಿತಪ್ಪಾ–(ಬಟ್ಟಲು ತೆಗೆದುಕೊಳ್ಳುವಷ್ಟರಲ್ಲಿ)

ಭೀಮು—(ಪ್ರವೇಶಿಸುತ್ತಾ) ಶಂಕರಾ, ಓ. ಇಲ್ಲೇ ಇದ್ದೀಯಾ? ಏನು ? ಏನೋ ಅದು ?....ಕಾಫಿ ? ಯಾರಿಗೋ ಕಾಫಿ ಇಷ್ಟು ಹೊತ್ತಿನಲ್ಲಿ?

ಶಂಕರ—ಅಮ್ಮಾವರು....ಕೇಳಿದರು.

ಭೀಮು—ಏನು ? ಅಮ್ಮಾವರು ಕೇಳಿದರು ಅಂತ ಅವರ ಎದುರಿಗೇ ಸುಳ್ಳು ಹೇಳುತ್ತೀಯಾ ? ಕಾಪಾಡಿಕೋ ನಿನ್ನ ಕಪಾಳವನ್ನ – (ಹೊಡೆಯಲು ಕೈ ಎತ್ತುವನು)

ಸರು—ಊ ಹೂ ಹೂ, ಹೊಡೆಯ ಬೇಡಿ, ಅವನು ಹೇಳಿದ್ದು ನಿಜ. ನಾನೇ ಕಾಫಿ ಬೇಕು ಅಂತ ಕೇಳಿದೆ,

ಭೀಮು—ಹಾಗೇನು ? ಹಾಗಾದರೆ (ಅದೇ ಕೈಯಿಂದ ಬೆನ್ನು ತಟ್ಟುತ್ತಾ) ಜಾಣಮರಿ... ಒಳ್ಳೆಯ ಕೆಲಸ ಮಾಡಿದಿ. (ಸರೋಜ ಬಟ್ಟಲೆತ್ತಿಕೊಂಡು ತುಟಿಗೆತ್ತಬೇಕು !) ಎಲ್ಲಿ (ಕಸಿದು) ಹೇಗೆ ಮಾಡಿಕೊಂಡು ಬಂದಿದಾನೋ ನೋಡುತ್ತೀನಿ ...ಲೋ....ಏನೋ ಇದು ? ಬಣ್ಣ ? ಅಂ ? ಕೊಂದು ಬಿಡಬೇಕು ಅಂತ ಇದ್ದೀಯೇನೋ ಅಮ್ಮಾವರನ್ನ, ಈ ಪಾಟಿ ಕೆಫೈನ್ ಪಾಯಿಸನ್ನಿನಲ್ಲಿ ? ಅಷ್ಟು ಎಮ್ಮೆ ಹಾಲನ್ನೂ ನೀವೇ ಕುಡಿಯುತ್ತಿದ್ದೀರೇನೋ ? (ರುಚಿ ನೋಡಿ) ಅಯ್ಯಯ್ಯೋ ಕಹಿ....ಕಷಾಯ .. ಥೂ.... (ಹೂ ಕುಂಡದಲ್ಲಿ ಚೆಲ್ಲುತ್ತಿರಲು)

ಸರು—ಅಯ್ಯಯ್ಯೋ –

ಭೀಮು—ದೇವರ ದಯೆ, ಸರೋಜ-ನೀನು ಅದನ್ನ ಕುಡಿದಿದ್ದರೆ....

ಸರು—ಕಾಫಿ ವಾಸನೆ ಚೆನ್ನಾಗಿಯೇ ಇತ್ತು ?

ಭೀಮು—ಏನು ಚೆನ್ನಾಗಿತ್ತು? ನಿನಗೆ ಗೊತ್ತಿಲ್ಲ, ಸರೋಜ. ಅವಲಕ್ಷಣ ಕಾಫಿ ಮಾಡಿ, ಸಕ್ಕರೆಗೆ ಬದಲು ಒಂದು ಮಣ ಸೀಗೆಪುಡಿ ಕದರಿ - ಅಸ್ಸಿಸ್ಸಿ – ಬಾಯಿ – (ಅಸಹ್ಯಿಸಿಕೊಂಡು) ಲೋ, ಶಂಕರ, ನೀನು ಗೌರಿಶಂಕರದಷ್ಟು ಎತ್ತರ ಬೆಳೆದಿದ್ದೀಯೋ ಹೊರತು, ನಿನ್ನ ತಲೆ ತುಂಬ ಕಳಿ ಮುದ್ದೆ.. ಇಲ್ಲಿ

ನೋಡು. ಈ ಸರತಿಗೆ ಆಯಿತು. ಇನ್ನೊಂದು ಸರತಿಗಾನಾ ಇಂಥ ಕಾಫಿ ತಂದೆಯೋ, ಶಂಕರ, ಶಂಭೋ ಶಂಕರ, ನಿನ್ನನ್ನ ಕೈಲಾಸಕ್ಕೆ ಕಳುಹಿಸಿಬಿಡು ತ್ತೇನೆ! ನಡಿಯೋ ಒಳಗೆ! ಗೂಬೆಯ ಹಾಗೆ ಕಣ್ಣು ಕಣ್ಣು ಬಿಡುತ್ತಾ ನಿಂತಿದ್ದಾನೆ. (ಶಂಕರ ಬಾಗಿಲು ಸೇರಿದ) ಶಂಕರಾ!

ಶಂಕರ—(ತಿರುಗಿ) ಸ್ವಾಮೀ ?

ಭೀಮು—ಏನು ಸ್ವಾಮೀನೋ ? ನಿಮ್ಮಂಥವರನ್ನು ಕಟ್ಟಿಕೊಂಡು ಸಂಸಾರ ಮಾಡೊಕ್ಕಿಂತ ಸನ್ಯಾಸ ತೊಗೊಂಡು ಸಹ್ಯಾದ್ರಿ ಹತ್ತಿ ಬಿಡುವುದು ವಾಸಿ. ಐ ಆಮ್ ಸಾರಿ, ಸರೋಜ, ನಿಮ್ಮ ಮನೆಯಲ್ಲಿ ನೀನು ಸುಖವಾಗಿದ್ದಿ. ಬಲವಂತದಿಂದ ನಾನು ಕರೆದುಕೊಂಡು ಬಂದು ಈ ಕಾಡುಮೃಗಗಳ ಮಧ್ಯ ಬಿಟ್ಟೆ....ಅಲ್ಲವೋ, ಅಡಿಗೆ ಆಗಿದೆ ಅಂತ -

ಶಂಕರ—ಆಗಿದೆ, ಸ್ವಾಮೀ.

ಭೀಮು—ನನ್ನ ಮುಂದೆ ಜೊಗಳಿ ಏನು ಪ್ರಯೋಜನವೋ? ಮನೆಯ ಯಜಮಾನಿ ಅವರು - ಅವರಿಗೆ ಯಾಕೆ ಹೇಳಲಿಲ್ಲ ?

ಸರು—ಅವನು ಹೇಳುತ್ತಿದ್ದನೋ ಏನೋ – ನಾನೇ ಮೊದಲು ಕಾಫಿ ತೊಗೊಂಡು ಬಾ ಅಂತ ಓಡಿಸಿದೆ.

ಭೀಮು—ಸರೋಜ, ನೋ, ನೋ, ಹೀಗೆ ನೀನು ಇವರನ್ನ ವಹಿಸಿ ಕೊಂಡು ಬರಬೇಡ. ನಿನಗೆ ಗೊತ್ತಿಲ್ಲ ಈ ಸರ್ವೆಂಟ್ಸು - ಶಂಕರಾ, ಅಮ್ಮಾ ವರು ಬೆಳಗ್ಗಿಂದ ಉಪಾಸವೋ-

ಶಂಕರ—ತಟ್ಟೆ ಹಾಕಿ ರೆಡಿ ಮಾಡಿದ್ದೇನೆ, ಸ್ವಾಮೀ, ತಾವು ಬಂದು ಕೂತರೆ_ಬಡಿಸುತ್ತೇನೆ_

ಭೀಮು—ಆಂ? ತಟ್ಟೆ ಹಾಕಿ_? ಭಲೆ, ಭಲೆ!

ಸರು—ಸುಮ್ಮನೆ ಬಯ್ಯುತ್ತೀರಿ....ನಡಿಯಪ್ಪಾ –

ಭೀಮು—(ಸರೂ ಅವಸರ ಕಂಡು) ಶಂಕರ, ತಟ್ಟೆ ಹಾಕಿದ್ದೀ, ಓ ಕೇ.... ಬಡಿಸುವುದಕ್ಕೆ ಏನು ಮಾಡಿದ್ದಿ ? ಅನ್ನ, ಕಲಗಚ್ಚು ಎರಡು ಮಾಡಿ ಬಡಿದಿದ್ದಿ. ಅಷ್ಟೇ ತಾನೇ ?

ಶಂಕರ—ಇಲ್ಲ, ಸ್ವಾಮೀ, ಪಾಯಿಸ, ಚಿತ್ರಾನ್ನ, ಬೋಂಡ -

ಭೀಮು—"ಪಾಯಿಸ, ಚಿತ್ರಾನ್ನ, ಬೋಂಡ "?....ಏನು ಬಂತೋ ನಿನಗಿವತ್ತು ಇದ್ದಕ್ಕಿದ್ದ ಹಾಗೇ ? ನಿಮ್ಮ ಅಪ್ಪನ ಹುಟ್ಟಿದ ಹಬ್ಬವೇನೋ ?

ಶಂಕರ—ಇಲ್ಲ, ಸ್ವಾಮೀ. ತಾವು ಇವತ್ತು ಹೊಸದಾಗಿ....ಮೊದಲ ಸಾರಿ....ಅಮ್ಮಾವರನ್ನ ಕರೆದುಕೊಂಡು ಬರುತ್ತಿದ್ದೀರಿ ಅಂತ -

ಭೀಮು—ಭಲೆ, ಭಲೆ, ಮಾರ್ವೆಲ್ಲಸ್ ! ಸರೋಜ, ನೀನು ಬರುತ್ತಿ ಅನ್ನುತ್ತಿರುವಾಗಲೇ ಇವನ ಬುದ್ಧಿ ಚಿಗುರಿಬಿಟ್ಟಿದೆ ನೋಡಿದೆಯಾ ? ಭಲೆ.... ನಡಿ, ನೋಡೋಣ, ಅದೇನು ಪಾಯಿಸ, ಚಿತ್ರಾನ್ನ, ಬೋಂಡ ಮಾಡಿ ದ್ದಾನೋ, ನೋಡೋಣ....ನಡಿಯೋ, ನಳ ಚಕ್ರವರ್ತಿ - ನಡೀ -

(ನಿಷ್ಕ್ರಮಿಸುವರು)

ದೃಶ್ಯ ೧೪

(ಮಲಗುವ ಮನೆ. ಹೈದರ್ ಹಾಸಿಗೆಯ ಮೇಲೆ ಪನ್ನೀರೆರಚುತ್ತಿದ್ದಾನೆ. ಸಿದ್ಧ ಊದಿನಕಡ್ಡಿ ಹತ್ತಿಸುತ್ತಿದ್ದಾನೆ).

ಸಿದ್ಧ— ಐದ್ರಪ್ಪಾ, ಮರ್ತೇಬುಟ್ನೋ !

ಹೈದರ್—ಏನ್ - ?

ಸಿದ್ಧ—ಅವ್ರೋರ್ದು....ಅಡ್ ಬಾರ್ಲೊಸದು - ತಂದ್ ಮಡ್ಗು ಅಲ್ಲಿ ಅರತ....ಸಾವ್ಕಾರ್ ಏಳ್ಳಿಲ್ವಾ – ?

ಹೈದರ್—ಅರೆ ಅರೆ....ಔದು....ಔದು....(ಪನ್ನೀರುದಾನಿ ಇಟ್ಟು ಹೊರ ಗೋಡುವನು)

(ಊಟದ ಮನೆಯಲ್ಲಿ)

ಭೀಮು—ಲೋ, ಶಂಕರ. ಅಮ್ಮಾವರು ಹಸಿವೆ, ಹಸಿವೆ ಅನ್ನು ತ್ತಿದ್ದರೆ, ಇದೇನೋ ನೀನು ಬಡಿಸಿರುವುದು ತಟ್ಟೆಯಲ್ಲಿ ? ಬೊಂಬೆ ಊಟದ ಹಾಗೆ ಇಟ್ಟಿದ್ದೀ -

ಹೈದರ್—(ಏಣಿ ತೆರುತ್ತಾ) ಪ್ಲೀದಾ, ಸಂಕ್ರಪ್ಪಂದು ಸೆರ್ದಿ ಸುರು ಆಗಿಪಾರೆ ಪಾ –

ಸಿದ್ದ—ಆಗಲಿ ನಮ್ಮಾಕದಂಗೇ ಅವನ್ಗೂ ರವಷ್ಟು –

(ಊಟದ ಮನೆಯಲ್ಲಿ)

ಭೀಮು—ಸರೋಜ, ಸ್ಟಾಪ್....ಮುಟ್ಟಬೇಡ ಅದನ್ನ.... ಲೋ, ಶಂಕರ, ಪಾಯಿಸಕ್ಕೆ ನೀನು ಏನೋ ಹಾಕಿರುವುದು ? ಹಾಲಿಗೆ ಬದಲು ಮಜ್ಜಿಗೆ ಸುರಿದು – ಘೂತ್... ಒತ್ತರಿಸದನ್ನ, ಸರೋಜ - ಅವಲಕ್ಷಣ .. ಓ....ಓ....ಓೀ.

ಸರು - ಏನಾಯಿತು ?

ಭೀಮು—ಈ ತೊವ್ವೆ ! ಅಯ್ಯಯ್ಯೋ....ಲೋ, ನೀನು ತೊವ್ವೆಗೆ ಉಪ್ಪು ಹಾಕಿದ್ದೀಯೋ, ಉಪ್ಪಿಗೆ ತೊವ್ವೆ ಹಾಕಿದ್ದೀಯೋ ? (ವಾಕರಿಸಿ) ಕ್ಷಾರ....ಕ್ಷಾರ ...ನೀನು ಬಾಯಿಬಿಡ ಬೇಡ ಅದನ್ನ, ಸರೋಜ!

ಹೈದರ್—ಅರೆ ಇಸ್ಕೀ–ಪೀದಾ, ಖಾನಾ ಬಹೂತ್ ಪಸಂದಾಗಿ ಪಕಾಯ್ಸಿದೀನಿ ಹೇಲ್ದ ಇಲ್ಲಾ, ಸಂಕ್ರೂ....ಫಿರ್, ಸಾಮೀ -

ಸಿದ್ದ— ಅದೇನು ಪಸಂದೋ – ಐದ್ರಪ್ಪಾ....ಊಹು....ಅದು .... ಅದು....ಇಂಗ್ಯಾಬ ಏಳ್ತೀನೀ –

ಹೈದರ್— ಉಂ ?

ಸಿದ್ದ - ಅಪ್ನ ಸರೀಗೇ ಮಾಡಿರ್ಬ್ಯಾಕು....ಸ್ವಾಮ್ಯೋರೇ –

ಹೈದರ್—ಜುಪ್ಕೆ ಜುಪ್ಕೆ – ?

ಸಿದ್ದ—ಊಂ....ಅಲ್ಲ, ಐದ್ರಪ್ಪ, ಅವರೇ ನಮ್ಕ ಕುರ್ಚಿ ಅಂಗ್ ಮಡ್ಗಿ, ಮೇಜಾ ಇಂಗಿಕ್ಕಿ. ಅಂಗೆ ಇಂಗೆ ಎಲ್ಲಾ ಯೇಳಿ, ನಾವ್ ಅಂಗಂಗೇ ಮಾಡಿದ್ರೆ, ಯಾಕಿಂಗಿಂಗೆ ಅಂತ ನಮ್ಮ ತರಾಟೀಕ್ ತಕ್ಕೊಳ್ಳಿಲ್ವಾ ?

ಹೈದರ್—ಊಂ....ಸಾಮೀಕೆ ಘುಸಾನೇ ಬರಾಕಿಲ್ಲ....ಈಕ ಘುಸಾ

ಪೇಕ್ ಘುಸಾ, ಘುಸಾ ಪೇಕ್ ಘುಸಾ....(ಏಟು ತಿಂದ ಮೈ ನೋವಿನಿಂದ) ಆಂ....ಆಂ....

ಸಿದ್ದ—ಅಲ್ದೆ, ಒಂಜಿನಾನಾರಾ ಒಂದೇಟು ಅಂಗಾಕಿದ್ರಾ ಮೈಮ್ಯಾಕೆ? ಇವತ್ತು ಅಬ್ಬ, ಅಬ್ಬ ಮಾಡಾಕ್ಬುಟ್ರು....!

(ಊಟದ ಮನೆಯಲ್ಲಿ)

ಭೀಮು—ಓ, ಓ, ಊಫ್, ಊಫ್, ಕಾರ....ಕಾರ....

ಸರು ಏನು ?

ಭೀಮು—ಈ ಚಟ್ನಿ....

ಸರು—ಅಷ್ಟೊಂದು ?....ನೀರು ತೊಗೊಳ್ಳಿ....

ಭೀಮು—ಊಹು, ಊಹು, ಅದು ನೀರಿಗೆ ಹೋಗೊಲ್ಲ....ಅಬ್ಬಬ್ಬಾ ... ಹಸಿರು ಮೆಣಸಿನಕಾಯಿ ಹೊಲಹೊಲವನ್ನೇ ಒರಳಲ್ಲಿ ತಿರುವಿ ಹಾಕಿ ಬಿಟ್ಟಿದ್ದಾನೆ ! ನಿನ್ನ ನಾಲಿಗೆಯನ್ನ ನಾಲ್ಕು ವಾರ ಜೇನುತುಪ್ಪದಲ್ಲಿ ನನೆ ಇಟ್ಟರೂ - ಊಹೂ....ಫಾರ್ ಗಾಡ್ಸ್ ಸೇಕ್ – ಅದನ್ನ ಮುಟ್ಟಬೇಡ....

ಸಿದ್ದ— ಸಂಕ್ರಪ್ಪಾ !

ಹೈದರ್—ಕೈಲಾಸ್ಗೇ ಟಿಕೆಟ್ ತಕೋಽಪ್ಪಾ !

(ಊಟದ ಮನೆಯಲ್ಲಿ)

ಭೀಮು— ಅ ಲ್ಲೈ ಲ್ಲೈ ಲ್ಕೈ ಲ್ತೈ ಹೋಯಿತು, ಹೋಯಿತು, ಹೋಯಿತು -

ಸರು - ಏನೋಂದ್ರೇ ?

ಭೀಮು – ಈ ಗೊಜ್ಜು ! ಹುಳಿ ಲೊಟ್ಟೆ ! ಶಂಕರ, ನೀನು ಹಣ್ಣು ಕಿವುಚಿ ಹಾಕಿದೆಯೋ, ಹುಣಸೆ ಮರವೇ ಮುಳುಗಿಸಿದ್ದೀಯೋ ? ಥೂತ್ ....ಸರೋಜ, ಇಲ್ಲಿ ನೋಡು....ಈಚಿತ್ರಾನ್ನ ! ಬರೀ ಒಗ್ಗರಣೆ ಚಿತ್ರಮಯ ವಲ್ಲೋ !....ಇದೇನಿದು ?

ಶಂಕರ—ಬೋಂಡ.

ಭೀಮು—ನಿನ್ನ ಪಿಂಡ. ಬೋಂಡವೇನೋ ಇದು ? ಒಂದೊಂದೂ ಐದನೇ ನಂಬರು ಫುಟ್‌ಬಾಲಿದ್ದ ಹಾಗಿದೆಯಲ್ಲೋ ! ಇದು....ಇದಕ್ಕೇ ಲಾಯಖ್ಖು -

ಸರು—ಏನು ನಾಚಿಗೆಕೇಡು - ಒದೆಯುತ್ತೀರೀ -

ಭೀಮು—ಫುಟ್‌ಬಾಲನ್ನ ಒದೆಯದೆ ತೊಡೆಯ ಮೇಲೆ ಕೂಡಿಸಿ ಕೊಳ್ಳಲೇನೇ ?....ತೊಗೋ....

ಸರು ಅಯ್ಯೋ -

ಭೀಮು—ತೊಗೋ ಇನ್ನೊಂದು -

ಸಿದ್ದ—(ಬೋಂಡ ಹಾರಿಬರಲು) ಬೋಂಡ, ಬೋಂಡ.... (ಎತ್ತಿ ಕೊಂಡು) ಐದ್ರುಪ್ಪಾ -

ಹೈದರ್—ಅರೇ, ಸಾಪೇ, ನಸ್ಗೇ ಒಂದು ಕಿಕ್ -

(ಊಟದ ಮನೆಯಲ್ಲಿ)

ಭೀಮು—ತೋಗೋ -

ಹೈದರ್—(ಬೋಂಡ ಹಾರಿ ಬೀಳುತ್ತಿರಲು) ಹಾಂ....(ಟೋಪಿ ಎತ್ತಿ ಅದರಲ್ಲಿ ಕ್ಯಾಚ್ ಹಿಡಿದು) ಶ್ಹೀದಾ !

ಸಿದ್ದ—(ಒಂದು ಚೂರು ತಿಂದು) ಐದ್ರುಪ್ಪಾ....ನಾಸ್ಯೇಳಿದ್ದೇ ರೈಟು - ಬೋಂಡ ಪಸಂದೈತೆ -

ಹೈದರ್—(ಒಂದು ಚೂರು ತಿಂದು) ವ್ಹಾ !.... ಇದೂ... ನನ್ಗೂ ಬೇಕೀಕೆ !....

(ಊಟದ ಮನೆಯಲ್ಲಿ)

ಭೀಮು—ಹೋಯಿತು. ಹಾಳಾಯಿತು. ಏಳು, ಸರೋಜ,

ನಾನು ಹೇಳುತ್ತೀನಿ – ಅವನೇ ಮಾಡಿಕೊಳ್ಳಲಿ ಈ ದರಿದ್ರ ಊಟ (ತಟ್ಟೆ ಎತ್ತಿ ಬಿಸುಡಲು)

ಸರು—ಅಯ್ಯಯ್ಯೋ ತಟ್ಟೆ –

ಭೀಮು .. ಹೊಟ್ಟೆ....ಹೊಟ್ಟೆ .... ತಡಿ .... ತಡಿ .... ಇವರು ತಾನೇ ಯಾಕೆ ಊಟ ಮಾಡಬೇಕು ? ಇವರು ಸಾಯಲಿ - ಲೋ, ಶಂಕರ, ನಿನ್ನ ಗೊಜ್ಜು -

ಸರು – ಅಯ್ಯೋ, ಇದೇನು ಹುಚ್ಚು ?

ಭೀಮು – ನೀನು ದೂರ ಇರು – ನಿನ್ನ ಚಿತ್ರಾನ್ನ, ನಿನ್ನ ಚಟ್ನಿ, ನಿನ್ನ ಪಲ್ಯ , ನಿನ್ನ ಸಾರು –

ಶಂಕರ ಅಯ್ಯಯ್ಯೋ.

ಸರು—ಅಯ್ಯಯ್ಯೋ, ಅವನ ತಲೆ ಮೇಲೆ –

ಭೀಮು – ಮಸ್ತಕಾಭಿಷೇಕಾನೇ! ಈ ಮಹಾಶಂಕರನಿಗೆ ! ತೊಲಗೋ ಆಚೆಗೆ -

ಶಂಕರ—ಹೈದರ್....ಸಿದ್ದಾ....

ಸಿದ್ಧ—ಸಂಕ್ರಪ್ಪಾ....ಹಾಂ....ಹಾಂ....ಅಲ್ಲೇ ನಿಂತ್ಕೋ - ಇಲ್ಲೆಲ್ಲಾ ಗಲೀಜ್....

ಹೈದರ್— ಅರೆ....ಅರೆ....

(ಊಟದ ಮನೆಯಲ್ಲಿ)

ಭೀಮು– ಬಾ, ಸರೋಜ, ಊರಿಗೆ ಬಂದ ರಾತ್ರಿಯೇ ಉಪವಾಸ ಕೆಡವಿದ ನಡಿ... ಮಹಡಿಯ ಮೇಲೆ ಒಳ್ಳೆ ಗಾಳಿ .... ಅದನ್ನ ಕುಡಿದು ಕೊಂಡೇ ಬಿದ್ದುಕೊಳ್ಳೋಣ - ನಾಳೆ ಬೆಳಿಗ್ಗೆ ಅಷ್ಟು ಹೊತ್ತಿಗೇ ನಾನೇ ಕಾಫಿ ಮಾಡಿಕೊಂಡು ತಂದು ಕೊಡುತ್ತೇನೆ.

ಸರು –ಒಂದು ಬಟ್ಟಲು ನೀರಾದರೂ -

ಭೀಮು—ಕುಡಿ....ಬಟ್ಟಲು ಯಾಕೆ-ಅಲ್ಲಿ ನೋಡು, ತುಂಬಿಟ್ಟಿದ್ದಾನೆ ....ಬೇಕಾದಷ್ಟು ಕುಡಿ....ನಿಧಾನಕ್ಕೆ ಕುಡಿದು ಬಾ....

ಭೀಮು—(ಶಂಕರನನ್ನು ಹಿಡಿದು ಒರುತ್ತಾ) ಬಾರೋ, ಪರವಾಗಿಲ್ಲ, ಬಾರೋ – ತೊಗೋ ಈ ಟೌಲು, ತೊಗೊಂಡು ಹೋಗಿ ಚೆನ್ನಾಗಿ ಮೈಮೇಲೆ ನೀರು ಸುರಿದುಕೊಂಡು ಒರೆಸಿಕೋ....ಸಿದ್ಧಾ, ಹೈದರ್....ಏನೂ ತಿಳಿದು ಕೊಳ್ಳಬೇಡಿರೋ....ಶಂಕರ, ಮೈ ಒರೆಸಿಕೊಂಡು ನನ್ನದೇ ಒಂದು ಪಂಚೆ ಷರಟು ತೊಗೋ...ಆಮೇಲೆ, ಇಗೋ ಹತ್ತು ರೂಪಾಯಿ...ಓಡಿ, ನಾರಣಪ್ಪನ ಹೋಟಲಿನಿಂದ ನಾಲ್ಕು ನಾಲ್ಕು ಚಪ್ಪಾತಿ, ಚಟ್ನಿ, ಪಲ್ಯ, ಒಂದು ಫ್ಲಾಸ್ಕ ತುಂಬ ಕಾಫಿ ತಂದು . ಅಗೋ ಅಲ್ಲಿಟ್ಟು - ಆಮೇಲೆ ನೀವೆಲ್ಲಾ ಮಿಕ್ಕ ಚಿಲ್ಲರೆ ಯಲ್ಲಿ ಚೆನ್ನಾಗಿ ತಿಂದುಕೊಳ್ಳಿ .. ಗೊತ್ತಾಯ್ತೇನ್ರೋ....ಹೋಗಿ ಇನ್ನು – ಸರೋಜಾ – (ನಿಷ್ಕ್ರಮಿಸುವನು)

ಶಂಕರ—ಸಿದ್ದಾ ?

ಸಿದ್ದ—ಏನ್ರೂ ?

ಹೈದರ್— ಸಂಕ್ರೂ ?

ಶಂಕರ– ಮನೆಯಲ್ಲಿ ಮಾಡಿದ ಒಳ್ಳೆ ಅಡಿಗೆಯನ್ನ ಚೆಲ್ಲಿ –

ಸಿದ್ದ—ಓಟ್ಲಿಂದ ರೊಟ್ಟಿ, ಚಟ್ಣಿ – ?

ಹೈದರ್ ಸಾಮೀ ಪಾಗಲ್ಲಾಗಿದಾರೆ - ಶೀದಾ, ಪಾಗಲ್ಲಾಗಿದಾರೇಪಾ ಸಾಮೀಗೆ! ಅದಿಂಗೆ ಆಗಿದಾರೇಪಾ...ಧೌತ್ ದಿನ್ ತ್ರಕ್ ಶಾದಿ ಇಲ್ಲಾ ... ಈಗ ಪಕ್ದಂ ಶಾದಿ ಮಾಡಿದಾರೆ ಇಲ್ಲಾ – ಅದು ಸಿರ್ ಒಳ್ಗೆ ಖರಾಬಾಗಿ ಪಾಗಲ್ಲಾಗಿ ಓಗಿದಾರೇಪಾ... ಅರೆ ಅಲ್ಲಾ-ಸಾಮೀ, ಬೇಬೀ... ಆವ್ ಆವ್....

(ಎಲ್ಲರೂ ಓಡುವರು)

ಭೀಮು– (ಸರೋಜಳ ಜೊತೆಗೆ ಬರುತ್ತಾ) ಪಾಯಿಸ, ಚಿತ್ರಾನ್ನ, ಬೋಂಡ! ಬಂದ ಹೊತ್ತೇ ಹೊಟ್ಟೆಗಿಲ್ಲದೆ ಸಾಯಿಸಿದ.

ಸರು– ಸಾಧಾರಿಸಿಕೊಂಡು ಸ್ವಲ್ಪ ಊಟ ಮಾಡಬಹುದಾಗಿತ್ತು, ಹೀಗಿರೋಕ್ಕಿಂತ –

ಭೀಮು—ಏನು ಸುಧಾರಿಸಿಕೊಳ್ಳುವುದು ? ಆ ಅವಲಕ್ಷಣದ ಅಡಿಗೆ ಊಟ ಮಾಡಿ, ನಾಳೆ ಬೆಳಗ್ಗೆ, ಡಾಕ್ಟರನ್ನು ಹುಡುಕಿಕೊಂಡು ನಿಮ್ಮ ಊರಿನ ತನಕ ಓಡಬೇಕಿತ್ತು. ಈ ಉಪವಾಸ ವಾಸಿ. ನಾಳೆ ಬೆಳಗಾಗಲಿ. ಅವರನ್ನು ಒದ್ದು ಓಡಿಸಿ, ಬೇರೆ ಅಡಿಗೆಯವನಿಗೆ – ಏನಿದು ಊದುಕಡ್ಡಿ ವಾಸನೆ ?.... ಓಹೋ, ಹಚ್ಚಿಟ್ಟಿದ್ದಾರೆ! ಹೊಟ್ಟೆಗೆ ಅನ್ನ ಇಲ್ಲದೆ ಹೋದರೂ ಮೂಗಿಗೆ ವಾಸನೆ ಇರಲಿ ಅಂತಲೇನೋ ! (ಕಡ್ಡಿಗಳನ್ನು ಕಿತ್ತು, ಚುಕ್ಕಿ ಆರಿಸಿ) ಅವಿವೇಕಿಗಳು ! ಓ ಹೋ ಹೋ ಹೋ - ಅಂತಃಪುರ ಶೃಂಗಾರ ಮಾಡಿದ್ದಾರೆ ! ಓ !...ಎಲ ಎಲ, ಅಲ್ಲಿ ನೀನು ಆ ಪಾಟಿ ನೀರು ಕುಡಿದದ್ದು ಸಾಲದು ಅಂತ, ತಲೆಯ ಮೇಲೆ ಚಿಮುಕಿಸಿಕೊಳ್ಳೋಕ್ಕೆ ಪನ್ನೀರುದಾನಿ! ಹೊಟ್ಟೆ ಚುರು ಚುರು ಅನ್ನುತ್ತಿದ್ದರೂ ತಲೆಯಾದರೂ ತಣ್ಣಗಿರಲಿ ಅಂತ – ರ್‍ಯಾಸ್ಕಲ್ಸ್ (ಎತ್ತಿ ಬಿಸುಡುವನು)

ಸರು—ಅಯ್ಯೋ, ಬೆಳ್ಳಿ, ನೆಗ್ಗಿ ಹೋಗತ್ತೆ.

ಭೀಮು—ನೆಗೆದು ಬಿದ್ದು ಹೋಗಲಿ. ಪ್ರಾಣ ಹೋಗುತ್ತಿರುವಾಗ ಪನ್ನೀರುದಾನೀನೇನೇ ? ಸರೋಜ, ಐ ಆಮ್ ಸಾರಿ, ನಿನಗೆ ಅರ್ಧ ಜೀವ ಮಾಡಿ ಹಾಕಿವೆ ಈ ಮೃಗಗಳು. ತುಂಬ ಬಳಲಿದ್ದಿ. ಮಲಗಿಕೋ. ನಾಳೆ ಬೆಳಗ್ಗೆ ಎಲ್ಲದಕ್ಕೂ ಬೇರೆ ಏರ್ಪಾಡು ಮಾಡೋಣ. (ಆರಾಮ ಕುರ್ಚಿಯಲ್ಲಿ ಕೂಡುವನು)

ಸರು—ನಾನೇ ಇಲ್ಲಿ ಕೂತುಕೊಳ್ಳುತ್ತೇನೆ. ನೀವು ಮಲಗಿಕೊಳ್ಳಿ ಹೋಗಿ.

ಭೀಮು—ಏನೂ ? ನೀನು ಕೂತಿರುವುದು, ನಾನು ಹೋಗಿ ಅಲ್ಲಿ ಹಾಸಿಗೆಯಲ್ಲಿ ಮಲಗಿಕೊಳ್ಳುವುದು ? ನನ್ನ ಏನಂತ ತಿಳಿದುಕೊಂಡಿದ್ದೀ, ಸರೋಜ ? ಸುಮ್ಮನೆ ಮಲಗಿಕೋ, ಹೋಗು. (ಕರೆದೊಯ್ದು ಹಾಸಿಗೆ ಸೇರಿ, ಸರೋಜ ಅದರಲ್ಲಿ ಕೂಡಬೇಕು—ಎಬ್ಬಿಸಿ) ತಡಿ, ತಡಿ....(ಈಚೆ ಎಳೆದು) ನೋಡಿದೆಯೋನೇ ಇವರ ಆಟವನ್ನ ? ಆಂ ! ಆ ಶಂಕರ ಮಾಡಿ ಬಡಿಸಿದ ಔತಣದ ಅಡಿಗೆಯನ್ನ ಊಟಮಾಡಿ ಅಜೀರ್ಣವಾದೀತು ಅಂತ ಅರಗಿಸೋಕೆ ಅಡಿಕೆ ಎಲೆ ತಂದಿಟ್ಟಿದ್ದಾರೆ ! ಬೆಳ್ಳಿ ತಟ್ಟೆಯಲ್ಲಿ ! ಮರೆತೇವು ಅಂತ ಮಂಚದ

ಮೇಲೆ ! ಹಾಸಿಗೆಯಲ್ಲಿ ! (ತಟ್ಟೆ ನೆಲಕ್ಕೆ ಕುಕ್ಕುವನು)

ಸರು—ಹೋಯಿತೂ -

ಭೀಮು—ಹೋಗಲೀ....(ಹಾಸಿಗೆ ನೋಡಿ)ಹಯ್ಯೋ.ಸುಪ್ಪತ್ತಿಗೆಯೇ! ಏನು ಹಾಸಿರುವ ಆಟ ? ನೋಡು, ಸರೋಜ ; ನಾನು ಈ ಪೈವರನ್ನ ಕೆಲಸಕ್ಕೆ ಸೇರಿಸಿದ ದಿವಸದಿಂದ ಹೊಡೆದುಕೊಳ್ಳುತ್ತಾ ಇದ್ದೇನೆ, ಈ ಬಿಳಿ ದುಪಟಿಗಳು ಹಾಸಬೇಡವ್ರೋ, (ಕಿತ್ತು ಎಸೆದು) ಈ ದಿಂಬಿನ ಮೇಲೆ ದಿಂಬು ಬೇಡ (ಒಗೆದು) ಈ ಕಂಬಳಿ ರಗ್ಗುಗಳು ನನ್ನ ಮೈಗೆ ಉರಿಯುತ್ತವೆ (ನೆಲಕ್ಕೆ ನೂಕುತ್ತಾ) ಇಷ್ಟು ದಪ್ಪ ಮತ್ತೆ ಅನಾರೋಗ್ಯ (ಮಂಚದಿಂದ ತಳ್ಳಿ) ಈ ಪಟ್ಟೆ ಪಟ್ಟೆ ಜಮಾಖಾನ ಕಣ್ಣಿಗೆ ರಾವು(ದೂರ ಬಿಸುಟು) ಅಂತ... ಕೇಳೋಲ್ಲ, ಮಾತೆತ್ತಿ ದರೆ ಇವನ ಮುತ್ತಾತ ವಜೀದಲ್ಲೀಷಾಗೆ ಹೀಗೇ ಹಾಸುತ್ತಾ ಇದ್ದದ್ದು ಅನ್ನು ತ್ತಾನೆ ! ತಲೆಹರಟೆ. ಆಳುಗಳಿಗೆಲ್ಲಾ ತಲೆಹರಟೆ! ಬೆಳಗಾಗಲಿ, ಒಬ್ಬೊಬ್ಬರಿ ಗಾಗಿ ಮಾಡುತ್ತೇನೆ....ನೀನು ಮಲಗಿಕೋ ಹೋಗು, ಸರೋಜ....ಓ, ಬರಿ ಮಂಚವ್ರೋ ? ಐ ಆಮ್ ಸಾರಿ....ಈ ಜಮಖಾನ ಇದ್ದುಕೊಳ್ಳಲಿ....(ಹಾಸಿ) ಈ ಒಂದು ದಿಂಬಿರಲಿ....(ಇಟ್ಟು) ಹುಂ. ಮಲಗಿಕೋ. ನಿದ್ದೆಗೇನು. ಕಣ್ಣು ಮುಚ್ಚಿದ ತಕ್ಷಣ ಬರುತ್ತೆ. (ಸರೋಜ ಸವರಿಸಿಕೊಂಡು ಮಲಗಲು, ಒಂದು ದುಪಟಿ ಎಸೆದು) ಇದು ಹೊದ್ದುಕೋ....ಅಬ್ಬಬ್ಬಬ್ಬ....ದಿನಾ ಹೀಗೇ ಆದರೆ ಹಾರಿಬಲ್ಲು - (ಒಂದು ಪುಸ್ತಕ ಹಿಡಿದು ಆರಾಮಕುರ್ಚಿಯಲ್ಲಿ ಕೂಡುವನು...ತುಸು ಸಮಯದ ನಂತರ) ಸರೋಜ....ಸರೋಜ... ಸರೋಜ....(ಸಮೀಪಿಸಿ) ನಿದ್ದೆ ! ಹ್ಹುಂ ! (ವೀಣೆ ತಂದಿಟ್ಟು ಕೂತು ನುಡಿಸುತ್ತಾ)

"ಆಗಮ ಶಾಸ್ತ್ರಮು ಅನ್ನಿಯು ಚೆದುವಿನ–" ಊಹೂ, ಹೀಗಲ್ಲ, (ವೀಣೆ ತಿರುಗುಮುರುಗು ಇಟ್ಟುಕೊಂಡು, ಶೃತಿ ಕೆಡಿಸಿ, ಅಪಸ್ವರದಲ್ಲಿ)

"ಆಗಮ ಶಾಸ್ತ್ರಮು ಅನ್ನಿಯು ಚೆದುವಿನ –"

ಸರು—(ತಟ್ಟನೆ ಎದ್ದು ಕೂತು) ಆಂ ?...ಏನಿದು ?

ಭೀಮು—ಯಾವುದು ? ಇದಾ ? ಬ್ಯಾಕ್‌ಗ್ರೌಂಡ್ ಮ್ಯೂಸಿಕ್ ! ನಿನಗೆ ನಿದ್ದೆ ಬರುತ್ತಿರುವ ಹಾಗಿತ್ತು, "ಮಲಗು ಮಲಗೆಲೆ ನಾರಿ" ಹಾಡಿದರೆ– "ಸೋಜ ರಾಜಕುಮಾರಿ" ತರಹಾ–

ಸರು—ಸರಿ....ಆದರೆ, ಹೀಗೆ ತಪ್ಪು ತಪ್ಪಾಗಿ ಹಾಡಿದರೆ–

ಭೀಮು—ತಪ್ಪು ತಪ್ಪಾಗಿ ? ನಾನು ತಪ್ಪು ಹಾಡಿದನೇ ? ಅದು ತಪ್ಪಾದರೆ, ತ್ಯಾಗರಾಜ ಬರೆದಿರುವುದೇ ತಪ್ಪು.

ಸರು—ಅವನು ಬರೆದಿರುವುದು ಸರಿ. ನೀವು ಅರಚುತ್ತಿರುವುದು-ಅಪಶೃತಿ -

ಭೀಮು—ಅರಚುತ್ತಿದ್ದೇನೆಯೋ ? ಅಪಶೃತಿಯೋ ? ಮತ್ತೆ ನಾನು ಯಾಕೆ ವೀಣೆ ಇಟ್ಟುಕೊಂಡು ಕೂತಿರುವುದು ? ನನ್ನ ಗಂಟಲಿಗೆ ಗೈಡ್ ಮಾಡಲಿ ಅಂತ ಅಲ್ಲವೇ ?

ಸರು—ಹಯ್ಯೋ, ಆ ವೀಣೆ ಇಟ್ಟುಕೊಂಡು ಕೂತಿರುವ ಲಕ್ಷಣ ಒಂದೇ ಸಾಕು – ತಲೆಕೆಳಕಾಗಿ -

ಭೀಮು—ಏನು ? ತಲೆಕೆಳಕಾಗಿ ?....ಓ....ಇದು....ಹೀಗೆ ಹೀಗಿರ ಬೇಕಿತ್ತಲ್ಲಪಾ ? ಹೌದು ಹೌದು....(ಇಟ್ಟುಕೊಳ್ಳುತ್ತಾ) ಅದಕ್ಕೇ ನನಗೆ ತಂತಿ ಮೀಟುವುದು ಅಷ್ಟು ಕಷ್ಟ ಆಯಿತು. ಹೌದು, ಹೌದು, ಸರೋಜ, ನಾನು ನಿನ್ನ ವೀಣೆ ಮಾಡಿದವನೇ ಬುರುಡೆಗಳನ್ನ ತಲೆಕೆಳಗು ಇಟ್ಟುಬಿಟ್ಟಿದಾನೆ ಅಂದು ಕೊಂಡಿದ್ದೆ....

ಸರು— ಅಲ್ಲವೇ, ಪಾಪ ? ನಿಮ್ಮಷ್ಟು ಜಾಣತನ ಅವನಿಗೆಲ್ಲಿ ?.... ಅಲ್ಲದೆ ನಿಮ್ಮ ಸಂಪು ಶಾರೀರವನ್ನು ಗೈಡ್ ಮಾಡೋಕ್ಕೆ ಆ ತಿನ್ ತಂತಿಗಳಿಗೆ ಶಕ್ತಿ ಸಾಲದು....ನಿಮ್ಮ ಹಳ್ಳಿಯಲ್ಲಿ ಗಾಣ - ಗೀಣ - ?

ಭೀಮು—ಗಾಣ ? ನನ್ನ ಗಂಟಲಿಗೆ ಗಾಣ-? ಕರೆಕ್ಟ್, ಸರೋಜ ....ನೀನು ಹೇಳಿದ್ದು ಕರೆಕ್ಟ್. ನಿನ್ನ ಈ ತಿನ್ ತಂತೀಸ್ ನನಗೆ ಯೂಸ್ಲೆಸ್. ಶೃತಿಯೇ ಬೇಡ. ಹಾಗೇ ಹಾಡುತ್ತೇನೆ. "ಆಗಮ ಶಾಸ್ತ್ರಮು...."

ಸರು—ಅಯ್ಯಯ್ಯೋ (ಕಿವಿಗಳಿಗೆ ಬೆಟ್ಟಿಡಲು)

ಭೀಮು—ಅವತ್ತು ನಾನು ನಿಮ್ಮ ಮನೆಯಲ್ಲಿ ನೀನು ಹಾಡಿದಾಗ ನಾನು ಕಿವಿಯಲ್ಲಿ ಬೆಟ್ಟಿಟ್ಟುಕೊಂಡೆ ಅಂತ ಹುಯಿಲಿಟ್ಟೆ ಹುಚ್ಚಿ – ?

ಸರು— ಅಲ್ಲಲ್ಲ.ಅದಕ್ಕಲ್ಲ. ನಿಜವಾಗಲೂ ನಿಮ್ಮ ಸಂಗೀತ ಕೇಳೋಕ್ಕಾಗೋಲ್ಲ. ನಾಶವಾಗಿ ಹೋಗತ್ತೆ.

ಭೀಮು—(ವೀಣೆ ಪೊತ್ತು ಸರೋಜಳ ಮುಂದಿಟ್ಟು) ನೀನು ಉದ್ಧಾರ ಮಾಡು.

ಸರು—ನಾನಾ ? ಈಗ? ಹಸಿವಗೆ ಪ್ರಾಣ ಹೋಗುತ್ತಿದೆ. ಸಂಗೀತ ? ಮಾತಾಡೊಕ್ಕೇ ಶಕ್ತಿಯಿಲ್ಲ –

ಭೀಮು—ನಾನೂ ನಿನ್ನ ಜೊತೆಗೆ ಉಪವಾಸ ಇದ್ದೇನೆ ಅನ್ನುವುದು ಗೊತ್ತು ತಾನೇ ?

ಸರು—....(ಶೃತಿ ಸರಿ ಮಾಡಿ, ವೀಣೆ ಎತ್ತಿಟ್ಟುಕೊಳ್ಳಲು)

ಭೀಮು ಸರೋಜ, ಸ್ವಲ್ಪ ಹಾಗೇ ಇರು –

ಸರು—ಯಾಕೆ ?

ಭೀಮು—ಜೋಯಿಸರು ಹೇಳಿದ್ದು ಸುಳ್ಳಲ್ಲ.

ಸರು—ಅಂ ?

ಭೀಮು—ಅವರು. ನೀನು ವೀಣೆ ಹಿಡಿದು ಕೂತರೆ,ಸತ್ಯಲೋಕದಿಂದ ಇಳಿದು ಬಂದ ಸರಸ್ವತಿಯೇ ಅಂದಿದ್ದರು – ನಿಜ –

ಸರು ಸಾಕು, ನಿಮ್ಮ ಹೊಗಳಿಕೆ ನನಗೆ ಬೇಕಿಲ್ಲ....ನಾನೀಗ ಹಾಡಲೇ ಬೇಕೇನು ?

ಭೀಮು - ನೀನು ಹಾಡಬೇಕು, ಇಲ್ಲಾ ನಾನು ಹಾಡಬೇಕು – ಯಾವುದು?–

ಸರು --ಬೇಡ, ಬೇಡ ನಿಮ್ಮ ಧರ್ಮಕ್ಕೆ –
"ಆಗಮು ಶಾಸ್ತ್ರಮು ಅನ್ನಿಯು ಚದುವಿನ"

ಭೀಮು – ಕರ್ರೆಕ್ಟ್, ಕಂಟಿನ್ಯೂ....ಆ ಸುಸ್ವರ ಹಾಗೇ ಹೋಗಬೇಕು ಅಂತ ನನಗೆ ಗೊತ್ತು. ಆದರೆ ಊಹೂ....ಇದು ಬ್ರಹ್ಮನಿಗೆ ಗೊತ್ತಿರುವ ಹೊತ್ತಿಗೇ ವೀಣೆಯನ್ನ ತಾನೇ ಇಟ್ಟುಕೊಳ್ಳುವ ಅವಿವೇಕ ಮಾಡದೆ ಹೆಂಡತಿ

ಕೈಗೆ ಕೊಟ್ಟೆ. ಕಂಟಿನ್ಯೂ ಪ್ಲೀಸ್....(ಶರಟಿನ ತೋಳು ಮಡಚುವನು)

ಸರು—ಯಾಕಮ್ಮ ?

ಭೀಮು—ತಾಳ !

ಸರು—ದಯವಿಟ್ಟು, ಕೈ ಕಟ್ಟಿಕೊಂಡು ಕೇಳಿ. ತಾಳ ಬೇತಾಳ ಹಾಕೋಕ್ಕೆ ಹೋಗಬೇಡಿ.

ಭೀಮು—ಅದೂ ಸರಿಯೇ. ನಿನ್ನ ಸಂಗೀತದಲ್ಲಿ ನನ್ನ ತಾಳಜ್ಞಾನ ತಪ್ಪಿ ಹೋದರೂ ಹೋಗಬಹುದು. ಗೋ ಆನ್ ಪ್ಲೀಸ್....

(ಸರೋಜ ಕೀರ್ತನೆ ಮುಗಿಸಿ 'ಶ್' ಎನ್ನಲು)

ಗ್ರಾಂಡ್, ಗ್ರಾಂಡ್....ಸ್ವೀಟ್....ಹೊಟ್ಟೆ ತುಂಬಿದ ಹಾಗಾಯಿತು.

(ನೇಪಥ್ಯದಲ್ಲಿ ಶಂಕರ—'ಸ್ವಾಮಿ')

ಆಂ ? ಯಾರೋ ಅದು ? (ಬಾಗಿಲಿಗೆ ಹೋಗಿ) ನೀನಾ ? ತಿರುಗಿ ಬಂದೆ ಯೇನೋ ? ತೊಲಗಾಚೆಗೆ. (ಪಾರ್ಶ್ವ) ಅಲ್ಲಿಟ್ಟು ಹೋಗೋ. (ಪ್ರಕಾಶ) ಇನ್ನೊಂದು ಸರ್ತಿ ಮನೆ ಹೊಸಿಲು ಮೆಟ್ಟು, ಹಲ್ಲು ಉದುರಿಸಿಬಿಡುತ್ತೇನೆ.

ಸರು – ಯಾರದು ?

ಭೀಮು – ಅವನೇ, ನಿನಗೆ ಔತಣದ ಅಡಿಗೆ ಮಾಡಿ ಬಡಿಸಿದನಲ್ಲ – ಪಾಕಶಾಸ್ತ್ರ ಪ್ರವೀಣ ಶಂಕರ, ಪಾರ್ವತಿ ಪತಿ, ಕೈಲಾಸವಾಸಿ ಅವನೇ.

ಸರು - ಇಷ್ಟು ಹೊತ್ತೂ ಕೇಳಿದ್ದೇನೂ, ತಿರುಗೀ –

ಭೀಮು – ಏನು ಕೇಳಿದ್ದು ?

ಸರು - ಶಾಂತಮು ಲೇಕ ಸೌಖ್ಯಮು ಲೇದು –

ಭೀಮು–ಆದಾ ? ಅದು ಕೇಳೋಕ್ಕೇನು? ಕೇಳೋಕ್ಕೂ ಹೇಳೋಕ್ಕೂ ಸುಲಭ. ಮಾಡೋಕ್ಕೆ ? ಹುಟ್ಟುಸ್ವಭಾವ, ಸರೋಜ. ಈಗ ನಾನು ನನ್ನ ಈ ಹೈದರ್, ಸಿದ್ದರ ಮೇಲೆ ಎಗರಾಡಿದ್ದಕ್ಕೆ ಆಕ್ಷೇಪಿಸಿದೆಯಲ್ಲಾ, ನಾನು ನಿಮ್ಮ ಮನೆಯಲ್ಲಿ ಇದ್ದ ಮೂರೂ ಮುಕ್ಕಾಲು ದಿನಗಳಲ್ಲಿ ನೀನು ನಿನ್ನ - ಯಾಕೆ, ನಾನು ಬಂದ ಆ ಬೆಳಿಗ್ಗೆಯೇ, ಕಾಫಿ ಹೊತ್ತಾಗಿ ತಂದ ಅಂತ ಆ ನೀಲಿ...ತೆನೊಂದೆ !

ಸರು - ನಾನೇನು ಕಡಿಮೆ ಅಂತ ತೋರಿಸೋಕ್ಕೆ ನೀವು ನಿಮ್ಮ ಗೌರಿ ಶಂಕರನ್ನ ಬಡಿವರೇನೋ! ನೋಡಿ, ನನ್ನ ಅನ್ನುವವರು ಯಾರೂ ನಿಮ್ಮ ಶಾಂತ ಸ್ವಭಾವವನ್ನು ನೋಡಿಲ್ಲ. ನೀವಿನ್ನು ನಾಲ್ಕು ದಿನ ನಮ್ಮ ಮನೆಯಲ್ಲಿ ಇದ್ದಿದ್ದರೆ ಆ ಸೀನಿ ಸ್ವರ್ಗವೇ ಸೇರಿಬಿಡುತ್ತಿದ್ದ - ನಿಮ್ಮ ಲಕ್ಷದಲ್ಲಿ ನನ್ನದು ಒಂದು ಪಾಲಿಲ್ಲ.

ಭೀಮು—ಹಾಗೇ ಆಗಲಿ. ಆ ಒಂದಕ್ಕೂ ಕಡಿಮೆ ಇರುವ ಪಾಲನ್ನು ತಿದ್ದಿಕೊಳ್ಳುವುದು ನಿನಗೆ ಕಷ್ಟವಾದರೆ, ನಾನು ಮಿಕ್ಕಿದ್ದಷ್ಟು ಪಾಲನ್ನೂ ತಿದ್ದಿಕೊಳ್ಳುವುದು ಹೇಗೆ? ಸ್ವಲ್ಪ ಅಪ್ಪಣೆ ಕೊಡಿಸುತ್ತೀಯಾ ?

ಸರು—ಹೇಗೋ, ಅದೆಲ್ಲಾ ಗೊತ್ತಿಲ್ಲ. ಅಂತೂ ತಿದ್ದಿಕೊಳ್ಳಲೇಬೇಕು; ಇಲ್ಲದಿದ್ದರೆ ಇನ್ನು ಮೂರು ದಿವಸ ಜೀವ ಸಹಿತ ಇರೋಕ್ಕಾಗೋಲ್ಲ.

ಭೀಮು—ಗೊತ್ತು. ಸಮಸ್ಯೆ ಗೊತ್ತು, ಸೆಲ್ಯೂಷನ್ ಹೇಳು.

ಸರು—ಡಿಟರ್ಮಿನೇಷನ್ನೇ ಸೆಲ್ಯೂಷನ್ನು.

ಭೀಮು—ಡಿ ಟ ರ್ಮಿ ನೇ ಷ ನ್ನು ? ಆಲ್ ರೈಟ್....ಡಿಟರ್ಮಿನ್ ಮಾಡೋಣ. ಒಂದು ಅಗ್ರಿಮೆಂಟ್ ಮಾಡಿಕೊಳ್ಳೋಣ.

ಸರು ಅಗ್ರಿಮೆಂಟು ?

ಭೀಮು—ಕರಾರು ಒಪ್ಪಂದ, ಟ್ರೀಟಿ. ದಿ ಬೆಡ್ ಛೇಂಬರ್‌ಪ್ಯಾಕ್ಟ್ ಆಫ್ 19-ಅನ್ನೋಣ. ಭಾಷೆ ಹಾಕು.

ಸರು—ಭಾಷೆ ? ಥೂ, ನಾವೇನು ಎಳೆ ಮಕ್ಕಳೇ ?

ಭೀಮು—ಬೆಳೆದ ಮಕ್ಕಳೇ ಕೇಡು. ನಮಗೆ ಭಾಷೆ ಬೇಕೇ ಬೇಕು. ಎಲ್ಲಿ?-

ಸರು—ಹುಂ....(ಕೈ ಮೇಲೆ ಕೈ ಇಡುವಳು)

ಭೀಮು—ನನ್ನ ಷರತ್ತುಗಳನ್ನೆಲ್ಲಾ ಹೇಳುತ್ತೇನೆ.

ಸರು—ಹುಂ.

ಭೀಮು—ನಾನು - ಹೇಳು -

ಸರು—ನಾನು–

ಭೀಮು ಇನ್ನು ಮೇಲೆ -

ಸರು — ಇನ್ನು ಮೇಲೆ –

ಭೀಮು – ಯಾವಾಗಲೂ-

ಸರು—ಯಾವಾಗಲೂ-

ಭೀಮು – ಚಂಡಿತನ ಪೊಂಡುತನ ಮಾಡದೆ....ಹೂಂ–

ಸರು —ಚಂಡಿತನ ಪೊಂಡುತನ ಮಾಡದೆ-

ಭೀಮು — ಶಾಂತ ರೀತಿಯಿಂದ-

ಸರು - ಶಾಂತ ರೀತಿಯಿಂದ-

ಭೀಮು —ನಗು ನಗುತ್ತಾ ಇರುತ್ತೇನೆ.

ಸರು —ನಗು ನಗುತ್ತಾ ಇರುತ್ತೇನೆ.

ಭೀಮು—ಉಂ. ಆಯಿತು. (ದೂರ ಹೋಗುತ್ತಿರಲು)

ಸರು – ಮಿಸ್ಟರ್ –

ಭೀಮು – ಅಂ ?

ಸರು — ಅಗ್ರಿಮೆಂಟು ಅಂದಮೇಲೆ ಎರಡು ಪಾರ್ಟಿಗಳೂ ಷರತ್ತುಗಳನ್ನು ಒಪ್ಪಿಕೊಳ್ಳಬೇಕು. ತಾವೂ ದಯಮಾಡಿ. (ಭಾಷೆ ಹಾಕಿರೆಂದು ಕೈ ಚಾಚುವಳು)

ಭೀಮು —ಹೌದು, ಹೌದು....ಮರೆತಿದ್ದೆ....ಹುಂ (ಕೈ ಹಾಕುವನು)

ಸರು—ಹೇಳಿ.

ಭೀಮು — ಹೇಳಿಸಿ.

ಸರು - ನಾನು-

ಭೀಮು—ನಾನು-

ಸರು—ಇನ್ನು ಮೇಲೆ

ಭೀಮು ಇನ್ನು ಮೇಲೆ–

ಸರು - ಆಳುಗಳ ಮೇಲೆ ಕಾಳುಗಳ ಮೇಲೆ-

ಭೀಮು - ಆಳುಗಳ ಮೇಲೆ ಕಾಳುಗಳ ಮೇಲೆ-

ಸರು—ಅಡಿಗೆಯವನ ಮೇಲೆ-

ಭೀಮು ಅಡಿಗೆಯವನ ಮೇಲೆ-

ಸರು—ರೇಗಾಡೊಲ್ಲ.

ಭೀಮು—ಅವನು ಅಡಿಗೆ ಸರಿಯಾಗಿ ಮಾಡದೆ ಹೋದರೆ... ?

ಸರು - ನಾನು ಮಾಡುತ್ತೇನೆ.

ಭೀಮು—ನೀನು ಮಾಡುತ್ತೀಯಾ ? ಹಾಗಾದರೆ ರೇಗಾಡೊಲ್ಲ.

ಸರು—ಯಾವಾಗಲೂ–

ಭೀಮು—ಯಾವಾಗಲೂ-

ಸರು - ಶಾಂತ ರೀತಿಯಿಂದ–

ಭೀಮು—ಶಾಂತ ರೀತಿಯಿಂದ–

ಸರು - ಇರುತ್ತೇನೆ. ನಗುತ್ತಾ ನಗುತ್ತಾ ಇರುತ್ತೇನೆ.

ಭೀಮು—ಇರುತ್ತೇನೆ. (ನಗುತ್ತಾ) ನಗುತ್ತಾ ನಗುತ್ತಾ ಇರುತ್ತೇನೆ.

ಸರು - ಆಯಿತು.

ಭೀಮು - ಆಯಿತಾ ?

ಸರು—ಹುಂ.

ಭೀಮು—ಗುಡ್ ವೆರಿ ಗುಡ್....ಈಗ ನಾವು ಮಾಡಿಕೊಂಡಿರುವ ಈ ಕರಾರು ಎಲ್ಲಾ ಕರಾರುಗಳ ಹಾಗೇ ಅರ್ಥವಿಲ್ಲದ್ದೋ ಅಥವಾ ಇದರಲ್ಲಿ ಏನಾದರೂ ಸತ್ವವಿದೆಯೋ ಒಂದು ಸಣ್ಣ ಪರೀಕ್ಷೆಮಾಡಿ ನೋಡೋಣ. ಪುಟ್ಟ ಪರೀಕ್ಷೆ ?

ಸರು—ಹುಂ.

ಭೀಮು—ಆ ಊದುಕಡ್ಡಿಗಳನ್ನು ಹತ್ತಿಸು.

ಸರು—ಆಗಲಿ. (ಹತ್ತಿಸುತ್ತಾ) ತಾವು –

ಭೀಮು—(ಕೈ ಕಟ್ಟಿ) ಅಪ್ಪಣೆ.

ಸರು—ಈ ಹಾಸಿಗೆಗಳನ್ನು ಸರಿಯಾಗಿ ಹಾಸಿ. (ಭೀಮು ಕುಳಿತಿದ್ದ ಆರಾಮ ಕುರ್ಚಿಯನ್ನು ಮಡಚಿ ಗೋಡೆಗಿಡುವಳು)

ಭೀಮು—ಓ ...ಹುಂ....ಹುಂ... (ಹಾಸಿಗೆ ಹಾಸುತ್ತಾ) ಪಟ್ಟೆ ಪಟ್ಟೆ ಜಮಖಾನೆ ಒಳ್ಳೆಯದು, ಮಂಚದ ಮೇಲೆ ಚಿತ್ರ ಬರೆದ ಹಾಗಿರುತ್ತೆ....ಮೆತ್ತೆಗಳು ದಪ್ಪಗೇ ಇರಬೇಕು....ಮಲಗುವವರು ಲತಾಂಗಿಯರಾಗಿರಬೇಕು, ಮೆತ್ತೆ ದಪ್ಪಗೇ ಇರಬೇಕು....ದುಪಟಿ ಬಿಳಿಯದೇ ಬೆಸ್ಟು ಶ್ರೀಮನ್ನಾರಾಯಣ ಅಂಡ್ ಲಕ್ಷ್ಮಿ ಇನ್ ಕ್ಷೀರಸಾಗರದ ಪಿಕ್ಚರ್ರು ಕಣ್ಣಿಗೆ ಕಟ್ಟುತ್ತೆ. ನೋಡು, ನಾನು ಅಲ್ಲಿ ಮಲಗಿ, ನೀನು ಅಲ್ಲಿ ಕೂತು ನನ್ನ ಕಾಲು ಒತ್ತುತ್ತಿದ್ದರೆ, ದೂರ ದೀಪ ನೋಡುವವರೆಲ್ಲಾ ತಮ್ಮ ತಮ್ಮ ಕೆನ್ನೆಗಳಿಗೆ ಹೊಡೆದುಕೊಳ್ಳುತ್ತಾ-ದೇವರ ದರ್ಶನ-(ನಗುತ್ತಾ) ದಿಂಬುಗಳು, ಎರಡೆರಡು ಬೇಕು ಒರಗು. ದಿಂಬುಗಳಲ್ಲ ಇವು -.... ಈ ಕಂಬಳಿಗೂ ಅಷ್ಟೇ, ಚಳಿಗೆ, ಶಾಖದ ಜೊತೆಗೆ ಸ್ವಲ್ಪ ಭಾರವೂ ಬೇಕು, ಮೈ ಮೇಲೆ, ಅಲ್ಲ ?....ಉಂ....ಆಯಿತು.

ಸರು ಆ ಪನ್ನೀರುದಾನಿ ಅಲ್ಲಿಡಿ.

ಭೀಮು—ತಂದೆ....ಇಟ್ಟೆ ...ನೀನು ಆ ಅಡಿಕೆ ಎಲೆ ತಟ್ಟೆ ತಂದಿಡಿಲ್ಲಿ.

ಸರು —ಉಹುಹುಹು - ಅಷ್ಟು ಒರಟಾಗಿ ಹೇಳಿದರೆ ? ಆಳುಗಳಿಗೆ ಹೇಳುವ ಹಾಗೆ ಹೇಳುತ್ತಿದ್ದೀರಿ !

ಭೀಮು ಅರಸಿಗೆ ಹೇಳುವ ಹಾಗೆ ಹೇಳಬೇಕಲ್ಲವೇ ? ಮೆಲ್ಲಗೆ, ಸಾಫ್ಟಾಗಿ, ರೊಮ್ಯಾಂಟಿಕ್ಕಾಗಿ - ?

ಸರು - (ನಗುವಳು)

ಭೀಮು ಆಲ್ ರೈಟ್....ಪ್ರಿಯೆ !

ಸರು – ಅಂ ?

ಭೀಮು — ಪ್ರಾಣೇಶ್ವರಿ –

ಸರು—ಅಯ್ಯೋ -

ಭೀಮು—ಪ್ರಾಣಕಾಂತೇ -

ಸರು—ಅಯ್ಯಯ್ಯೋ -

ಭೀಮು—ಮನಮೋಹನಾಂಗೀ, ಆ ತಾಂಬೂಲದ ತಟ್ಟೆಯನ್ನು ಈ ಹಂಸತೂಲಿಕಾ ತಲ್ಪದ ಮೇಲೆ ತಂದಿರಿಸಲಾರೆಯಾ ?

ಸರು ಅಯ್ಯಯ್ಯೋ ಥು, ಇದೇನಿದು ಹಾಳು ನಾಟಕದ ಸ್ಟೈಲು ?

ಭೀಮು ನಾಟಕದ ಸ್ಟೈಲು ನಿನಗೂ "ಹಾಳು" ಆಗಿಹೋಯಿತಾ?.... ಉ....ಸಿನಿಮಾ ಸ್ಟೈಲು - ?

ಸರು – ಊಹುಹು – ಅದೂ ಬೇಡಿ....

ಭೀಮು—ಹಾಗಾದರೆ ಮನೆಯ, ಸ್ವೀಟ್ ಹೋಂ ಸ್ಟೈಲು ? ಟ್ರೈ ಮಾಡುತ್ತೇನೆ ತಡಿ. ನಿನ್ನ ಹೆಸರು ಸರೋಜ, ಸರೂ ಅಂತ ಕೂಗಿದರೆ ಚೆನ್ನೋ, ರೋಜಿ ಅಂತ ಕೂಗಿದರೆ ಚೆನ್ನೋ ?

ಸರು—ಉಂ....ನೀವೇನಾದರೂ ಕೂಗಿಕೊಳ್ಳಿ.

ಭೀಮು—ಐ ವೋಟ್ ಫಾರ್ ರೋಜೀ....ರೋಜೀ, ಆ ಅಡಿಕೆ ಎಲೆ ತಟ್ಟೆ ತಂದಿಡೇ ಸರಿಯಾ ?

ಸರು—ಥು, ಹೋಗೀ....ನೀವು ಇಷ್ಟೆಲ್ಲಾ ಮಾತಾಡೋಕ್ಕೆ ಬರುತ್ತೆ, ಹಸಿಹೊಟ್ಟೆಯಲ್ಲಿ ಅಡಿಕೆ ಎಲೆ ಏನು ಚೆನ್ನ ಅಂತ ತೋರಲಿಲ್ಲವೇನೋ ?

ಭೀಮು (ನಗುತ್ತಾ) ನೀನು ನನ್ನನ್ನು ನಿಜವಾಗಲೂ ಹೇಳಿ ಮಾಡಿಸಿದ ದಡ್ಡ ಅಂತ ತಿಳಿದುಕೊಂಡಿರುವ ಹಾಗಿದೆ. ಒಂದು ನಿಮಿಷ, ಬಂದೆ. (ಹೋಗಿ ಶಂಕರ ತಂದಿಟ್ಟಿದ್ದ ಚಪ್ಪಾತಿ ತಟ್ಟೆ ಕಾಫಿ ಗ್ಲಾಸ್ಸು ತರುತ್ತಾ) "ಇಂದಿನ ದಿನವೆ ಸುದಿನಂ"

ಸರು—(ಓಡಿ) ಏನಿದು ?

ಭೀಮು—ಕಂದ, ರಾಗ, ಕಾನಡ.

ಸರು—ಅಲ್ಲ, ಬೇಗಡೆ.

ಭೀಮು –ಬೇಗಡೆ ? ಅಲ್ಲ, ಕಾನಡ, ಸರೋಜ, ಕಾನಡ.

ಸರು—ಛಿ ಛೀ, ಅದು ಬೇಗಡೆ. ನನಗಷ್ಟು –

ಭೀಮು—ಓ....ನಿನ್ನ ಹಠ ನೀನು ಬಿಡೋಲ್ಲ (ತಟ್ಟೆ ಎತ್ತಿ ಹಾಕುವಂತ ನಟಿಸಲು)

ಸರು ...(ತಡೆದು) ಹೌದು ಹೌದು, ತಡೆಯಿರಿ. ಹಸಿವಿನಲ್ಲಿ ರಾಗಜ್ಞಾನ ತಪ್ಪಿತ್ತು. ನೀವು ಹಾಡಿದ್ದು ಕಾನಡವೇ !

ಭೀಮು—(ನಗುತ್ತಾ) ಕಾನಡ ?.... ಅಲ್ಲವೇ, ನೋಡೋಣ, ನಿನ್ನ ತಮಾಷೆ ಮಾಡಿ ಕಾನಡ ಅಂದರೆ, ನೀನೂ ಕಾನಡ ಅಂತು ಒಪ್ಪಿಕೊಳ್ಳುವುದೇ? ನಾನು ಹಾಡಿದ್ದು ಬೇಗಡೆಯೇ.

ಸರು—ಹೌದ್ಹೌದು. ಅದು ಬೇಗಡೆಯೇ. ನೀವು ನೀಲಾಂಬರಿ ಅಂದರೆ ಅದೇ....ಅದಲ್ಲ, ನಾನು ಕೇಳಿದ್ದು, ಇದು !

ಭೀಮು—ಇದಾ? ಇದು ಚಪ್ಪಾತಿ, ಚಟ್ನಿ, ನಾಲ್ಕು ನಾಲ್ಕು, ನಿನಗೆ ನನಗೆ. ಇದು ಫ್ಲಾಸ್ಕ ತುಂಬ ಕಾಫಿ, ನನಗೆ, ನಿನಗೆ !

ಸರು—ಓ, ಇಲ್ಲಿ ಕೊಡೀ, ಕೊಡೀ -

ಭೀಮು—(ಎಟುಕದಂತೆ ತಟ್ಟೆ ಮೇಲೆತ್ತಿ) ಹಾ ಹಾ ಹಾ, ನಾಟ್ ಸೋ ಫಾಸ್ಟ್ ಪ್ಲೀಸ್....ಪ್ಯ ಬೆಳೆದಷ್ಟೂ ಮತಿ ಬಡವಾಗುತ್ತಾ ?

ಸರು— ....ಇಲ್ಲ.

ಭೀಮು—ನಾನು ಫೂಲ್ ?

ಸರು—ಉಹು. ಅಲ್ಲ.

ಭೀಮು—ಕಾಡುಮನುಷ್ಯ ಇರಬಹುದು ?

ಸರು—ಅಲ್ಲ, ಅಲ್ಲ....ನಾನು ಕಾಡುಬೆಕ್ಕು, ಕೊಡೀ –

ಭೀಮು—(ನಗುತ್ತಾ, ಸೊಂಟ ಬಳಸಿ ಹಿಡಿದು ಮಂಚದತ್ತ ನಡೆಸುತ್ತಾ) ಕಂ ಆನ್ ಮೈ ಡಿಯರ್ ವೈಲ್ಡ್ ಕ್ಯಾಟ್ !

—ತೆರೆ—

ದೃಶ್ಯ ೧೫

(ಮತ್ತೆ ಬೆಂಗಳೂರು. ಒಂದು ಬೀದಿಯಲ್ಲಿ ಚಂದ್ರು ಮತ್ತು ಪುಟ್ಟಾ ಜೋಯಿಸರು)

ಪುಟ್ಟ—ನಮ್ಮ ಭೀಮು ? ನಮ್ಮ ಭೀಮು ಬಂದಿದಾನೆಯೇ ?

ಚಂದ್ರು—ನೂರು ಸಲ ಹೇಳಿದೆ. ನೂರ ಒಂದನೆ ಸಲ ಹೇಳುತ್ತೇನೆ, ನಿಮ್ಮ ಭೀಮು ಬಂದಿದಾನೆ.

ಪುಟ್ಟ- ಅಲ್ಲಪ್ಪೋ, ಊರಿಗೆ ಹೋಗಿ ಇನ್ನೂ ಲಕ್ಷಣವಾಗಿ ಒಂದು ತಿಂಗಳೂ ಆಗಿಲ್ಲವಲ್ಲೋ !

ಚಂದ್ರು—ತಂತಿ ಬಂದಾಗ ನಮಗೂ ಆಶ್ಚರ್ಯವಾಯಿತು.

ಪುಟ್ಟ - ಏನಂದಿ ? ತಂತಿ ಕೊಟ್ಟು ಬಂದನಾ ? ಊಂ....ನನಗೆ ಗೊತ್ತು. ನನಗೆ ಗೊತ್ತು. ನಾಲ್ಕುನಾಲ್ಕು ಸರ್ತಿ ನಾಲಿಗೆ ಒರಿದುಕೊಂಡೆ, ಬೇಡಪ್ಪೋ ಅಪ್ಪಾ, ಆ ಪಿಶಾಚಿ ಸಹವಾಸ ಅಂತ. ಹುಡುಗರು, ಕೇಳುತ್ತೀರಾ ?

ಚಂದ್ರು—ಜೋಯಿಸರೇ-

ಪುಟ್ಟ—ಅವಳನ್ನೂ ಕರೆದುಕೊಂಡು ಬಂದಿದ್ದಾನೆ ತಾನೇ ?

ಚಂದ್ರು—ಒಬ್ಬನೇ ಬರುತ್ತಾನೆಯೋ ?

ಪುಟ್ಟ—ಗೊತ್ತು, ಗೊತ್ತು ನನಗೆ. ದೊಡ್ಡವರ ಮಾತು ಅಂದರೆ ನಿಮಗೆ-

ಚಂದ್ರು—ಜೋಯಿಸರೆ, ನೀವು-

ಪುಟ್ಟ—ನೀನು ಸುಮ್ಮನೆ ನಡಿಯೋ....ಹೀಗಾಗತ್ತೆ ಅಂತ ನನಗೆ ಗೊತ್ತಿತ್ತಪ್ಪ .. ಕೊಚ್ಚಿಬಿಟ್ಟ ರಸ್ತೆಯಲ್ಲಿ ಜಂಬ... ನಮ್ಮ ಸರೋಜ ನಮಗೆ ಗೊತ್ತಿಲ್ಲವೇ ?

ಚಂದ್ರು—ತಡೆಯಿರಿ, ನೀವೇನು ಹೇಳುತ್ತಾ ಇದ್ದೀರಿ ?

ಪುಟ್ಟ—ನಿನ್ನ ತಲೆ, ನಿನ್ನ ತಲೆ ಹೇಳುತ್ತಾ ಇದ್ದೀನೋ, ಅವಳೂ ನಾಟಕ ಆಡಿದಳು, ಇವನೂ ಕಟ್ಟಿಕೊಂಡ. ಹಳ್ಳಿಗೆ ಹೋದ. ಅಲ್ಲಿ ಇವನನ್ನ

ದೊಂಬರಾಟ ಆಡಿಸಿದ್ದಾಳೆ. ತಲೆ ತಿರುಗಿ, ಕಣ್ಣು ಕತ್ತಲೆಯಿಟ್ಟು, ಸಾಕಪ್ಪಾ ಸಾಕು ಅನ್ನಿಸಿ ಉಪಾಯವಾಗಿ ಕರೆದುಕೊಂಡು ಬಂದಿದ್ದಾನೆ. ನಾಳೆ ಅವಳನ್ನ ಇಲ್ಲೇ ಬಿಟ್ಟು ಪರಾರಿಯಾಗದಿದ್ದರೆ ಕೇಳು–

ಚಂದ್ರು—ಇಲ್ಲ, ಜೋಯಿಸರೇ, ಹಾಗೇನಿಲ್ಲ. ಅವರೂ ಮನೆಯಲ್ಲಿ ನಗುನಗುತ್ತಾ ಓಡಾಡುತ್ತಾ ಇದ್ದರು. ಇವನೂ ನಗುತ್ತಿದ್ದ. ಅವನಿಗೆ ನೀವು ಹೇಳಿದ ಹಾಗೆ ಬೇಜಾರಾಗಿದ್ದರೆ, ಗೊತ್ತಾಗದೆ ಇರುತ್ತಿತ್ತೇ ? ಅಲ್ಲದೆ ನಾಳೆ ಬೆಳಗ್ಗೆ ಎಲ್ಲರೂ ಬೃಂದಾವನಕ್ಕೆ ಹೋಗೋಣ ಅಂತ ಹೇಳುತ್ತಾ ಇದ್ದ.

ಪುಟ್ಟ—ಬೃಂದಾವನ ? ಅಯ್ಯಾ, ಸುಮ್ಮನಿರಿ, ನಾನು ಕಾಣದ್ದಲ್ಲ. ನಡಿ, ನಿಮಗೆ ಕಾಣಿಸುತ್ತೇನೆ, ಅವನ ಬೃಂದಾವನ ! ನಡೀ –

(ನಿಷ್ಕ್ರಮಿಸುವರು)

ದೃಶ್ಯ ೧೬

(ರಾವ್‌ಸಾಹೇಬರ ಬಂಗಲೆಯಲ್ಲಿ. ಎಲ್ಲರ ಊಟವೂ ಮುಗಿದಿದೆ. ಸೀನಿ ತಾಂಬೂಲದ ತಟ್ಟೆ ತಂದಿಟ್ಟು, ಊದುದಾನಿ ಹತ್ತಿಸಿ ಹಿಂತಿರುಗುವನು. ರಾವ್ ಸಾಹೇಬರೂ, ಜೋಯಿಸರೂ, ಭೀಮೂ ಮತ್ತು ಚಂದ್ರೂ ಪ್ರವೇಶಿಸುವರು.)

ರಾಮು—ಬನ್ನಿ, ಬನ್ನಿ, ದಯಮಾಡಿ.

ಭೀಮು—ಊಟ ಸಿಕ್ಕಾಪಟ್ಟೆ ಜಾಸ್ತಿಯಾಗಿ ಹೋಯಿತು. ಜೋಯಿಸರೇ. ಬನ್ನಿ, ಏನು ನೋಡುತ್ತಿದ್ದೀರಿ ? ಲಕ್ಷಮ್ಮನವರು ಊಟ ಮಾಡುತ್ತಿರುತ್ತಾರೆ, ಬನ್ನಿ....

ಪುಟ್ಟ– ಶ್, ಮುಚ್ಚು ಬಾಯಿ....ಕುಕ್ಕರಿಸು ಅಲ್ಲಿ....

ಭೀಮು—ಅಂ ?

ರಾಮು—ಜೋಯಿಸರೇ ?

ಪುಟ್ಟ—ಲಕ್ಷಮ್ಮ ಊಟ ಮಾಡುತ್ತಿದ್ದಾಳಂತೆ ! ಯಾರ ಉಪಕಾರಕ್ಕೆ ಮಾಡುತ್ತಿದ್ದಾಳೆ ? ಅವಳು ನನ್ನ ಹೆಂಡತಿ

ರಾಮು—ಜೋಯಿಸರೇ – ?

ಚಂದ್ರು—ಅವರಿಗೆ....ಮಾವನವರೇ –

ಪುಟ್ಟಿ—ನೀನು ಸುಮ್ಮನೆ...ಆ....ಆ....ಎಲೆ ಅಡಿಕೆ ಹಾಕಿಕೋ.... ನಮ್ಮ ಮಾತಿಗೆ ಬರಬೇಡ. ಭೀಮೂ, ಎಲ್ಲೋ ಅವಳು ?

ಭೀಮು—ಯಾರು ?

ಪುಟ್ಟಿ—ನಿನ್ನ ಹೆಂಡತಿ.

ಭೀಮು—ಯಾಕೆ ? ಅವಳೆಲ್ಲಿ ಹೋಗುತ್ತಾಳೆ ? ಒಳಗೆ ಹೆಂಗಸು ಹೆಂಗಸರು –

ಪುಟ್ಟಿ—ಬಾಯಿ ಬಡಿಯಬೇಡವೋ, ಗಂಡಸು ! ರಾವ್‌ಸಾಹೇಬರೇ, ಇವನು ಏನು ಹೇಳಿದ ನಿಮಗೆ ? ನಾಳೆ ಬೃಂದಾವನಕ್ಕೆ -

ಭೀಮು—ಹೂಂ. ಹೇಳಿದೆ. ಎಲ್ಲಾ ಹೋಗೋಣ ಅಂತ. ನೀವೂ ರೆಡಿ ತಾನೇ ?

ಪುಟ್ಟಿ—ಯಾಕೆ ? ಕನ್ನಂಬಾಡಿಯಲ್ಲಿ ಹಾರಿ ಬಿದ್ದು ಪ್ರಾಣ ಬಿಡೋಕ್ಕೇ ? ....ಲೋ, ನೀನು ನಿಜವಾಗಲೂ ಅಲ್ಲಿಗೆ ಹೋಗೋಕ್ಕೆ ಬಂದಿದ್ದೀಯೇನೋ? ಹಿಂದೆಲ್ಲಾ ಆಡಿದ ನಾಟಕ ಈಗ ಬೇಡ. ಮದುವೆ ಆಗಿಹೋಗಿದೆ. ಏನು ಮನಸ್ತಾಪ ಇದ್ದರೂ ಸಮಾಧಾನವಾಗಿ ಕೂತು ನಾವು ನಾವು –

ಭೀಮು—ಮನಸ್ತಾಪ ? ಯಾರಿಗೆ ? ಜೋಯಿಸರೇ ?

ರಾಮು—ಜೋಯಿಸರೇ ?

ಚಂದ್ರು—ಭೀಮು, ನಾನು ಹೇಳುತ್ತೀನಿ. ಇವರು, ನೀನು ಅತ್ತಿಗೇ ಜೊತೆಯಲ್ಲಿ ಇಷ್ಟು ದಿನ ಇದ್ದು ಸಾಕಾಗಿ, ಈ ಉಪಾಯ ಹೂಡಿ, ಅವರನ್ನು ಇಲ್ಲೇ ಬಿಟ್ಟು ಹೊರಟು ಹೋಗೋಣ ಅಂತ ಬಂದಿದ್ದಿ ಅಂತ -

ಪುಟ್ಟಿ—ಹುಂ....ಹುಂ....ಇಲ್ಲ ಅನ್ನೋ -

ರಾಮು—ಮಿ....ಮಿಸ್ಟರ್ ಭೀಮರಾವ್ – ?

ಭೀಮು— ಏನು ? ಜೋಯಿಸರೇ, ಮನಸ್ತಾಪ ? ಅವಳನ್ನ ಇಲ್ಲೇ

ಬಿಟ್ಟು, ನಾನು ಹೊರಟು ಹೋಗೋಕ್ಕೆ ಬಂದಿದ್ದೇನೆ...?....

ಪುಟ್ಟ :— ಹುಂ, ಹುಂ, ಅದೇ ನಿಜ....ಚಿಂತಿಲ್ಲ. ಕಾಲ ಮಿಂಚಿಲ್ಲ– ನಾವೆಲ್ಲಾ ಕೂತು, ಅವಳಿಗೆ ಹೇಳಿ-

ಭೀಮು—(ನಗುತ್ತಾ) ಮೈ ಗಾಡ್....ಜೋಯಿಸರೇ, ರಾವ್ ಸಾಹೇಬರೇ, ಈ ಐಡಿಯಾ ನಿಮಗೆ ಹೇಗೆ ಬಂತು. ನನಗೆ ಅರ್ಥವೇ ಆಗುತ್ತಾ ಇಲ್ಲ. ಸರೋಜಂಗೆ ಗೊತ್ತಾದರೆ. ಜೋಯಿಸರೇ, ನಿಮ್ಮನ್ನ ಜೀವಸಹಿತ ಬಿಡೋಲ್ಲ-

ಪುಟ್ಟ—ಏನೂ- ?

ಭೀಮು—ಭೀ ಭೀಭೀ ಭೀಭೀ - ಐ ಆಮ್ ಸಾರಿ ಅವಳು ಏನು ಅಂತ ನಿಮಗೆ ಯಾರಿಗೂ ತಿಳಿದುಕೊಳ್ಳೋಕ್ಕೆ ಸಾಧ್ಯವೇ ಆಗಿಲ್ಲ.

ಪುಟ್ಟ—ಲೋ-

ಭೀಮು—ಜೋಯಿಸರೇ, ನಾನು ಬಾಯಿಲಿ ಹೊಗಳಿ ಪ್ರಯೋಜನ ವಿಲ್ಲ. ಪ್ರತ್ಯಕ್ಷವೇ ನಿಮಗೆ ಪ್ರಮಾಣವಾಗಬೇಕು. ಆಲ್ ರೈಟ್....ಈಗ ನಾವು ಎಲ್ಲಾ ಒಂದು ಚಿಕ್ಕ ಪ್ರಯೋಗ ಮಾಡಿ ನೋಡೋಣವಾ ?

ಪುಟ್ಟ—ಏನು ?

ಭೀಮು—ಏನಿಲ್ಲ. ನಾವಿಷ್ಟು ಗಂಡಸರು ಇಲ್ಲಿದ್ದೇವೆ. ನಮ್ಮ ನಮ್ಮ ಹೆಂಡತಿಯರು ಅಲ್ಲಿ ಒಳಗಿದ್ದಾರೆ. ಅವರಲ್ಲಿ ಯಾರಿಗೆ ನಮ್ಮ ಮೇಲೆ ಹೆಚ್ಚು ಗೌರವ-ಭಯದ ಮಾತು ಬೇಡ-ಹೆಚ್ಚು ಮರ್ಯಾದೆ ಇದೆ ಅಂತ ಪತ್ತೆ ಹಚ್ಚುವ ಒಂದು ಸಣ್ಣ ಪ್ರಯೋಗ-

ಪುಟ್ಟ—ಮಾಡು. ಮಾಡು. ಏನು ಪ್ರಯೋಗವೋ, ಪ್ರಯಾಗವೋ- ನೋಡೋಣ-ಅಲ್ಲ, ರಾವ್‌ಸಾಹೇಬರೇ, ಇವನು-

ಭೀಮು—ಮಾತು, ಮಾತು ಬೇಡ ಪ್ರಯೋಗ ದೊಡ್ಡದೇನಲ್ಲಾ ಸುಮ್ಮನೆ ಇಲ್ಲಿ ಬರಬೇಕಂತೆ ಅಂತ ಹೇಳಿಕಳುಹಿಸೋಣ-

ಪುಟ್ಟ—ಉಂ - ?

ಭೀಮು—ಯಾರು, ಎದುರು ಉತ್ತರ ಹೇಳದೆ, ಅಡ್ಡಾದಿಡ್ಡಿ ಮಾತಾಡದೆ ಬರುತ್ತಾರೋ—ಅವರು—

ಪುಟ್ಟ— ಅವರಿಗೆ ಗಂಡನ ಮೇಲೆ ಭಯ, ಭಕ್ತಿ, ಪ್ರೀತಿ, ಲೊಟ್ಟೆ-?

ಭೀಮು—ಲೊಸಗು ಎಲ್ಲಾ ಇವೆ ಅಂತ-ತೀರ್ಮಾನ ಆಗಬಹುದಾ ?

ಪುಟ್ಟ—ಆಗಬಹುದು. ನೋಡೋಣ. ಕರೆಸು.

ಭೀಮು—ನಾನು-ಪ್ರಯೋಗ ಮಾಡುತ್ತಿರುವವನು, ನನ್ನದು ಕಡೆ ಸರದಿ....ಎಲ್ಲರಿಗೀಂತ ದೊಡ್ಡವರು ನೀವು, ನಿಮ್ಮಿಂದಲೇ ಪ್ರಾರಂಭ....

ಪುಟ್ಟ—ಆಗಲಿ....ಹೇಗೆ-?

ಭೀಮು—ಹೇಳುತ್ತೀನಿ....ಸೀನೀ...ಸೀನೀ....

ಸೀನಿ—(ಪ್ರವೇಶಿಸಿ) ಊದುಕಡ್ಡಿ ಹತ್ತಿಸಿಟ್ಟಿದ್ದೀನಿ. ಸ್ವಾಮೀ....

ಭೀಮು—ಹೌದು. ವಾಸನೆ ಬರುತ್ತಾ ಇದೆ.ಥ್ಯಾಂಕ್ಸ್....ಈಗ ನೀನು ಒಳಗೆ ಹೋಗಿ-

ಪುಟ್ಟ—ನಾನು ಹೇಳುತ್ತೀನಿ-ಅವಳಿದಾಳಲ್ಲೋ ! ಯಾರು-?

ಭೀಮು – ಅವರ ಹೆಂಡತೀನೋ....ಲಕ್ಷಮ್ಮನವರೋ....

ಸೀನಿ—ಗೊತ್ತು.

ಪುಟ್ಟ— ಅವಳನ್ನ ನಾನು ಕರದೆ, ಬರಬೇಕಂತೆ ಅಂತ ಹೇಳೋ-

ಸೀನಿ—ಹುಂ. (ಹೋಗುವನು)

ಚಂದ್ರು—ಬರುತ್ತಾರೆ, ಬರುತ್ತಾರೆ....ಭೀಮು, ಅವರದು ಮೊದಲೇ ಊಟ ಆಯಿತು. ಇಷ್ಟು ಹೊತ್ತಿಗೆ ಎಲೆಅಡಿಕೆ ಹಾಕಿಕೊಂಡು ಮನೆ ಸೇರಿರ ಬೇಕು-

ಪುಟ್ಟ—ಏನು ? ಯಾರು ? ಅವಳೇ ? ನನ್ನ ಹೆಂಡತಿಯೇ ? ಮನೆಗೆ ಹೊರಟು ಹೋಗಿರುತ್ತಾಳೆಯೇ? ನನಗೆ ಹೇಳದೆ? ರಾವ್‌ಸಾಹೇಬರೇ, ಈ ಹುಡುಗರು ನಮ್ಮನ್ನ (ಸೀನಿ ಬರಲು) ಏನೋ. ಇವರು....ಎಲ್ಲೋ ಅವಳೆಲ್ಲೋ?

ಸೀನಿ—ಇಲ್ಲ.

ಪುಟ್ಟ—ಇಲ್ಲ ? ಇಲ್ಲ ಅಂದರೇನೋ ?

ಸೀನಿ—ಅಡಿಕೆ ಎಲೆ ತೊಗೊಂಡು ಮನೆಗೆ ಹೊರಟು ಹೋದರಂತೆ–

ಚಂದ್ರು—ನಾನು ಏನು ಹೇಳಿದೆ ?

ಪುಟ್ಟ— ಏನು ? ಅವಳು....ಹೊರಟು ಹೋದಳೇ ?

ಭೀಮು—ಇವರಿಗೆ ಹೇಳದೆ ?

ಚಂದ್ರು— ಅಪ್ಪಣೆ ತೊಗೊಳ್ಳದೆ–?

ಸೀನಿ – ದೊಡ್ಡಮ್ಮಾವ್ರು ಕೇಳಿದರಂತೆ, ಅವರಿಗೆ ಹೇಳಬೇಕಾ ಅಂತ–

ಇತರರು—ಹುಂ ? ಹುಂ ?

ಸೀನಿ – "ಅವರಿಗೇನು ಹೇಳುವುದು ?" ಅನ್ನುತ್ತಾ ಹೊರಟು ಹೋದರಂತೆ.

ಪುಟ್ಟ— ಹೋಗೋ ಆಚೆಗೆ.

ಭೀಮು – ಅಯ್ಯೋ, ಅವನ ಮೇಲೆ ಯಾಕೆ ಬೀಳುತ್ತೀರಿ ? ಅದು ಹೀಗೆ, ಜೋಯಿಸರೇ, ಲಕ್ಷಮ್ಮನವರಿಗೆ ಭಕ್ತಿ, ಗೌರವ ಇಲ್ಲ ಅಂತ ಅಲ್ಲ– ಹೆಚ್ಚು ಸಲಿಗೆಯಿಂದ–ಹೆಚ್ಚು ಪ್ರೀತಿಯಿಂದ–

ಪುಟ್ಟ—ಸುಮ್ಮನಿರೋ, ತಿಪ್ಪೆಸಾರಿಸಬೇಡ....ಇಷ್ಟು ವರ್ಷಕ್ಕೆ–ಎಲ್ಲರ ಮುಂದೆ–

ಭೀಮು—"ಎಲ್ಲರು" ಅಂದರೆ ನಾವು ಮನೆಯವರು ತಾನೇ ? ಬಿಡಿ. ಪರವಾಗಿಲ್ಲ....ಈಗ, ಮಾವನವರೇ, ತಮ್ಮ ಸರದಿ.

ರಾಮು—ನಾನು....(ಸುಳ್ಳು ನಗು ತಂದು) ನನಗೇನು...ಅಲ್ಲ....ಅವಳು ಒಳಗೆ ಏನು ಕೆಲಸದಲ್ಲಿರುತ್ತಾಳೋ–

ಭೀಮು—ಸೀನಿ, ಅತ್ತೆಯವರು ಏನು ಮಾಡುತ್ತಿದ್ದಾರೋ ?

ಸೀನಿ—ಎಲ್ಲಾ ಚಾಪೆ ಹಾಸಿ, ಕೂತುಕೊಂಡು ಅಡಿಕೆ ಎಲೆ ಹಾಕಿಕೊಳ್ಳುತ್ತಿದ್ದಾರೆ.

ಭೀಮು—ಸೀನಿ, ಹೋಗಿ –

ರಾಮು—ಏನೂ–ಅವಳಿಗೆ –

ಸೀನಿ—ಗೊತ್ತು, ಹೇಳುತ್ತೇನೆ. (ಹೋಗುವನು)

ರಾಮು - ಅಡಿಕೆಎಲೆ ಹಾಕಿಕೊಳ್ಳುತ್ತಿದ್ದರೂ, ಜವಾಬ್ದಾರಿ....ಮಧ್ಯಾಹ್ನದ ಕಾಫಿಗೆ ಪುಡಿ ಇದೆಯೋ, ಹಾಲಿದೆಯೋ-(ಹಿಂತಿರುಗಿ ಬಂದ ಸೀನಿಗೆ) ಆಂ?

ಸೀನಿ—ಅವರು....ಅವರು....

ಭೀಮು—ಏನೋ ?

ರಾಮು—ಉಂ- ?

ಸೀನಿ—ಅವರು... ಅವರು....ಮತ್ತೆ...."ಅವರಿಗೆ ಬೇರೆ ಕೆಲಸ ಇಲ್ಲ, ಯಾಕೆ ಅಂತ ಕೇಳಿಕೊಂಡು ಬಾ" ಅಂದರು.

ಪುಟ್ಟ—ರಾವ್‌ಸಾಹೇಬರೇ-

ರಾಮು—ಆಂ ? ಹಾ....ಹಾಗಂದಳೇನೋ ?-ನಾನೇ ಹೋಗಿ-

ಭೀಮು—ಉಹುಹು ಹಾಗೆ ಹೋಗಿ ಕರೆದುಕೊಂಡು ಬಂದರೆ-ಅದು ಪ್ರಯೋಗ ಅಲ್ಲ.... ಈಗ ಚಂದ್ರೂ-ನೀನು-

ಚಂದ್ರು—ಹೋಗೋ, ಇವಲ್ಲಾ ನಾನ್ಸೆನ್ಸ್....ಲೋ, ಸೀನಿ, ಶಾಂತೂಗೆ ಸ್ವಲ್ಪ ಬರಬೇಕು ಅಂತ ಹೇಳೋ-

ಭೀಮು—ಸ್ವಲ್ಪವಲ್ಲ, ಪೂರ್ತಿಯೇ ಬರಬೇಕಂತೆ ಅಂತ ಹೇಳೋ. (ಸೀನಿ ಹೋಗುತ್ತಿರಲು) ಏನು ಗಂಡಂದಿರೋ-ಸ್ವಲ್ಪವೂ ಕಾಂಫಿಡೆನ್ಸೇ ಇಲ್ಲವಲ್ಲೋ-

ಚಂದ್ರು—(ಬಂದ ಸೀನಿಗೆ) ಬರಲಿಲ್ಲವೇನೋ ?

ಸೀನಿ—"ಅವರನ್ನೇ ಇಲ್ಲಿ ಬರೋಕ್ಕೆ ಹೇಳು" ಅಂದರು.

ಚಂದ್ರು—ಆಂ ? (ಎದ್ದು ಹೊರಡಲು)

ಭೀಮು—(ಹಿಡಿದು) ಕೂತುಕೊಳ್ಳೋ, ಕೂತುಕೊಳ್ಳೊ, ಅಲ್ಲಿ ನಿನ್ನ ಆಟ ಏನೂ ನಡೆಯೋಲ್ಲ-ಅಕ್ಕ ಇರುತ್ತಾಳೆ ಪಕ್ಕದಲ್ಲಿ-ತಂಗಿಯನ್ನ ಬಿಟ್ಟುಕೊಡೋಲ್ಲ-ಕೂತುಕೋ, ಬಾ....ಸೀನಿ, ನೀನಿನ್ನು ಹೋಗಬಹುದು-

ಇತರರು—ನೀನು....ನೀನು....ನೀವು-

ಭೀಮು—ನಾನು ಕರೆಯುತ್ತೇನೆ. ನೋಡಿ···· (ಎದ್ದು ನಿಂತು) ಸರೋಜಾ !

ಪುಟ್ಟಿ—ಅವಳು ಯಾಕೆ ಬರಬಾರದು ?

ರಾಮು—ಅಮ್ಮನ ಮಗಳು !

ಚಂದ್ರು—ಇನ್ನೂ ಏನಾದರೂ –

ಸರು—(ಓಡಿ ಬಂದು) ಕೂಗಿದಿರಾ ?

(ಭೀಮು ಅವಳ ಕಡೆ ತಿರುಗದೆ ಇತರರನ್ನು ನೋಡಿ ನಗುತ್ತಿರಲು) ಯಾಕೆಂದ್ರೀ ? ಏನಾಯಿತು ? ನೀವು ಕೂಗಿದಿರೀ –

ಭೀಮು—(ಇತರರಿಗೆ) ಏನನ್ನುತ್ತೀರಿ ?

ಪುಟ್ಟಿ—ಏನನ್ನುವುದೋ ? .... (ಸೀತಮ್ಮ, ಶಾಂತು ಬಾಗಿಲಲ್ಲಿ ಕಾಣಿಸಿ ಕೊಳ್ಳಲು) ಏನಮ್ಮಾ, ಸೀತಮ್ಮ, ಇದೇ ಇದೇ ನಾನವತ್ತು ಅಂದದ್ದು. "ಮದುವೆ ಆಗಲಿ. ನಮ್ಮ ಸರೋಜನ ಮುಂದೆ ಯಾರೂ ಸೈ ಅನ್ನಿಸಿಕೊಳ್ಳ ಲಾರರು" ಅಂತ ನಾನು ಅಂದಿರಲಿಲ್ಲ ?.... ಲೋ, ಭೀಮು... ಗಂಡ ಅಂದರೆ ನೀನು ಕಾಣೋ ಗಂಡ, ಬಹದ್ದೂರ್ ಗಂಡ !

ಅಂಕದ ತೆರೆ